ಸಂಕಲನ

೪

ಸಂಪಾದಕ

ಸಿದ್ಧಲಿಂಗ ಪಟ್ಟಣಶೆಟ್ಟಿ

ಸಂಕಲನ

ದ್ವೈಮಾಸಿಕ ಸಾಹಿತ್ಯ ಸಂಕಲನ - ೪

೧೪ ಜುಲಾಯಿ ೨೦೦೨

ಸಂಪಾದಕ

ಸಿದ್ಧಲಿಂಗ ಪಟ್ಟಣಶೆಟ್ಟಿ

ಸಂಕಲನ ಪ್ರಕಾಶನ

ಬೆಳಗು, ಆನಂದಾಶ್ರಮ ರಸ್ತೆ

ಗದಗ - ೫೮೨ ೧೦೧

ಸಂಕಲನ : ಸಂಪುಟ ೧, ಸಂಚಿಕೆ ೪ : ೧೪ ಜುಲಾಯಿ ೨೦೦೨

ಸಂಪಾದಕ : **ಡಾ. ಸಿದ್ಧಲಿಂಗ ಪಟ್ಟಣಶೆಟ್ಟಿ**
ಹೂಮನೆ, ಶ್ರೀದೇವಿನಗರ, ವಿದ್ಯಾಗಿರಿ, ಧಾರವಾಡ - ೫೮೦ ೦೦೪
ದೂರವಾಣಿ : ೦೮೩೬ – ೪೬೨೭೧೮
E-mail : spattanshetti@indiatimes.com

ಪ್ರಕಾಶನ : **ಸಂಕಲನ ಪ್ರಕಾಶನ**
ಬೆಳಗು, ಆನಂದಾಶ್ರಮ ರಸ್ತೆ, ಗದಗ - ೫೮೨ ೧೦೧
ದೂರವಾಣಿ : ೦೮೩೬ – ೫೩೫೫೨೨

•

ಸಂಕಲನದಲ್ಲಿ ಪ್ರಕಟವಾದ ಲೇಖನಗಳಲ್ಲಿ ವ್ಯಕ್ತವಾದ
ಅಭಿಪ್ರಾಯಗಳ ಹೊಣೆ, ಹಕ್ಕುಗಳು ಆಯಾ ಲೇಖಕರವು.

•

ವರ್ಷ ೨೦೦೨ ರಲ್ಲಿ ಪ್ರಕಟವಾಗುವ **ಸಂಕಲನ**ದ ಮೊದಲ ಸಂಪುಟದ
ಆರು ಸಂಚಿಕೆಗಳ ಒಟ್ಟು ಬೆಲೆ ರೂ. ೧೫೦/-
ತ್ರೈವಾರ್ಷಿಕ ಚಂದಾ ರೂ. ೪೦೦/-
ಕೊಳ್ಳಬಯಸುವವರು ವರ್ಷದ ಆರೂ ಸಂಚಿಕೆಗಳ ಒಟ್ಟು ಮೊತ್ತ ಕೊಡುವುದು.
ಬಿಡಿ ಪ್ರತಿಗಳನ್ನು ಕೊಡಲಾಗುವುದಿಲ್ಲ.
ವಾರ್ಷಿಕ ಚಂದಾ ಹಣವನ್ನು ಸಂಪಾದಕರು ಅಥವಾ ಪ್ರಕಾಶಕರ ಕೈಯಲ್ಲಿ ನೇರವಾಗಿ
ನಗದಾಗಿ ನೀಡಿ ರಸೀದಿ ಪಡೆಯುವುದು. ಅಥವಾ
ಮನಿಆರ್ಡರ್ ಇಲ್ಲವೆ ಕ್ರಾಸ್ ಮಾಡಿದ ಡಿ. ಡಿ. ಮೂಲಕ ಮಾತ್ರ
'ಸಂಕಲನ ಪ್ರಕಾಶನ, ಗದಗ' ಈ ಹೆಸರಿಗೆ ಪ್ರಕಾಶನದ ವಿಳಾಸಕ್ಕೆ ಕಳಿಸುವುದು.
ಚೆಕ್ ಸ್ವೀಕರಿಸಲಾಗುವುದಿಲ್ಲ.

•

SANKALANA : A Kannada Bimonthly Literary Magazine

Volume 1, Issue 4 : 14 July 2002

Subscription for six issues of year 2002 : Rs. 150/-
For three years : Rs. 400/-

Editor : **Dr. Siddhaling Pattanshetti**
Hoomane, Shridevinagar, Vidyagiri, DHARWAD - 580 004
Tel. : 0836 - 462718
E-mail : spattanshetti@indiatimes.com

Publication : **Sankalana Prakashana**
Belagu, Anandashram Road, GADAG - 582 101
Tel. : 0836 - 535522

DTP by BG graphics, 1st Main, 1st Cross, Vijayanagar, Dharwad - 3

Printed by Saraswati Offset Printers, Dharwad - 1

ಸಂಪಾದಕರ ಮಾತು

ನಮ್ಮ ಜನರು, ಮುಖ್ಯವಾಗಿ ಸಾಹಿತಿಗಳು, ಕಲಾವಿದರು ಗುಣಗ್ರಾಹಿಗಳು. ಕನ್ನಡ ನಾಡಿನಲ್ಲಿ ಮೊದಲಿನಿಂದಲೂ ಸ್ವಲ್ಪ ಕಾದು ನೋಡುವ ಸ್ವಭಾವದ ಜನರಿರುವುದರಿಂದ ಒಮ್ಮೊಮ್ಮೆ ಅವರೊಳಗಿನ ಈ ಗುಣಗ್ರಾಹಿತ್ವ ಸ್ಪಷ್ಟವಾಗಿ, ಬಾಹ್ಯವಾಗಿ ಗೋಚರವಾಗುವುದಿಲ್ಲ. ಈ ಕಾರಣದಿಂದಾಗಿ ಅವರು ಸ್ವಲ್ಪ ಮಟ್ಟಿಗೆ ಅಲಕ್ಷಿತರಾಗುತ್ತಾರೆ, ಅವರ ಗುಣದ ಬಗ್ಗೆ ಆಗಬೇಕಾದ ಪ್ರಶಂಸೆ ಆಗುವುದಿಲ್ಲ, ಹಾಗೂ ಅದರ ಸತ್ಪರಿಣಾಮ ಸಕಾಲದಲ್ಲಿ ಸಂಬಂಧಪಟ್ಟವರಿಗೆ ತಲುಪುವುದಿಲ್ಲ. ಇಷ್ಟೆಲ್ಲ ಇದ್ದರೂ ಗುಣಗ್ರಹಣದ ಪರಿಣಾಮ ದೀರ್ಘಕಾಲದ ವರೆಗೆ ಮುಂದುವರಿಯುವುದರಿಂದ ಈ ನಿಧಾನಗತಿ ಚಿಂತ್ಯವಲ್ಲ, ಬೇಸರಪಟ್ಟುಕೊಳ್ಳುವಂಥದಲ್ಲ; ಅದಕ್ಕೆ ಸ್ವಲ್ಪ ಪ್ರೀತಿಮಿಶ್ರಿತ ಉಠಾಣಿಕೆ ಸಿಕ್ಕಬೇಕು, ಅಷ್ಟೆ.

ಸಂಕಲನ ಪ್ರಕಟವಾಗತೊಡಗಿ ಈಗ ೫ - ೬ ತಿಂಗಳು ಕಳೆಯುವಷ್ಟರಲ್ಲಿಯೇ ನಮ್ಮ ಲೇಖಕಮಿತ್ರರು ಮತ್ತು ಸಾಹಿತ್ಯಾಸಕ್ತ ಆತ್ಮೀಯರು ತೋರಿದ ಪ್ರೀತಿ ನನ್ನ ಉತ್ಸಾಹ ಹೆಚ್ಚಿಸಿದೆ. ಚಂದಾದಾರರಾಗಬಹುದಾದ ಎಲ್ಲರನ್ನೂ ನಾನು ಕಂಡು, ಅಥವಾ ಪತ್ರ ಬರೆದು ಇನ್ನೂ ಸಂಪರ್ಕಿಸುವುದಾಗಿಲ್ಲ, ಅದಕ್ಕೆ ನನಗೆ ವೇಳೆ ಸಾಲದಾಗಿದೆ. ಆದರೆ **ಸಂಕಲನ**ವನ್ನು ನೋಡಿದ, ಆ ಬಗ್ಗೆ ಕೇಳಿದ ಮಿತ್ರರು ತಾವಾಗಿ ಪತ್ರ ಬರೆದು ಪತ್ರಿಕೆ ತರಿಸಿಕೊಂಡಿದ್ದಾರೆ; ತಮ್ಮ ಒಳ್ಳೆಯ ಬರಹಗಳನ್ನು ನನಗೆ ಕಳಿಸಿದ್ದಾರೆ. ಬಹುಕಾಲದಿಂದ ನಮ್ಮಲ್ಲಿ ಲೇಖಕರ ಕೊರತೆ ಇದೆ ಎಂದು ಭಾವಿಸಿದ್ದೆ, ಆದರೆ ಈಗ ನನಗೆ ಬಂದ ವಿವಿಧ ರೀತಿಯ, ವಿವಿಧ ವಿಷಯಗಳಿಗೆ ಸಂಬಂಧಪಟ್ಟ ಲೇಖನಗಳನ್ನು ನೋಡಿದರೆ ಅದು ಸರಿಯಲ್ಲ ಎನಿಸಿದೆ. ಆ ಲೇಖನಗಳನ್ನು ಈಗ ನಾನು ಹೊಂದಿಸಿಟ್ಟುಕೊಂಡಿದ್ದೇನೆ. ಅವು ೧೪ ಜನೆವರಿ ೨೦೦೩ ರಲ್ಲಿ ಪ್ರಕಟವಾಗಬೇಕಾಗಿರುವ ೨ನೇ ವರ್ಷದ ೧ನೇ ಸಂಚಿಕೆ **ಸಂಕಲನ - ೭** ರ ಪೂರ್ಣಸಾಮಗ್ರಿಯಷ್ಟು ಸಂಗ್ರಹವಾಗಿವೆ. ಹೀಗೆ ಅತ್ಯಂತ ಪ್ರತಿಷ್ಠಿತ ವಿದ್ವಾಂಸರು, ವಿಮರ್ಶಕರು, ಕವಿಗಳು ತಮ್ಮ ಬರಹ ಮುಂಗಡವಾಗಿ ಕಳಿಸಿ, ನನ್ನ ಆತ್ಮವಿಶ್ವಾಸ ಹೆಚ್ಚಿಸಿದ್ದಾರೆ.

ಎಷ್ಟೋ ದಿನ - ವರ್ಷಗಳಿಂದ ತಮ್ಮ ಬರವಣಿಗೆಯನ್ನು ಸ್ವಲ್ಪ ಮಟ್ಟಿಗೆ ನಿಲ್ಲಿಸಿದ್ದ ಅನೇಕ ಮಿತ್ರರು ಈಗ ಮತ್ತೆ ಬರವಣಿಗೆಗೆ ತೊಡಗಿದ್ದಾರೆ. ಅಂಥವರ ಲೇಖನಗಳು **ಸಂಕಲನ**ದಲ್ಲಿ ಪ್ರಕಟವಾಗುತ್ತಿವೆ. ಆರಂಭದಲ್ಲಿ ನನ್ನನ್ನು ಕಾದು ನೋಡುವ ವಿಚಾರದಿಂದ ಸುಮ್ಮನಿದ್ದ ಕೆಲವು ಮಿತ್ರರು ಮತ್ತೆ ತಾವಾಗಿ ವೈವಿಧ್ಯಮಯ ಲೇಖನಗಳನ್ನು ಕಳಿಸಿ ಸಂಕಲನದ ಗೌರವ ಗರಿಮೆ ಹೆಚ್ಚಿಸುತ್ತಿದ್ದಾರೆ. ಅಂಥವರಿಗೆಲ್ಲ ನಾನು ಕೃತಜ್ಞನಾಗಿದ್ದೇನೆ.

ಲೇಖಕ ಮಿತ್ರರ ಸಹಕಾರದಿಂದಾಗಿಯೇ, ಈಗ ಒಂದು ಸಂಚಿಕೆಯಲ್ಲಿ ನನ್ನ ಸಂಪಾದಕೀಯ ಮಾತಿನಲ್ಲಿ ಅದು ಪ್ರಕಟವಾಗಬೇಕಾಗಿರುವ ತಿಂಗಳದ ಮೊದಲ ತಾರೀಖನ್ನು ನಮೂದಿಸಿದ್ದರೂ ವಾಸ್ತವವಾಗಿ ಅದಕ್ಕಿಂತ ಒಂದು ತಿಂಗಳು ಮೊದಲೇ ಅದು ಪೂರ್ಣ ಸಿದ್ಧಗೊಂಡು ಅಚ್ಚಿನಮನೆ ಸೇರಿರುತ್ತದೆ. ಈ ಕಾರಣದಿಂದಾಗಿ ಲೇಖಕ ಮಿತ್ರರು **ಸಂಕಲನ**ಕ್ಕೆ ಇನ್ನು ಮುಂದೆ ಕಳಿಸುವ ಲೇಖನಗಳು ಸ್ವೀಕೃತವಾದಾಗ ಅವು ಕನಿಷ್ಠ ೩ - ೪ ಸಂಚಿಕೆಗಳ ನಂತರ ಪ್ರಕಟವಾಗುವವು. ಹೀಗೆ ನನಗಿರುವ ಈ ರೀತಿಯ ಒತ್ತಡ ಹಾಗೂ ನನ್ನ ಕೆಲಸದ ರೀತಿಯನ್ನು ಅರ್ಥ ಮಾಡಿಕೊಂಡು ಸಹಕರಿಸಬೇಕೆಂದು ಕೋರುವೆ. ಇಷ್ಟೆಲ್ಲ ಗುಣಸಂಗ್ರಹವಾಗಿದ್ದರೂ ಧನಸಂಗ್ರಹಕ್ಕೆ ನೆರವಾಗುವ ಚಂದಾದಾರರ ಸಂಖ್ಯೆ ಇನ್ನೂ ೫೦೦ ರ ಅಂಚಿನಲ್ಲೇ ನಿಂತಿದೆ. ನಮ್ಮವರು ನಿಧಾನಸ್ನೇಹಿಗಳು, ನಿಧಾನಪ್ರೇಮಿಗಳು. ಚಿಂತೆಯಿಲ್ಲ.

ಸಿದ್ಧಲಿಂಗ ಪಟ್ಟಣಶೆಟ್ಟಿ

೧ ಜುಲಾಯಿ, ೨೦೦೨
ಹೂಮನೆ, ಧಾರವಾಡ - ೪

ಪರಿವಿಡಿ

ಸಂಪಾದಕರ ಮಾತು / ೩

೧. ವಸ್ತಿ : ಹೊಸ ಕಾದಂಬರಿ - ಪ್ರವೇಶ ಪುಟಗಳು : ಕುಂ. ವೀರಭದ್ರಪ್ಪ / ೫ - ೧೧

೨. ನಾನೇನಾ : ಕವಿತೆ - ೧ : ಸಿ. ಎಂ. ನರಸಿಂಹಮೂರ್ತಿ / ೧೧

೩. ಶುನಕಗಳ ಹಂದಿ ಶಿಕಾರಿ : ಸತ್ಯ ಪ್ರಬಂಧ : ಈರಪ್ಪ ಎಂ. ಕಂಬಳಿ / ೧೨ - ೧೪

೪. ಬೆಳ್ಳಕ್ಕಿಗಳ ಲೋಕದಲ್ಲಿ (ಕತೆ : ರಾಘವೇಂದ್ರ ಪಾಟೀಲ) :
ನಾಟಕ : ಶಿರೀಷ ಜೋಶಿ / ೧೫ - ೩೬

೫. ಪ್ರೀತಿ ಅಂದ್ರೆ : ಕವಿತೆ - ೨ : ಸಂತೇಬೆನ್ನೂರು ಫೈಜ್ನಟ್ರಾಜ್ / ೩೬

೬. ಭರತೋದಯ : ಮಕ್ಕಳಿಗಾಗಿ ಗೀತರೂಪಕ : ಎಚ್. ಎಂ. ನಾಗರಾಜರಾವ್ / ೩೭ - ೩೯

೭. ಭಾರತೀಯ ಸಂಸ್ಕೃತಿ : ಚಿಂತನೆ : ಮನು ಬಳಿಗಾರ್ / ೪೦ - ೪೭

೮. ಸಾಹಿತ್ಯ ಭಾಷೆ : ಭಾಷಾನುಭಾವ : ತಾಳ್ತಜೆ ವಸಂತಕುಮಾರ/ ೪೭ - ೫೪

೯. ಅನುಪಮಾ ನಿರಂಜನ ಅವರ ' ನೆನಪು : ಸಿಹಿ - ಕಹಿ '
ವಿಹಂಗಮ ದೃಷ್ಟಿ - ೧ : ಶಿವಶಂಕರ ಹಿರೇಮಠ / ೫೪ - ೫೮
ವಿಹಂಗಮ ದೃಷ್ಟಿ - ೨ : ಅಪ್ಪಾಸಾಹೇಬ ಸನದಿ / ೫೮ - ೬೨

೧೦. ಪರ್ಯಾಯ ಸಮ್ಮೇಳನ : ಉತ್ಖನನ : ದಿವಸ್ಪತಿ ಹೆಗಡೆ / ೬೩ - ೬೪

೧೧. ಸ್ನಾನ : ಕವಿತೆ - ೩ : ಎಫ್. ಅಸದುಲ್ಲಾ ಬೇಗ್ / ೬೫

೧೨. ನಿರಂತರ : ಕವಿತೆ - ೪ : ರಾಜು ಹೆಗಡೆ / ೬೫ - ೬೬

೧೩. ಕೊಲ್ಲುವರು ಜೋಕೆ : ಕವಿತೆ - ೫ : ಸುಮಿತ್ರಾ ದುಂಡಪ್ಪ ಕುಂಬಾರ / ೬೬

೧೪. ನಿಷ್ಠಿಯ ಮೂರು ವಚನಗಳು : ಕವಿತೆ - ೬ : ನಿಷ್ಠಿ ರುದ್ರಪ್ಪ / ೬೭

೧೫. ವಸಂತ : ಮರಾಠೀ ಲಲಿತ ಕತೆ : ಪಿ. ಜಿ. ಕುಲಕರ್ಣಿ / ಕೃ. ಶಿ. ಹೆಗಡೆ / ೬೮ - ೭೩

೧೬. ಹನಿ ಹನಿ ಹನಿ : ಕವಿತೆ - ೭ : ಮ. ಕೃ. ಮೇಗಾಡಿ / ೭೩

೧೭. ಪುಸ್ತಕ ಪರಿಶೀಲನೆ
೧. ಮಾಸ್ಟರ್ ಬಿಲ್ಡರ್ : ರಾಮಚಂದ್ರ ದೇವ / ೭೪ - ೭೫
೨. ನಮ್ಮ ಹೆಮ್ಮೆಯ ಸಾಹಿತಿ ಯು. ಆರ್. ಅನಂತಮೂರ್ತಿ : ಸಾಬ / ೭೫
೩. ನೆನೆದದ್ದು ಹೆಚ್ಚಾಗಿ : ಜಿ. ಕೆ. ರವೀಂದ್ರಕುಮಾರ್ / ೭೬ - ೭೭
೪. ಪ್ರಿನ್ಸಿಪಲ್ ಪರಶುರಾಂ : ಯತ್ನಳ್ಳಿ ಮಂಜು / ೭೭

' ಸಂಕಲನ ' : ಅನಿಸಿಕೆ, ಅಭಿಪ್ರಾಯ, ಪ್ರತಿಕ್ರಿಯೆ, ವಿಮರ್ಶೆ ಇತ್ಯಾದಿ / ೭೮

ಸಂಕಲನ ಸ್ವೀಕರಿಸಿದ ಪುಸ್ತಕಗಳು / ೭೯

ಕಡೀ ಪುಟ : ಸಿದ್ಧಲಿಂಗ ಪಟ್ಟಣಶೆಟ್ಟಿ / ೮೦

ಕುಂ. ವೀರಭದ್ರಪ್ಪ

ಗುಡಿ ಹಿಂದಲ ಮೂಳೆ ಓಬಯ್ಯನ ಮನಸೊಳಗೆ ಹೆಂಗೆಂಗೋ ಆಗತೊಡಗಿತು. ಮೂಡಬಾರದ ಚಿತ್ರ ವಿಚಿತ್ರಾರಗಳು ಮೂಡತೊಡಗಿದವು. ಕಾಣಬಾರದ ತರಾವರಿ ಮಂದಿ ಕಾಣತೊಡಗಿದರು. ಮನವೆಂಬ ಯಿಸ್ತಾರವಾದ ಜಗುಲಿಯ ಮ್ಯಾಲೆ ಗುಂಪು ಗುಂಪಾಗಿ ಕೂತು ಮಾತಾಡಲಾರಂಭಿಸಿದರು. ತನ್ನ ದೇಹವೆಂಭೋ ದೇಹವು ಗಿರಿ ಗುಡ್ಡ ಗಹ್ವರಗಳಲ್ಲಿ ತಾನೇ ತಾನಾಗಿ ಸುಳಿದಾಡುತ್ತಿರುವಂತೆ; ಹೆಜ್ಜೆ ಹೆಜ್ಜೆಗೊಂದೊಂದರಂತೆ ಯದುರಾದ ಗಂಟೆ ಜಾಗಟೆಗಳನ್ನು ಭಾರಿಸುತ್ತಿರುವಂತೆ; ಶಂಖ; ಕಹಳೆ ವೂದುತ್ತಿರುವಂತೆ; ಕತ್ತಿ; ಕಠಾರಿ ತಿರುವುತ್ತಿರುವಂತೆ; ಕಾಲ ಬೆರಳುಗಳಿಂದ ಹೆಬ್ಬಂಡೆಗಳನ್ನು ವುರುಳಿಸುತ್ತಿರುವಂತೆ; ಮುಷ್ಠಿಯಿಂದ ನಿಡುಗಲ್ಲುಗಳನ್ನು ಕುಟ್ಟಿ ಪುಡು ಪುಡಿ ಮಾಡುತ್ತಿರುವಂತೆ ಭಾಸವಾಗತೊಡಗಿತು. ತಾನು ಬಿಡುತ್ತಿರುವ ವಂದೊಂದು ವುಸುರು ಬಿರುಗಾಳಿ, ಸುಂಟರಗಾಳಿಗಳಾಗಿ ಸಂಚರಿಸುತ್ತಿರುವಂತೆ; ತಾನು ಯಿಡುತ್ತಿರುವ ವಂದೊಂದು ಹೆಜ್ಜೆಗೆ ಭೂಮ್ತಾಯಿ ಗಡ ಗಡ ನಡುಗುತ್ತಿರುವಂತೆ; ಕಾಗೆ, ಗುಬ್ಬಿ, ಹದ್ದುರಣಹದ್ದುಗಳೇ ಮೊದಲಾದ ಪಕ್ಷಿಗಳು ಆಕಾಶದ ತುಂಬ ಅಂಡಾವರನವಾಗಿರುವಂತೆ; ಹುಲಿ ಸಿಂಹ ಕರಡಿ ಕಿರುಬಗಳೇ ಮೊದಲಾದ ಪ್ರಾಣಿಗಳು ದಿಕ್ಕಾಪಾಲಾಗಿ ವೋಡುತ್ತಿರುವಂತೆ ಭಾಸವಾಗತೊಡಗಿತು.

ತನ್ನ ಕಣ್ಣುಗಳು ತನ್ನ ಸ್ವಾಧೀನದಲ್ಲಿಲ್ಲವಲ್ಲ; ತನ್ನ ಕಿವಿಗಳು ತನ್ನ ಸ್ವಾಧೀನದಲ್ಲಿಲ್ಲವಲ್ಲ, ತನ್ನ ಬಾಯಿ ತನ್ನ ಸ್ವಾಧೀನದಲ್ಲಿಲ್ಲವಲ್ಲ, ತನ್ನ ಮುಗು ತನ್ನ ಸ್ವಾಧೀನದಲ್ಲಿಲ್ಲವಲ್ಲ, ತನ್ನು ಕಯ್ಯಿ ಕಾಲುಗಳು ತನ್ನ ಸ್ವಾಧೀನದಲ್ಲಿಲ್ಲವಲ್ಲ, ತನ್ನ ಸರೀರ ಯಂಬುದು ತನ್ನ ಸ್ವಾಧೀನದಲ್ಲಿಲ್ಲವಲ್ಲ, ತನ್ನ ಮನಸ್ಸು ಯಂಬುದು ತನ್ನ ಸ್ವಾಧೀನದಲ್ಲಿಲ್ಲವಲ್ಲ, ತಾನು ಸವಾರಿ ಮಾಡುತ್ತಿರುವ ಯೇಳು ಮುಖದ ಪ್ರಾಣಿಯು ತನ್ನ ಸ್ವಾಧೀನದಲ್ಲಿಲ್ಲವಲ್ಲ, ತಾನು ಲೀಲಾಯಿನೋದ ಮಾಡುತ್ತಿರುವ ಲೋಕವು ತನ್ನ ಸ್ವಾಧೀನದಲ್ಲಿಲ್ಲವಲ್ಲ, ತಾನು ನೋಡುತ್ತಿರುವ ನೋಟವು ತನ್ನ ಸ್ವಾಧೀನದಲ್ಲಿಲ್ಲವಲ್ಲ, ತಾನು ಆಡುತ್ತಿರುವ ಮಾತುಗಳು ತನ್ನ ಸ್ವಾಧೀನದಲ್ಲಿಲ್ಲವಲ್ಲ, ತಾನು ನಡೆಯುತ್ತಿರುವ ರೀತಿಗೆ ದಿಕ್ಕುದೆಸೆಗಳಿಲ್ಲವಲ್ಲ, ತಾನು ಬದುಕುತ್ತಿರುವ ಬದುಕು ಯಂಬುದು ಗುರುತು ಸಿಗದಂಗಾಯ್ತಲ್ಲ ಯಂದು ಮುಂತಾಗಿ ಹಲುಬಿಕಂತ ಓಬಯ್ಯನು ತನ್ನ ಸರೀರದಿಂದ ತಾನು ಹೊರಗಡೀಕೆ ಬಂದು ಮಿಕಿ ಮಿಕಿ ನೋಡಿಕೊಳ್ಳುತ್ತಾನೆ..

ಅದು ತನ್ನ ಸರೀರವಲ್ಲ.

ತನ್ನ ಸರೀರದ ಕಯ್ಯಿ ಕಾಲುಗಳು ತಾನೇ ತಾನಾಗಿ ಬೆಳೆಯುತ್ತಿರುವುದ ಕಂಡು ಕಿವಿಗಳು ಮಾರು ಮಾರಗಲವಾಗುತ್ತಿರುವುದ ಕಂಡು, ತನ್ನ ಕಣ್ಣುಗಳೊಳಗೆ ಸಾವುರ, ಸಾವುರ ದೀವಟಿಗಳ ದಿಬ್ಬಣ ಹೊಂಟಿರುವುದ ಕಂಡು, ತನ್ನ ಹುಬ್ಬುಗಳು ಬೇಲಿ ಪೊದೆಗಳಾಗುತ್ತಿರುವುದ ಕಂಡು, ತನ್ನ ಬಾಯೆಂಬುದು ಬ್ರುಹತ್ ಕೂಪವಾಗುತ್ತಿರುವುದ ಕಂಡು, ತುಟಿ ಸಂದುಗಳ ಲ್ಲೊಂದೊಂದು ಮಾರು ಮಾರುದ್ದ ಕ್ವಾರೆ ಹಲ್ಲುಗಳು ಮೂಡುತ್ತಿರುವುದ ಕಂಡು ತನ್ನೆದೆ ಭಾಗದಲ್ಲಿ ಗುಡ್ಡಗಾತುರದ ಮೊಲೆಗಳು ಮೂಡುತ್ತಿರುವುದ ಕಂಡು, ತನ್ನ ಕುಂಡಿಗಳೊಂದೊಂದು ಬಿಕ್ಕಿ ಮರಡಿ ದಿಬ್ಬವಾಗುತ್ತಿರುವುದ ಕಂಡು, ತನ್ನ ಹಣೆಭಾಗ ಯೋಜನದುದ್ದಗಲ ವಾಗುತ್ತಿರುವುದ ಕಂಡು, ಅದರ ನಟ್ಟನಡೂಕೆ ಯೇಳು ಮಾರಗಲದ ಕುಂಕುಮದ ಬೊಟ್ಟೊಂದು

ರಾರಾಜಿಸುತ್ತಿರುವುದ ಕಂಡು, ತನ್ನ ಮೀಸೆಗಳೇಳು ತೆಂಗಿನ ಮರದುದ್ದವಾಗುತ್ತಿರುವುದ ಕಂಡು, ತನ್ನ ಕೊರಳೊಳಗ ತರಾವರಿ ರುಂಡಗಳು ಪೋಣಿಸಿದ ಹಾರಗಳು..

ನೋಡುತ ನೋಡುತ ಬೆಕ್ಕಸ ಬೆರಗಾದ ಓಬಯ್ಯನು ತನ್ನ ಆ ಯಿರಾಟ್ ರೂಪಿ ಸೊರೂಪಿ ಸರೀರದೊಳಗಡೀಕೆ ತೂರಿಕೊಳ್ಳುವ ಯತ್ನವನು ವಂದರ ಯಿಂದೊಂದರಂತೆ ಮಾಡಿದನು. ಆದರೆ ಆ ಸರೀರದ ಪ್ರತಿ ಬೆಮರ ಕುಣಿಯೊಳಗೆ ಯಿಮುರಿದ್ದ ಅಗೋಚರ ಹಸ್ತಗಳು ತನ್ನ ಕತ್ತನ್ನು ಹಿಡಿದು ತಳ್ಳುತ್ತಿರುವಂಥ ಅನುಭವವಾಗುತ್ತಿರುವುದು. " ಯಾಕೆ ಸರೀರವೇ.. ನಾನು ನಿನ್ನೊಳಗಿರಲು ನಿನಗೆ ಪಸಂದಿಲ್ಲವೇನು; " ಯಂದಿವನು ಕೇಳಿದ್ದಕ್ಕೆ ಅರಮನೆಯೋಪಾದಿಯಲ್ಲಿ ನಿಗಿ ನಿಗಿ ಹೊಳೆಯುತ್ತಿದ್ದಂಥ ಆ ಸರೀರವು–

" ಯಲ್ಲೈ ನರಮಾನ್ನವನೇ.. ಯೀ ಕ್ಷಣದಿಂದ ಯೀ ಸರೀರವು ಬಿಲ್‌ಕುಲ್ ನಿನ್ನದಲ್ಲ.. ಯಿದು ಸಕ್ತಿ ಸಾಂಭವಿಯ ವಾಸಾಸ್ಥಾನಕ್ಕೆ ಅಣಿಗೊಂಡಿದೆ ಕಣಪ್ಪಾ.. ಆಕೆಯು ತನ್ನ ಸೋದರಿಯರಾದ ಸುಂಕಲಿ, ಚವುಡಿ, ವುಡುಸಲಿ, ಮಾರಿ, ಮಸಂಕಿ, ಬೋರಿ, ಭರಮಿ, ಲಕ್ಕಿ, ಅಡವಿ ನಾಗಿ, ರಾಮಿಯರೊಂದಿಗೆ: ಹತ್ತು ಮಕ್ಕಳ ತಾಯವ್ವ, ಸಾಲು ಮರದವ್ವದವರೊಂದಿಗೆ: ವಬ್ಬೊಬ್ಬರು ಹುಲಿ: ಸಿಂಹ, ಚಿರತೆ, ಗಂಡ ಭೇರುಂಡಗಳ ಮೇಲೆ ಕೂಕಂಡು: ಕತ್ತಿ, ಖಡ್ಗ, ಕಠಾರಿ ಡಮರುಗ, ಗುರಾಣಿ, ಯೀಟಿ, ಭರ್ಚಿ, ತ್ರಿಶೂಲವೇ ಮೊದಲಾದ ಆಯುಧಗಳನ್ನು ಧರಿಸಿದವರಾಗಿ: ನವುಲು, ಕ್ರೌಂಚ, ಕಾಗೆ, ಗೂಗೆ ಗುಬ್ಬಿ ಕಬ್ಬಕ್ಕಿಯೇ ಮೊದಲಾದ ಕೋಟಿ ಕೋಟಿ ಪಕ್ಷಿಗಳನ್ನು ತಮ ತಮ್ಮ ತುರುಬುಗಳಲ್ಲಿ ಮುಡುದವರಾಗಿ: ಅತಳ ಯಿತಳ ಪಾತಾಳ ರಸಾತಳಗಳೇ ಮೊದಲಾದ ಲೋಕಗಳು ಗದಗುಡುವಂತೆ ಘರ್ಜಿಸುತ್ತಿರುವರಾಗಿ: ಭೂತ ಪ್ರೇತ ಪಿಚಾಚಿಗಳೇ ಮೊದಲಾದ ಸಾವುರ ಸಾವುರ ಕಂದಮ್ಮಗಳನ್ನು ತಮ ತಮ್ಮ ತೊಡೆಗಳ ಮ್ಯಾಲೆ ಕುಂಡರಿಸಿಕೊಂಡವರಾಗಿ, ಯಚ್ಚರ ಕಣಸು ಗಾಢ ನಿದ್ರೆ, ಸ್ರುಷ್ಟಿ, ಸ್ಥಿತಿ, ಲಯ, ಬಾಲ್ಯ, ಕೌಮಾರ್ಯ, ಯೌವನ, ಪ್ರೌಢ, ವಾರ್ಧಾಕ್ಯವೆಂಬಿತ್ಯಾದಿ ದಶಾವಸ್ಥೆಗಳನ್ನು ಮೀರಿದವರಾಗಿ, ಕುಲ, ಶೀಲ, ಧನ, ರೂಪ, ಯೌವನ, ಯಿದ್ಯೆ; ತಪಸ್ಸು, ರಾಜ್ಯವೆಂಬಿತ್ಯಾದಿ ಅಷ್ಟಮಧಗಳನ್ನು ಗೆದ್ದವರಾಗಿ ಬಿಜಯಂಗೈಯುತ್ತಿರುವಳು: ಅಗೋ ನೋಡಲ್ಲಿ" ಎಂದು ಬೊಟ್ಟು ಮಾಡಿ ಗುಡುಗಲು ನೋಡುತ್ತಾನೆ..

ನೈಲ ಮುಗುಲಿಗೇಕಾಗಿದ್ದಾಳೆ ತಾಯಿ,
ಭೂಮಿಗಾತುರದವಳಾಗಿದ್ದಾಳೆ ತಾಯಿ,
ವಂದೊಂದು ಹೆಜ್ಜೆಗೆ ಪಾತಾಳ ತಲುಪುತ್ತಾಳೆ ತಾಯಿ,
ನಾಲಗೆ ಮ್ಯಾಲ ಗುಡುಗು ಸಿಡಿಲುಗಳ ವಟ್ಟವಳೆ ತಾಯಿ,
ಮಿಂಚು ಕೋಲ್ಮಿಂಚುಗಳ ಕಣ್ಣುಗಳ ತಾಯಿ,
ಅಷ್ಟ ದಿಗ್ಗಜಗಳ ಕುಂಭಸ್ಥಳಗಳ ರಸಾಸ್ವಾದನೆ ಮಾಡುತಾಳೆ ತಾಯಿ,
ಕಾರೆಂಭೋ ಕಾರಿರುಳ ತಲೆ ತುಂಬ ಮುಡುದವಳೆ ತಾಯಿ,
ಇನ್ನೇನು ತಾಯಿ ಬಂದೇ ಬಿಟ್ಟಳು ತನ್ನ ಸರೀರದ ಹೆಬ್ಬಾಗಿಲ ಬಳಿಗೆ!

ಅಂಥಾ ತಾಯಿಯನ್ನು ಅದೇ ಮೊದಲ ಸಲ ನೋಡಿದವನಾದ ಓಬಯ್ಯನು ಬೆಕ್ಕಸ ಬೆರಗಾಗಿಬಿಟ್ಟನು. ಯದೆ ರ್ಝಲ್ಲಂತು, ಕಣ್ಣು ಕುಕ್ಕಿಧಂಗಾತು.. ವುಗುಳು ಗಂಟಲ ಹೊಸ್ತಿಲ ಬಳಿ ಮಡುಗಟ್ಟಿಧಂಗಾತು, ಕಯ್ಯು ಮಿಸುಕಾಡಿಸಲಾಗಲಿಲ್ಲ, ಕಾಲನ್ನೆತ್ತಿ ಯಿಡಲಿಕ್ಕಾಗಲಿಲ್ಲ, ಬ್ಯಾಡಾ ಅನ್ನಲಿಕ್ಕಾಗಲಿಲ್ಲ, ಬುಡು ಅನ್ನಲಿಕ್ಕಾಗಲಿಲ್ಲ: ಆದರೂ ಚೂರುಪಾರು ಸಕ್ತಿಯನ್ನು ನಾಲಿಗೆ ಮ್ಯಾಲೆಳೆದುಕೊಂಡು–

" ಹೊಕ್ಕಲ್ಲಿಕ್ಕೆ ನಿಂಗೆ ನನ ಸರೀರವೇ ಬೇಕಾಗಿತ್ತೇನ್ತಾಯಿ: ನನ್ನ ಯೀ ಸರೀರದೊಳಗೆ ಯೇನಂಥ ಸಿರಿ ಸೆಂಪತಯ್ತಂತ ಬಂದೆ ಯವ್ವಾ.. ಯಿದು ಮೊದ್ಲೇ ವಂದೊಂದು ಹೆಜ್ಜೆಗೆ ವಂದೊಂದು ಸಭುದ ಮಾಡತಯ್ತೆ; ಕುಂತರ ಯದ್ದೇಳಿಕ್ಕಾಗದೆ ಯದ್ದರೆ ಕುಂಡರಲಿಕ್ಕಾಗದೆ ಜೀವಾತುಮ ಯಂಬುದು ಯಿಲಯಿಲನ ವದ್ಯಾಡತಯ್ತೆ; ಯಿದರೊಳಗೆ ಮಾವುಸ ಗಿರ್ಧ ಮಣ ಯಿದ್ದರೆ ಮಸ್ತಾದೀತು, ರಕುತ ಪಾವೂವರೆ ಯಿದ್ದರೆ ಮಸ್ತಾದೀತು, ಯಿಂದ್ರಿಯಗಳು ಸುಮಾರಯ್ದಾವೆ: ಕಾಯಕಷ್ಟವ ಮಾಡೀ ಮಾಡೀ ಛಪ್ಪನ್ನಾರು ಕೀಲುಗಳು ಸವಕಂಡು ಹೋಗ್ಯಾವೆ. ಯಿಂಥ ಸರೀರದೊಳಗೆ ಯೇನು ಅಯಿಭೋಗ ಅಯ್ತಂತ ಬಂದೀಯವ್ವಾ.. ಹೆಂಗ ವಸ್ತಿ ಯಿರತೀಯವ್ವಾ; ಯಾವ ಸುಖ ಪಡುತೀಯವ್ವಾ; ಯೀ ನನ್ನ ಮಟ ಮಟ ಮಯ್ಲಿಗೆ ಸರೀರದೊಳಗ ನೀನೆಂಗ ಯೇರತೀಯವ್ವಾ.. ನೀನೆಂಗ ಯಿಳಿತೀಯವ್ವಾ.. ಯಿೂ ಪಾಪಿಷ್ಠಗೇಡಿ ಸರೀರವು ನಿಂಗೆ ತಕ್ಕುದ್ದಲ್ಲ. ನನ್ನ ಯಿೂ ಸರೀರದೊಳಗೆ ನಿಂಗೆ ವುಂಬಲಿಕೇನಯ್ತೆ ! ನಿಂಗೆ ಕುಡಿಯಲಿಕ್ಕೇನಯ್ತೆ ! ನಿಂಗ ವುಸುರಾಡಲಿಕ್ಕೇನಯ್ತೆ ! ಕುಂತರೆ ನೆಲ ಕುಸಿಯೋ ಹಂಗಯ್ತೆ ! ಯದ್ರೆ ನಿನ ಕಿರೀಟ ನನ್ನೆದೆ ಪಕ್ಕೆಲುವಿಗೆ ಅಟೆಯತಯ್ತೆ. ಯಿಂದಕೆ ಹೊಳ್ಳಂಗಿಲ್ಲ; ಮುಂದಕೆ ಬಾಗೋ ಹಂಗಿಲ್ಲ.. ಆಸರಿಕೆ ಬ್ಯಾಸರಿಕೀಗೆ ಮಯ್ನ ಲಟಲಟಾಂತ ಮುರಿಯೋ ಹಂಗಿಲ್ಲ; ಯಿದರೊಳಗೆ ಕ್ಯೋಳಾಕ್ಯೋನಿಲ್ಲ; ನೋಡಲಕ್ಯೋನೂ ಯಿಲ್ಲ; ಆಡಲಕ್ಯೋನಿಲ್ಲ; ಮಾಡಲಕ್ಯೋನಿಲ್ಲ.. ಮಯ್ನ ಚೆಲ್ಲಾಡಲಕ್ಯೋನೂ ಯಿಲ್ಲೆವ್ವಾ.. ವಂದು ಗಿಡಾಯಿಲ್ಲ.. ವಂದು ಮರಾಯಿಲ್ಲ.. ಯಲ್ಲಾ ಬಟ್ಟಂಬಯಲವ್ವಾ.. ಹಾಡಲಿಕರಗಿಣೆಯಿಲ್ಲ.. ಕುಣಿಯಲಿಕೊಂದೂ ನವುಲಿಲ್ಲವ್ವಾ.. ಹರಿಯಲಕ ಹಳ್ಳ ಯಿಲ್ಲವ್ವಾ.. ಧುಮುಕಲಿಕ ಝರಿ ಯಿಲ್ಲವ್ವಾ.. ಯೇರಲಿಕ ಗಿರಿ ಗುಡ್ಡಗಳಿಲ್ಲವ್ವಾ.. ಅಡಗಲಿಕ ಗವಿ ಗಂವರಗಳಿಲ್ಲವ್ವಾ.. ಯಿಂಥ ಸರೀರ ನಿಂಗೆ ವಸ್ತಿ ಮಾಡಲಿಕ ತಕ್ಕುದ್ದಲ್ಲ.. ನನ್ನ ಯೀ ಸೂತಕದ ಸರೀರದೊಳಗೆ ವಸ್ತಿ ಮಾಡಿ ನೀ ಮಯ್ಲಿಗೆ ಆಗಬ್ಯಾಡವ್ವಾ.. ವಪ್ಪತ್ತುಂಡು ಬಾಯಿಗೆ ಬೀಗ ಜುಚಕಂಡು ನಡಕೋತ ನಡಕೋತ ಬಂದು ನಿಂಗೆ ಮಂಡೆ ಕೊಟ್ಟೇನವ್ವಾ.. ಮುಗಿ ಅಂದರ ಕಯ್ನ ಮುಗುದೇನವ್ವಾ.. ಬೀಳು ಯಂದರ ಕಾಲಿಗೆ ಬಿದ್ದೇನವ್ವಾ; ಕೊಡು ಯಂದರ ನೆತ್ತರ ಧಾರೆ ಯರದೇನವ್ವಾ.. ಹಸಿವು ತೀರಿಸೆಂದರೆ ಮಯ್ನ ಅಡ್ಡಡ್ಡ ಕುಯ್ದು ತುಂಡು ತುಂಡು ಮಾಡಿ ಯಡೆ ಯಿಕ್ಕೇನವ್ವಾ; ಯ್ಯೋನೂ ಅರಿಯದ ಮೂಳ ನಾನು. ಯದಿಯಾಗಿದ್ದ ಗಿದ್ದುನ ಮಾತನ್ನೆಲ್ಲ ಬಗ ಬಗದ ಯ್ಯೋಳೀನಿ, ದಯಮಾಡಿ ನನ್ನ ಸರೀರದೊಳಗೆ ಪಾದ ಯಿಡಬ್ಯಾಡ ತಾಯಿ, ನೀ ವಸ್ತಿ ಮಾಡಲಕ ಸರೀರಗಳ್ಯೋನು ಬರಯ್ದಾವ ತಾಯಿ ! ವೂರು ತುಂಬ, ಪರಪಂಚದ ತುಂಬ ಮಸ್ತು ಅಯ್ದಾವೆ.. ನನ ಸರೀರದೊಳೀಕ ಮಾತ್ರ ಪಾದ ಯಿಡಬ್ಯಾಡೆವ್ವಾ.. " ಯಂದು ಮುಂತಾಗಿ ಹೇಳಿದ ವಂದೊಂದು ಮಾತನ್ನು ಮೆಟ್ಟಿಲು ಮಾಡಿಕೊಂಡು ಸಾಂಭವಿ ವಂದೊಂದು ಹೆಜ್ಜೆ ಯಿಡುತಾ ಯಿಡುತಾ ವಳ ಪ್ರವೇಶ ಮಾಡಿಬಿಟ್ಟಳು..

ಅದನು ನೋಡಿ ಯಲಾ ಯಿವಳಾಂತ ಓಬಯ್ಯ ಬಾಯಿ ಮ್ಯಾಲ ಬೊಟ್ಟಿಟ್ಟು ಕೊಂಡನು. ತಾನಾಡಿದ ಮಾತೊಂದನ್ನು ತಾಯಿ ಕಿವಿ ಮ್ಯಾಲ ಹಾಕ್ಯೊಂಡಂಗಿಲ್ಲ ಯಂದು ಭಾವಿಸಿದನು. ಸಾಂಭವಿಯಾಗಿದ್ದರೆ ತಾನಾಗಿದ್ದಾಳು: ಇನ್ನೊಬ್ಬರ ಸರೀರದೊಳಗೆ ತೂರಿಕೊಳ್ಳುವ ಹಕ್ಕನ್ನೀಕೆಗೆ ಕೊಟ್ಟವರ್ಯಾರು; ಸರೀರದ ಯಜಮಾನನಾದ ತನ್ನನ್ನೊಂದು ಮಾತು ಕೇಳೋದು ಬ್ಯಾಡವೇನು ! ಆಕೆಯನ್ನು ಸರೀರದ ಬಾಗಿಲ ಬುಡದಲ್ಲಿ ತಡೆಯಲು ತಾನು ಮಿಕ್ಕು ಪ್ರಯತ್ನವ ಮಾಡಿದನಾದರೂ ಸಾಧ್ಯವಾಗಲಿಲ್ಲ.. ಆಕೆಯನ್ನು ಕಯ್ಯಿ ಹಿಡಿದು ಯಳಕಂಡು ಬರಲಿಕ್ಕೆ ತಾನಾದರೂ ಯಷ್ಟರವನು ! ಕಯ್ಯಿ ವಳೀಗೆ ಕಯ್ನ ಹಾಕಿ ಹಿಚುಗಿಕೊಂಡನು. ಹಣೆ ಹಣೆಯನ್ನು ಗುದ್ದಿಕೊಂಡನು. ಯಿದು ನ್ಯಾಯವಲ್ಲ ತಾಯಿೂ.. ನ್ಯಾಯವಲ್ಲ ಯಂದು

ಹಲುಬಿಕೊಂಡನು. ಹೆಂಡತಿ ಜಗಲೂರಿ ಬಂದು ಯಲ್ಲಯ್ತೆ ನಿನ ಸರೀರವು ಯಂದು ಕೇಳಿದರೆ ಯೇನಂತ ವುತ್ತರಿಸುವುದು; ದಿಕ್ಕುದಿಕ್ಕಿಗೊಂದರಂತೆ ವೋಡಿ ಹೋಗಿರುವ ಮಕ್ಕಳು ಬಂದು ಯಲ್ಲಯ್ಯುಪ್ಪಾ ನಿನ ಸರೀರವು ಯಂದು ಕೇಳಿದರೆ ಯೇನಂತ ವುತ್ತರಿಸುವುದು.. ! ಆದದ್ದಾಯಿತು. ಮಾಮೂಲು ಮನುಶ್ಯೋರಾಗಿದ್ದಲ್ಲಿ ಕೊಳ್ಳಪಟ್ಟಿ ಹಿಡಕಂಡು ಹೊರ ಯಳಕಂಡು ಬಂದು ' ಬುದ್ಧಿಗೇಡಿ.. ನಾಡ ಬುದ್ಧಿಗೇಡಿ ' ಯಂದು ಛೀಮಾರಿ ಹಾಕಬಹುದಿತ್ತು.. ಆದರೆ ತನ್ನ ಸರೀರದೊಳೀಕೆ ತೂಡಿಕೊಂಡಿರೋದು ಸಾಂಭವಿ.. ಕನುಕರ ಬರುವಂತೆ ಮಾತಾಡಿ ಆಕೆಯನ್ನು ಹೊರಹೊಂಡಿಸಬೇಕೆಂದು ನಿಶ್ಚಯಿಸಿದ ಅವನು ಆ ದಿಸೆಯಲ್ಲಿ ಪರಿಪರಿಯಿಂದ ಪ್ರಯತ್ನಿಸಿದನಾದರೂ ಸಾಧ್ಯವಾಗಲಿಲ್ಲ.. ಅವನಾಡಿದ ಮಾತುಗಳು ಆಕೆಯ ಕಿವಿ ಮುಟ್ಟುವುದರೊಳಗೆ ಅಂತರ್ಧಾನವಾಗುತ್ತಿದ್ದವು.. ಆಮಿಷವೊಡ್ಡುವುದೆ ಸರಿಯಂದು ಭಾವಿಸಿದ ಅವನು ವಂದಲ್ಲಾ ವಡ್ಡಿದ್ದು.. ಯರಡಲ್ಲಾ ವಡ್ಡಿದ್ದು.. ಯೆಸು ವರುಸ ತಾನು ಜೋಪಾನ ಜತನ ಮಾಡಿರುವ ತನ್ನ ಸರೀರವೇ ತನ್ನ ಯಿರುದ್ಧ ತಿರುಗಿ ಬಿದ್ದಿರುವುದೆಂದ ಮೇಲೆ, ತನ್ನನ್ನು ಯೆಸು ವರುಸ ಜೋಪಾನ ಜತನ ಮಾಡಿರುವ ಸರೀರವೇ ತನ್ನನ್ನು ನಿಕ್ರುಷ್ಟ ಕಾಣುತ್ತಿರುವುದೆಂದ ಮೇಲೆ ತಾನು ಸಾವುರ ಕಯ್ಯಿಗಳ ಸಾಂಭವಿಯನ್ನು ಅಂದು ಯೇನು ಪ್ರಯೋಜನ ಯಂದು ಮುಂತಾಗಿ ಯೋಚಿಸುತ್ತಾ ಯೋಚಿಸುತ್ತಾ ಗುಬ್ಬಿಯಂತೆ ಮುದುಡಿ ಹೋದನು.

ತನ್ನ ಸರೀರದಿಂದ ಹೊರ ಹೊಂಡು ತಾಯೊಂತ ಮಮ್ಮಲನೆ ಮರುಗುತ ಕೇಳಿಕೊಂಡರೂ ತಾಯಿಗೆ ಕನುಕರ ಹುಟ್ಟಲಿಲ್ಲ.. ಹೆಂಗೆ ಹೊಂಡಲಪ್ಪಾ.. ಆಸು ಯೋಜನ ದೂರದಿಂದ ನಿನ್ನ ಸರೀರವನ್ನು ಬಗುಸಿ ಬಂದೀನಿ ಕಣ ಕಂದಾ.. ನಾನು ಹೊರ ಹೊಂಡತೀನಂದರ ನಿನ್ನ ಸರೀರ ಬಿಟ್ಟು ಕೊಡ್ತಿಲ್ಲಲ್ಲಾ.. ಯೇನು ಮಾಡಲಿ ಯಂದು ತನ್ನ ಅಸಹಾಯಕತೆಯನ್ನು ಪ್ರಕಟಿಸಿದೇಟಿಗೆ ಓಬಯ್ಯನು–

ಕಿವಿಯಿಂದ ದಯಮಾಡುತೀನಂದರೆ ಕಿವೀನ ಕುಯ್ದು ಅಗಲ ಮಾಡೇನು, ಬಾಯಿಯಿಂದ ಹೊರ ಹೊಂಡತೀನಂದರೆ ಕುಯ್ದು ಬಾಯ್ನ ಅಗಲ ಮಾಡೇನು; ಕಣ್ಣುಗಳಿಂದ ದಯ ಮಾಡತೀನಂದರೆ ಕಣ್ಣುಗಳನು ಕುಯ್ದು ಅಗಲ ಮಾಡೇನು ! ದಯಮಾಡು ತಾಯಿ ದಯಮಾಡು.. ನಂಗೆ ದಗದ ವದಕನ ಮಸ್ತಯ್ತೆ ಯವ್ವಾ..

ಯಂದನಕಂತ ಮಯ್ಯೆಂಬುವ ಮಯ್ಯನ್ನು ತಟಗು ಮಾಡಿಕೊಂಡನು. ತನ್ನೆಲ್ಲ ಕಯ್ಯಿಗಳನ್ನೇ ಸಾಯಿರದಾವಂದು ಕಯ್ಯಿಗಳೆಂದು ಭಾವಿಸಿ ಮುಗುದನು. ಅಡ್ಡ ಬಿದ್ದುದಾಗಿ ಭಾವಿಸಿ ನೆಲಕ್ಕೊರಗಿನು.

ಯಾರೋ ಪಕಪಕನೆ ನೆಗುತ್ತಿರುವಂತೆ ಭಾಸ ಮಾಡಲು ಪಿಳಿಪಿಳಿ ಕಣ್ಣು ಬಿಟ್ಟು ನೋಡುತ್ತಾನೆ ತನ್ನ ಸರೀರವು ಮತಮತ್ತೆ ತನ್ನನ್ನು ನೋಡಿ ಲೀಲಾಯಿನೋದ ಮಾಡುತ್ತಿರುವುದು. ಯಾಕೆ ಹಿಂಗ ನಗಾಡತಯ್ತಂತ ತಿಬ್ಬಳಿಸಿ ಅವನು ನೋಡಿದನು. ವಂದು ಮಗ್ಗುಲಿಂದ ನೋಡಿದರದು ಕಾಡು ಕೋಣದಂತೆಯೂ; ಯಿನ್ನೊಂದು ಮಗ್ಗುಲಿಂದ ನೋಡಿದರೆ ಸಕಲ ಪ್ರಾಣಿ ಪಣ್ಣಿಗಳಿಂದ ಮಾಡಲ್ಪಟ್ಟಿರುವಂತೆಯೂ; ಮತ್ತೊಂದು ಮಗ್ಗುಲಿಂದ ನೋಡಿದರದು ಅಮರಾವತಿ ಪಟ್ಟಣದಂತೆಯೂ; ಮಗುದೊಂದು ಮಗ್ಗುಲಿಂದ ನೋಡಿದರದು ಮೊಸರನ್ನದ ಬುತ್ತಿಯಂತೆಯೂ ಅದು ಗೋಚರ ಮಾಡಿತು. ತಾನು ಯೀಟೊಂದು ಚಲುವಾದ ಸರೀರದಲ್ಲಿ ವಸ್ತಿ ಮಾಡಿದ್ದೆನೆಂದು ಅರ್ಥವಾದದ್ದು ಆವಾಗಲೇ, ಯೇಸು ದಿನ ಮಾನದಿಂದ ತಯಾರಿಕೆ ನಡೆಸಿತ್ತೋ ಅವ್ವನ ವಸ್ತಿಗಾಗಿ. ಯಲಾ ಸರೀರವೇ.. ನೀನೇಟೊಂದು ಮೋಸಗಾರ.. ನೀನು ನಿನ್ನ ಮಾಲಕನಾದ ನನಗೇ ಕಯ್ನ ಕೊಟ್ಟೀಯಲ್ಲಾ.. ಯಂದವನು ಅಂದುಕೊಳ್ಳುತ್ತಿರುವ ಕಾಲಕ್ಕೆ ಅದು ನಗಾಡಿಕೆಯನ್ನು ನಿಲ್ಲಿಸಿ–

" ನೀನು ನಿನ್ನ ಸರೀರವಾದ ನನ್ನ ಬಗ್ಗೆ ಯಾಕೆ ಯಿಟೋಂದು ಮಮಕಾರ ಯಿಟುಕೊಂಡಿದ್ದೀಯಪ್ಪಾ.. ನಾನು ಮಣ್ಣಿಂದ ಬಂದೀನಿ. ಮುಂದೊಂದು ದಿನ ಮಣ್ಣಾಗಿ ಬಿಡುತೀನಿ.. ಯಿ ನನ್ನ ಬಗ್ಗೆ ನೀನು ಮೋಹ ಯಿಟುಕೊಳ್ಳೋದು ಸರ್‍ಯಲ್ಲ.. ನಾನೊಬ್ಬುದೊಂದು ಬಿಡದಿ ಮನಿಯು. ನೀನಿರಲಕ ಅನುವು ಮಾಡಿಕೊಟ್ಟಿದ್ದು ಪುಣ್ಯೇವು ಯಂದು ಭಾವನೆ ಮಾಡಿಕೋ. ಬಂದಿರೋರಿಗೆ ಬ್ಯಾಡನ್ನಲ್ಲಿಕ್ಯಾಯ್ತತೇನಪ್ಪಾ.. ನಾನೊಳಗಿರಂದರ ನೀನೊಳಗಿರಬೇಕು ನಾನು ಹೊರಗಿರಂದರ ನೀನು ಅಂಗಳದಾಗ ತೆಪ್ಪಗೆ ಬಾಯ್ಮು ಮುಚ್ಚೊಂಡಿರಬೇಕು.. ತಿಳಿತಾ " ಯಂದು ಹೇಳಿ ಬಾಯಿ ಮುಚ್ಚಿಸಿತು.

ಅವನು ಕಣ್ಣಲ್ಲಿ ನೀರು ತಂದುಕಂಡಿದ್ದು ಕಂಡದಕ್ಕೆ ಮರುಕ ಹುಟ್ಟಿ –

" ನೀನು ಬಾ ಅಂದರ ಬರಲಕ ನಿನ್ನಿಷ್ಟಲ್ಲ.. ನೀ ಹೋಗಂದರ ಹೋಗಲಕ ನಿನ್ನಷ್ಟಲ್ಲ ಕಣ್ಮಗಾ.. ಹತ್ತು ಸಾವಿರ ಹೊನ್ನು ಕೊಟ್ಟರೂ ವಲಿಯದ ತಾಯಿ ನಿನ್ನ ಸರೀರದೊಳಗೆ ವಸ್ತಿ ಮಾಡಲು ಬಗಸಿ ಬಂದವಳೆ.. ಯಿದು ನಿನ್ನ ಪುಣ್ಯ ಭಾಗ್ಯ ಅಂದುಕೋ.. ನೀನು ನಿನ್ನ ಸರೀರವನ್ನು ನಿಕ್ರುಷ್ಟ ಮಾಡಿ ಮಾತಾಡಲು ಬ್ಯಾಡ.. " ಯಂದಾಡಲು ತುಸು ಕರಗಿದನು.

" ಅಯ್ಯೋ ನನ್ನ ಸರೀರವೇ.. ನಿನ್ನೊಳಗೆ ಸೇರಕಂಡಿರುವ ತಾಯಿ ಯೇನು ಪಡಿತಾಳೆ ಯೇನು ಬಿಡುತಾಳೆ.. ನೋಡಲಿಕ್ಕೆ ನೀನು ಬಡಕಲದ್ದು ಹೋಗಿದ್ದೀ " ಯಂದು ಅವನು ದಯನಾಸ ಬಿದ್ದು ಕೇಳಲು ಅದು

" ನಿನ್ನ ಸರೀರವಾದ ನನ್ನೊಳಗೆ ಯೇನ್ಯಾಕಿಲ್ಲ.. ಯಲ್ಲ ಅಯ್ತು.. ನಿನ್ನ ಸರೀರದೊಳಗಿಂದ ಆಕೆ ಬೇಕಾದ್ದು ಪಡೀತಾಳೆ. ಬೇಕಾದ್ದು ಆಳುತಾಳೆ.. " ಯಂದನ್ನಲೀತನು " ಯೇನು ಮಾಡುತಾಳೆ ಸಾಂಭವಿ ನನ್ನ ಸರೀರದೊಳಗಿದ್ದುಕೊಂಡು " ಯಂದು ಕೇಳಲು ಅದು –

" ಮಾತು ತಪ್ಪಿದೋರ ಮೂಗು ಕುಯ್ಯುತ್ತಾಳೆ.. ನಡತೆ ತಪ್ಪಿದೋರ ನಾಲಗೆ ಸೀಳುತ್ತಾಳೆ.. ಹಸುಗಂದಮ್ಮಗಳನ್ನು ಮೊಂಡುಗಯ್ಯಲ್ಲೆತ್ತಿ ಹೊಡೆಯೋ ಸಂಗಡಗಿತ್ತಿಯೋರ ಭಂಡಗಿತ್ತಿಯವರನ್ನು ಭಂಡಡವಿಗೆ ಗಡಿಮುತ್ತಾಳೆ.. ವುಂಬುವ ಅನ್ನದಲ್ಲಿ ಮೊದ್ದು ಯಿಕ್ಕುವ ಭಿನ್ನಾಣಗಿತ್ತಿಯವರ ಬಣ್ಣ ಕಳಚುತ್ತಾಳೆ.. ತುಂಬಿದ ಬಾವಿಗೆ ತೊಂಬಲ ವುಗಿಯುವ ಅಪ್ನಾಡಿಯವರನ್ನು ಅಟ್ಟಂಬಟ್ಟಾರಣ್ಯೇವಿಗೆ ಕಳುಹುತ್ತಾಳೆ.. ಯಿ ಪ್ರಕಾರವಾಗಿ ಅವ್ವ ತನ್ನ ಮಯ್ಮ ತೋರಲಿಕ್ಕೆ: ಗ್ರಾಮದೊಳಗೆ ಸುಖ ಸಾಂತಿ ನೆಲಹಲಿಕ್ಕೆ. ಬರಡೆಮ್ಮೆ ಆಕಳುಗಳ ಕೆಚ್ಚಲು ತುಂಬಲಿಕ್ಕೆ. ತೊಂಬಲ ಜಗಿದುಗುಳಿ ನ್ಯೆಲ ಹಸನು ಮಾಡಲಿಕ್ಕೆ. ಜನಕೋಟಿಯ ಕಥೆಕಥೆ ಕಬ್ಬುಗಳಲ್ಲಿ ರಸ ತುಂಬಲಿಕ್ಕೆ. ಪಾಪ ಕಳೆಯಲಿಕ್ಕೆ. ಪುಣ್ಯ ತುಂಬಲಿಕ್ಕೆ ಆ ಜಗದಂಬೆಯು ನಿನ್ನ ಸರೀರದೋಳಿಕೆ ದಯಮಾಡಿಸಿದ್ದಾಳೆಂಬುದನ್ನು ಮರೆಯಬ್ಯಾಡಪ್ಪಾ" ಯಂದು ಮುಂತಾಗಿ ಪ್ರವಚನ ಮಾಡಲು

ಓಬಯ್ಯನ ಬಾಯಿ ಕಟ್ಟಿತು. ಕಣ್ಣು ವಜ್ಜಲಾಯಿತು. ಕಲ್ಲು ಮನಸು ಕರಗಿ ವುದಕವಾಗಿ ಹರಿಯಿತು. ಕಜ್ಜಿ ಪುಳ್ಳೆ ಕಂದಮ್ಮನಂತೆ ಬಿಕ್ಕಿ ಬಿಕ್ಕಿ ಅತ್ತನು. ವುಡುಗೊರೆಗಳ ರಾಶಿ ನಡುವೆ ಕಂಗಾಲಾದ ಹುಡುಗನಂತಾದನು. ಪುಣ್ಯಕೋಟಿಯ ಯಳೆಗರುವಿನಂತಾದನು.

" ಯಲ್ಲಿರುವಳು ನನ್ನ ತಾಯಿ: ಯದರಲ್ಲಿರುವಳು ನನ್ನ ತಾಯಿ: ಯಾವ ರೂಪದಲ್ಲಿರುವಳು ನನ್ನ ತಾಯಿ " ಯಂದು ಗದ್ಗದಿತನಾದನು.

ಪಂಚೂರು ಹಿಂದಕ ಜರುಗಿ ನೋಡಿದನು, ಪಂಚೂರು ಮುಂದಕ ಜರುಗಿ ನೋಡಿದನು.

" ಮುಖ ಯಂಬುವ ಮುಖವನ್ನಾರ ತೋರವ್ವಾ.. ನಾನಾ ನಮೂನಿ ವುಪ್ಪ ಮುಡುಸಿ ಸಿಂಗಾರ ಮಾಡೇನು " ಯಂದನು ಗದ್ಗದಿತನಾಗಿ.

ಪಕಪಕ ನಗಾಡಿದಂಗಾತು. ನಗುವಿನ ಕಾಣದ ಬೆನ್ನಲ್ಲೇ –

" ನಿನ್ನ ಮುಖವೇ ನನ್ನ ಮುಖ ಮಾರಿ ಕಣಪ್ಪಾ.. ನಗೆಯುಂಬುವ ಪುಷ್ಪ ಮುಡುಸಿ ಸಿಂಗಾರ ಮಾಡು " ಯಂದಿತು.

" ನಿನ್ನ ಘನುವಾದ ಪಾದವನ್ನಾರ ತೋರು ತಾಯಿ.. ಪಾದಪೂಜೆ ಮಾಡೇನು ! " ಯಂದಿವ ಅನ್ನಲು

" ನಿನ್ನ ಪಾದವೇ ಅವ್ವನ ಪಾದ ಯಂಬುದನ್ನ ಮರೆಯಬ್ಯಾಡ " ಯಂದಿತು ಅಸರೀರವಾಣಿಯು

" ನಿನ್ನ ಅಂಬ್ರುತ ಕಲಸದಂಥ ಮೊಲೆಗಳನ್ನಾರ ತೋರು ತಾಯಿ ನಿನ್ನ ಯದೆ ಹಾಲು ಕುಡುದು ಹಸಿವು ಬಾಯಾರಿಕೆ ಹಿಂಗಿಸಿಕೊಂಡೇನು ! " ಯಿಂದಿವ ಕೇಳಲು

" ಮನೆಯ ಅಡಕಲುಗಡಿಗೆ: ಗಿಡ ಮರ ಹುಲ್ಲು ಕಡ್ಡಿಗಳೆಂಬಂಥ ಸಚರಾಚರ ಗಳೆಲ್ಲದರಲ್ಲಿ ಅವ್ವನ ಮೊಲೆಗಳಡಗಿವೆ ಕಣಪ್ಪಾ " ಯಂದಿತು.

" ನಿನ್ನ ತೊಡೆಗಳನ್ನಾರ ತೋರು ತಾಯಿ. ಮ್ಯಾಲ ತಲಿಯಿಟ್ಟು ಮಲಗಿ ದಣಿವು ತೀರಿಸಿಕೊಂಡೇನು ! " ಯಂದಿವ ಕೇಳಲು

" ಮುಚ್ಚಪ್ಪಾ ನೀನು ಕುಂತಿರುವ ನ್ಯೆಲವೇ ಅವ್ವನ ತೊಡಿಯಂದು ತಿಳಕ ಕಣಪ್ಪಾ " ಯಂದಿತು.

ಯಿಪ್ರಕಾರವಾಗಿ ಗುಡಿ ಹಿಂದಲ ಮೂಳೆ ಓಬಯ್ಯನ ದೇಹವೆಂಭೋ ದೇಹದ ಲಕ್ಷ ಲಕ್ಷ ಹುತ್ತಗಳ ಕೋಟಿ ಕೋಟಿ ಬಿಲಗಳಿಂದ ಸಂದೇಹಗಳೆಂಭೋ ಘಟ ಸರುಪಗಳು ವಂದೊಂದಾಗಿ ಹರಿದು ಹೊರ ಹೋಗಿ ಬಟಾಬಯಲೊಳಗೆ ಅಂತರ್ಧಾನವಾದವು.

ತನ್ನ ದೇಹವೆಂಭೋ ದೇಹವನ್ನು ನೋಡಿಕೊಳ್ಳುತ್ತಾನೆ

ಅಲ್ಲೆಲ್ಲ ಹನ್ನೆಲ್ಡು ಕಂಭಗಳ ವಪ್ಪವಾದ ಚಪ್ಪರವು.

ಮುತ್ತಿನ ತೋರಣಗಳಿಂದಲಂಕಾರ ಮಾಡಿರೋ ಹನ್ನೆಲ್ಡನ್ನೆಲ್ಡಲೇ ನೂರಾ ನಲವತ್ನಾಲ್ಕು ಕಮಾನುಗಳು.

ವಳ ಹೋಲಿಕೆ ಚಂದ್ರಾಮ ವಂದುಪಾಲು

ಹೊರ ಹೋಲಿಕೆ ಸೂರ್ಯಾಮ ವಂದುಪಾಲು

ನೆಲದ ಮ್ಯಾಲ ಯಪ್ಪತ್ತೇಳು ಮಂಡಲಗಳು

ವಂದೊಂದು ಮಂಡಲದೊಳಗೆ ಹುಟ್ಟು ನಿರುವಾಣಗಳು.

ನೋಡುನೋಡುತ್ತಿದ್ದಂತೆ ಅವನ ಕಣ್ಣುಗಳಿಂದ ತೊಟ ತೊಟ ನೀರು ಹನಿದು ಸಾಯಿರದೆಂಟು ಮಡುವಾದವು: ವಂದೊಂದು ಮಡುವಲ್ಲಿ ಹಂಸಪಕ್ಷಿಗಳು ತಾನೇತಾನಾಗಿ ರಾರಾಜಿಸತೊಡಗಿದವು.

ಅವ್ವಗೆ ಯಡೆಗೊಂಡು ತನ್ನ ಸರೀರವೆಂಬುದು ಪಾವನವಾಯಿತೆಂದು ಓಬಯ್ಯ ಹಿರಿಹಿರಿ ಹಿಗ್ಗಿ ಯಿರೇಕಾಯಿಯಾದನು. ಕಯಿಲಾಸದ ಕರುಣೆ ಯಿಳಿದು ಬಂದು ತನ್ನ ಸರೀರ ತುಂಬಿತೆಂದು ಬಿರಿಬಿರಿ ಬೆಳೆದು ಕಲ್ಲು ಪಡುವಲಕಾಯಿಯಾದನು. ಅವ್ವನ ಕ್ವಾರಾಣ್ಯದ ಜೋಳಿಗೆ ತನ್ನ ಸರೀರವಾಯಿತೆಂದು ಬುರುಬುರುನೆ ಪೂದಿ ಬೂದುಗುಂಬಳ ಕಾಯಿಯಾದನು. ತನ್ನ ಸರೀರ ಯಂಬುವ ವನಾಂತರದೊಳಗೆ ಅವ್ವ ಸಾಯಿರ ತೊಟ್ಟಿಲ ಕಟ್ಟಿ ಜೋಗುಳ ಹಾಡುತ್ತಾಳೆ ಯಂಬ ಕಾರಣಕ್ಕೆ ತಾನು ದವಸ ತುಂಬಿದ ಅಗೇವಿನಂತಾದನು.

" ಅವ್ವಾ ಜೊದುಕು ಕೊಟ್ಟೆ ಭಾಗ್ಯೇವ ಕೊಟ್ಟೆ... ನನ್ನ ಸರೀರಕ್ಕೊಂದು ಅರ್ತವ ಕೊಟ್ಟೆ... ನನ್ನ ಸರೀರ ಯಂಬುವ ಕೊಪ್ಪರಿಗೆಯನ್ನು ಪುಣ್ಯ ಪರಸಾದಗಳಿಂದ ತುಂಬಿಬಿಟ್ಟೆ... ಮಾಯಗಾರ್ತಿ ಅಂದರೆ ನೀನೆ ಕಣ್ತಾಯಿ. ಅನುಗಾಲ ನೀನು ನನ್ನ ಸರೀರದೊಳಗಿದ್ದು

ಬೇಕಾದ್ದು ಅನುಭೋಸು. ನೀನು ನನ್ನೊಳಗಿದ್ದೀ ಅಂಬುದಕೆ ನಾನು ನಿನ್ನೊಳಗಿದ್ದೆ ಅಂಬುದರೆ ಸತ್ಯೇವು ಮಾಡಿ ತೋರಿಸಬೇಕವ್ವಾ " ಯಂದು ಓಬಯ್ಯನು ತಿರಕಂಡು ತಿನ್ನೋ ಜೋಕ್ಕ ತಲೆ ಜಂಗಮಯ್ಯನಂತೆ ಬೇಡಿಕೊಳ್ಳಲು

" ಯಾಕಾಗಬಾರದು ಕಂದಾ.. ನೀನು ಸಾಯಿರ ಗಾವುದ ದೂರದ ಮಾತುಗಳನ್ನು ಕೇಳುತ್ತೀ, ಸಾಯಿರ ಗಾವುದ ದೂರ ದ್ರುಶ್ಯಗಳನ್ನು ನೋಡುತ್ತೀ. ನೀನು ಕೇಳಿದ್ದು ನಿಜವಾಗತಯ್ತೆ.. ನೀನು ನೋಡಿದ್ದು ನಿಜವಾಗತಯ್ತಪ್ಪಾ. ನೀನು ಬೇರೊಬ್ಬರ ಮನಸ್ಸನ್ನು ಸುಲಭವಾಗಿ ಪ್ರವೇಶ ಮಾಡುತ್ತಿ.. ನೀನು ಬಸುರುಗಳನ್ನು ಪ್ರವೇಶ ಮಾಡಿ ಪಿಂಡಗಳೊಂದಿಗೆ ಮಾತಾಡುತ್ತೀ ಕಂದಾ. ವಂದೇ ವಂದು ಮಾತಿನಲ್ಲಿ ಹೇಳಬೇಕೆಂದರೆ ಅವ್ವ ನಿನ್ನ ಮೂಲಕ ಕೇಳುತ್ತಾಳೆ: ಮಾತಾಡುತ್ತಾಳೆ, ಮಾಡುತ್ತಾಳೆ. ಆಕೆಯೇ ನೀನು ನೀನೇ ಆಕೆಯು ಯಂದು ತಿಳಿವಂಥವನಾಗು ಮಗನೇ " ಯಂದು ಮಾರ್ನುಡಿದು ಮಾಯವಾದಂತಾಗಲು ಜಲ ಜಲ ಬೆವೆತನು.

" ಆಯಿತವ್ವಾ.. ಆಯಿತು ತಾಯಿ.. ನಿನ್ನ ಪ್ರವೇಸದಿಂದ ನನ್ನ ಸರೀರಯಂಬುದು ಮಂತ್ರದ ಚೀಲವಾಯಿತಂದಂಗಾತು.. ಯೇಸು ದೂರದಿಂದ ಆಗಮಿಸಿರುವಿಯೇನು ನೀನು ನನ್ನ ಸರೀರಯಂಬುವ ರ್ಝೋಪುಡಿಯಲ್ಲಿ ನೆಲಗೊಳ್ಳಲು.. ದಣಕಂಡಿರುವಿಯೇನೊ ? ಶ್ಯಾನೇ ಹೊತ್ತಾಗಯ್ತೆ.. ನಿಂಗೆ ನಾನು ನನ್ನ ಸರೀರವನ್ನು ಬಿಟ್ಟುಕೊಟ್ಟಿದ್ದೀನವ್ವಾ.. ನಿನ್ನ ಪ್ರವೇಸದಿಂದ ನನ್ನ ಸರೀರ ಪಾವನವಾಯ್ತು. ಯಿದರೊಳಗೆ ನೀನು ಸಾಸ್ವತವಾಗಿ ನೆಲಗೊಂಡರೂ ನನ್ನ ತಕರಾರಿಲ್ಲ.. ನನ್ನ ಸರೀರವನ್ನು ಅಡ್ಡಾಡ್ಡ ಅರಗಿಕೋ.. ವುದ್ದುದ್ದ ಬಿತ್ತಿಕೊಳ್ಳೀ ತಾಯಿ. ಬೇಕಾದ್ದು ಬೆಳಕೋ.. ಬೇಕಾದ್ದು ಅನುಭೋಸು " ಯಂದು ಮುಂತಾಗಿ ನುಡಿಯುತ್ತ ಓಬಯ್ಯನು ಸಿರ ಸಾಸ್ಟಾಂಗ ಪ್ರಣಾಮು ಸಲ್ಲಿಸಲು ಮನೆಯಂಗಳದಲ್ಲಿ ನೆಲ ಮುಗಿಲಿಗೇಕಾಗಿ ನಿಂತಿದ್ದ ಅವ್ವನ ಮರವು ಅಷ್ಟ ದಿಕ್ಕುಗಳಿಗೂ ಹೊಯ್ದಾಡಿ ವುಘೇ ವುಘೇ ಅಂದಿತು.

● ▼

ಕುಂ. ವೀರಭದ್ರಪ್ಪ, ಅನ್ನಪೂರ್ಣಾ. ಪೊಲೀಸ್ ಸ್ಟೇಶನ್ ಹತ್ತಿರ
ಕೊಟ್ಟೂರು - ೫೮೩ ೧೩೪ ಜಿ. : ಬಳ್ಳಾರಿ ✆ : ೦೮೫೯ – ೩೭೩೩೮

▲ ಕವಿತೆ - ೧

ನಾನೇನಾ

ಸಿ. ಎಂ. ನರಸಿಂಹಮೂರ್ತಿ

ನಡೆದಿತ್ತು ಮದುವೆ
ಮೆರವಣಿಗೆ :
ಹೇಳುತ್ತಿದ್ದ ಪೂಜಾರಿ
ಮಾಂಗಲ್ಯಂ ತಂತು ನಾನೇನಾ..
ಹೋಗುತ್ತಿತ್ತು ಶವದ ಮೆರವಣಿಗೆ:
ಗೊಣಗಿದ ಬದುಕುಳಿದ
ಮುದುಕ
ಮುಂದಲ ಕಂತು ನಾನೇನಾ...

● ▼

ಸಿ. ಎಂ. ನರಸಿಂಹಮೂರ್ತಿ, ೧೯ - ೧೪, ಪರಂಜ್ಯೋತಿಪುರಂ. ಡಾ. ಅಂಬೇಡ್ಕರ್ ಬಡಾವಣೆ.
ಚಾಮರಾಜನಗರ - ೫೭೧ ೩೧೩ ✆ : ೦೮೨೨೬ - ೭೨೫೧೧೩

ಶುನಕಗಳ ಹಂದಿ ಶಿಕಾರಿ

ಈರಪ್ಪ ಎಂ. ಕಂಬಳಿ

ಒಂದನ್ನೊಂದು ಕೊಂದು ತಿಂದು ಬದುಕುವುದೇ ಜೀವ ಸರಪಳಿಯ ಅನಿವಾರ್ಯ ಅವಸ್ಥೆಯಾಗಿರುವಾಗ. ಆದಿಮಾನವ ಕೂಡ ಅದಕ್ಕೆ ಹೊರತಾಗಿರಲಿಲ್ಲ. ಪ್ರಾಣಿಗಳ ಬೇಟೆಯಾಡಿ ಹೊಟ್ಟೆ ಹೊರೆಯುವ ದಿನಗಳಿಂದ ಹಿಡಿದು. ಇಂದಿನ ಅತ್ಯಾಧುನಿಕ ನಾಗರಿಕನು ಮೋಜಿಗಾಗಿ ಕಾಡು ಪ್ರಾಣಿಗಳ ಬೇಟೆಯಾಡುವ ಹವ್ಯಾಸದ ಜೊತೆಗೇ ಇಂದು ಮಾನವ ಮಾನವನನ್ನೇ ಬೇಟೆಯಾಡುವ ಕ್ರೂರ ನೆಲೆಗೆ ಬಂದು ತಲುಪಿರುವ 'ಶಿಕಾರಿ'ಯ ಒಂದೆ ರೋಚಕ ಚರಿತ್ರೆಯೇ ಅಡಗಿದೆ. ಇರಲಿ.

ಶೀರ್ಷಿಕೆಗೆ ಅಂಟಿಕೊಂಡಂತೆ. ನನ್ನ ಉದ್ದೇಶ ಏನಿದ್ದರೂ ಶ್ವಾನ ಪ್ರಪಂಚಕ್ಕಷ್ಟೇ ಸೀಮಿತಗೊಳಿಸಿದಂತೆ ಮುಂದುವರಿಯುತ್ತೇನೆ. ಒಡನಾಡಿ ಬೇಕೆಂದು ಒಂದೇ ಸಮನೇ ಮಿಡುಕುವ ಆಧುನಿಕ ನಾಗರಿಕ ಪ್ರಾಣಿಗಳಿಗೆ ಒಂದು ಅಡನಾಡಿ ನಾಯಿಯಾದರೂ ಸೈ ತೃಪ್ತಿಗೊಂಡಾರು. ನನ್ನದು ಏನಿದ್ದರೂ ಬೀದಿ ನಾಯಿಗಳ ಜೀವನ ವ್ಯಾಪಾರಕ್ಕಷ್ಟೇ ಬದ್ಧವಾಗಿರುವುದರಿಂದ. ನನ್ನ ಬಯಲುಸೀಮೆಯ 'ಗ್ರಾಮಸಿಂಹಗಳ ಶಿಕಾರಿ'ಯ ಪರಾಕ್ರಮವನ್ನಷ್ಟೇ ಹೇಳುವೆ. ಬನ್ನಿರಿ. ಮಲೆನಾಡಿನ ದುರ್ಗಮ ಕಾಡುಗಳಲ್ಲಿ ನಡೆಯುವ ಹಂದಿ ಶಿಕಾರಿಗೂ ಬಿಸಿಲ ಸೀಮೆಯ ನಡುಹಗಲಿನಲ್ಲಿ. ಅದೂ ನಾಗರಿಕ ಪ್ರಪಂಚದ ಕಣ್ಣೆದುರಿಗೇ ನಡೆಯುವ ಹಂದಿ ಶಿಕಾರಿಗೂ ವ್ಯತ್ಯಾಸವಿದೆ. ಅದರದೇ ಆದ ವೈಶಿಷ್ಟ್ಯವೂ ಇದೆ.

ಅಡವಿಯಲ್ಲಿ ನೆಲೆಯೂರಿದ ಕುರುಬಗೌಡರ ನಾಯಿಗಳನ್ನು ಆಗೀಗ ಹತ್ತಿರದಿಂದ ನೋಡುವ ಅವಕಾಶ ನನ್ನ ಬಾಲ್ಯದ. ದಿನಗಳಲ್ಲಿ ಒದಗಿತ್ತು. ಹೊಲಗಳಲ್ಲಿ ಗುಂಡುಕಲ್ಲುಗಳ ಒಲೆ ಹೂಡಿ. ಮಣ್ಣಿನ ದೊಡ್ಡ ಗಡಿಗೆಗಳಲ್ಲಿ ಜೋಳದ ನುಚ್ಚು ಬೇಯಿಸಿ. ಮೆತ್ತನೆಯ ಎರೆ ನೆಲವನ್ನು ಕೈಯಿಂದ ಬಗಿದು ನೀರು ಚಿಮುಕಿಸಿ ತಟ್ಟಿ. ತಟ್ಟೆಯಾಕಾರ ಮಾಡಿಕೊಂಡು. ಅದಕ್ಕೆ ಬಾನ ನೀಡಿಸಿಕೊಂಡು ಮಂದನೆಯ ಕುರಿ ಹಾಲನ್ನು ಯಥೇಚ್ಛ ಸುರಿದುಕೊಂಡು: ಅನ್ನದೊಂದಿಗೆ ಒಂಚೂರೂ ಮಣ್ಣು ಬೆರೆಯದ ರೀತಿಯಲ್ಲಿ ಉಂಡು: ಉಳಿದದ್ದಕ್ಕೆ ಇನ್ನಷ್ಟು ಹಾಲು - ಬಾನ ಹಾಕಿ. ತಮ್ಮ ಸಾಕು ನಾಯಿಗಳನ್ನು ಕೂಗಿ ಕರೆದು ಉಣ್ಣಲು ಬಿಡುತ್ತಿದ್ದರು. ಹೀಗಾಗಿ ಕುರಿ ಕಾಯುವವರಂತೆಯೇ ಅವರ ನಾಯಿಗಳೂ ತೋಳಗಳಂತೆ ದಷ್ಟಪುಷ್ಟವಾಗಿರುತ್ತಿದ್ದವು. ಯಾಕೆಂದರೆ ಸಮಯ ಬಿದ್ದರೆ ತೋಳಗಳನ್ನೇ ಹಿಮ್ಮೆಟ್ಟಿಸಲು ಅವು ಸಮರ್ಥವಾಗಿರಬೇಕಲ್ಲವೆ ?

ಮತ್ತೆ ನಮ್ಮ ಬೀದಿ ನಾಯಿಗಳ ವಿಷಯಕ್ಕೆ ಬರುತ್ತೇನೆ. ಆಡು ಮಾತಿನಲ್ಲಿ 'ಬೀದಿ ಮಕ್ಕಳು ಬೆಳೆದೂ ಕೋಣೆ ಮಕ್ಕಳು ಕೊಳೆದೂ' ಎಂಬುದೊಂದು ನುಡಿಗಟ್ಟಿದೆ. ಅದನ್ನು ಸಾಬೀತುಗೊಳಿಸುವಂತೆ. ಬಿಸಿಲ ಸೀಮೆಯ ನಮ್ಮ ಬೀದಿ ನಾಯಿಗಳು ಲಂಗು ಲಗಾಮಿಲ್ಲದೆ: ಮನುಷ್ಯ ಅವಕ್ಕೆ ಹಡಬೆ ಜಾತಿಯವೆಂದು ಜರಿದರೂ ಕೇರು ಮಾಡದೆ: ಯಾರ ಹಂಗಿಗೂ ಒಳಗಾಗದೆ 'ನಡುಬೀದಿ ನಾರಾಯಣ' ಎಂಬ ಬಿರುದು ಪಡೆದ ಸಿಂಹಗಳವು. ಅವುಗಳಿಗಿರುವ ಸ್ವಚ್ಛಂದತೆ ಯಾರಿಗುಂಟು ? ನಾಳೆಯ ಚಿಂತೆಯಿರಲಿ. ಆ ಕ್ಷಣದ ಹೊಟ್ಟೆಯ ಪರಿವೆಯೂ ಅವಕ್ಕಿಲ್ಲದಿರುವುದರಿಂದಲೇ ಎಲ್ಲೆಂದರಲ್ಲಿ. ಜನದಟ್ಟಣೆಯ ಕಾಲಡಿಯಲ್ಲೂ ಬೇಕಾದರೆ ನಿಶ್ಚಿಂತವಾಗಿ ಯೋಗನಿದ್ರೆಯಲ್ಲಿ ಮುಳುಗಿರುತ್ತವೆ. ಅವಕ್ಕಿರುವ ಆ ಸಮಾಧಿಸ್ಥಿತಿ ಮನುಷ್ಯನಿಗೆ ಎಲ್ಲಿಯಾದರು ಉಂಟೆ ? ಬಾರದ ನಿದ್ರೆಗಾಗಿ ಜಪಿಸುತ್ತ 'ಆ ಜಾಪ್ ಆ ಜಾಪ್' ಎಂದು ಚಿಟಿಕೆ ಹೊಡೆದು ಆಕಳಿಸಿ ಯಾವು ಯಾವುದಕ್ಕೊ ಮೊರೆಹೋಗುತ್ತವೆ ಈ ಪಾಪಿ ಜನ್ಮ.

ಒಂದು ಕಾಲದಲ್ಲಿ ನನ್ನೂರಿನ ಸರ್ವಜ್ಞ ಮೂರ್ತಿ ಸರ್ಕಲ್ಲಿನ ಹುಣಸೆ ಮರದ ಕೆಳಗಿನ ಕಲ್ಲು ಬೆಂಚಿನ ಮೇಲೆ ನಿರುಮ್ಮಳಾಗಿ ಕಾಲು ತೂಗಿಸುತ್ತ ಕೂರುವದು ನನ್ನ ದಿನಚರಿಯಾಗಿತ್ತು. ಅವು ನನ್ನ ನಿರುದ್ಯೋಗಪರ್ವದ ಸುಂದರ ದಿನಗಳೆಂದು ಬೇರೆ ಹೇಳಬೇಕಾಗಿಲ್ಲ. ಆ ಮೂಲಕ ತಾಲೂಕು ಕಚೇರಿಗೆ ಹೋಗಿ ಬರುವ ತರಹಾವರಿ ಜನರನ್ನು ನೋಡಿಕೊಂಡು ಕೂರುವುದೇ ಆಗ ನನಗೊಂದು ಗೀಳು. ಆ ಕಲ್ಲುಹಾಸೇ ಆಗ ನನಗೆ ಆಪ್ಯಾಯಮಾನವಾದ ಸಿಂಹಾಸನ ಸಮಾನ.

ಅದೊಂದು ದಿನ. ಹಾಗೇ ಕುಂತಿರಲಾಗಿ. ನಡುಹಗಲಿನ ಆ 'ಬಿಸಿ' ಜಳದ ಹೊತ್ತಲ್ಲಿ ನಾಕಾರು ಕಂತ್ರಿ ನಾಯಿಗಳು ಅಲ್ಲಲ್ಲೆ ಬೇಕಾಬಿಟ್ಟಿ ಬಿದ್ದುಕೊಂಡಿದ್ದವು. ಅಷ್ಟು ದೂರದಲ್ಲಿ ತಾಯಿ ಹಂದಿಯೊಂದು ಗೊರ್ರ್ಕ್ ಗೊರ್ರ್ಕ್ ಎಂದು ಸವುಂಡು ಮಾಡಿಕೊಂಡು ತನ್ನ ಏಳೆಂಟು ಪುಟ್ಟ ಮರಿಗಳನ್ನು ಜತನವಾಗಿ ನಡೆಸಿಕೊಂಡು ಬರುತ್ತಿತ್ತು. ಇಲ್ಲಿ ಮಲಗಿದ್ದ ನಾಯಿಗಳೆಲ್ಲ ಕಿವಿ ನಿಗುರಿಸಿ. ಓರೆಗಣ್ಣಿನಿಂದ ಅದರತ್ತ ಕಣ್ಣು ಕೀಲಿಸಿ. ಮಲಗಿದ್ದ ಜಾಗದಲ್ಲಿಯೇ ಎದ್ದುನಿಂತು ಕಿವಿ ಕೊಡವಿ ಶಿಕಾರಿಗೆ ಸಜ್ಜಾದವು. ಕ್ಷಣಾರ್ಧದಲ್ಲಿ ಎಲ್ಲೆಂದರಲ್ಲಿ ಬಿದ್ದುಕೊಂಡಿದ್ದ ಆ ನಾಯಿಗಳು ಒಟ್ಟಾದವು. ಬರೀ ಕಣ್ಣಿನಲ್ಲಿಯೇ ಆಪ್ತಾಲೋಚನೆ ನಡೆಸಿದಂತೆ. ಏಕಾಯೇಕಿ ಕಾರ್ಯತಂತ್ರ ರೂಪಿಸಿ. ಮರಿಗಳ ಹಿಂಡಿನೊಂದಿಗೆ ಬರುತ್ತಿದ್ದ ತಾಯಿ ಹಂದಿಯತ್ತ ನುಗ್ಗಿದವು. ಇವುಗಳ ಹಠಾತ್ ದಾಳಿಯಿಂದ ತತ್ತರಿಸಿದ ಅದು ಭೀಕರವಾಗಿ ಗರ್ಜಿಸುತ್ತ ತನ್ನ ಮೂತಿಯಿಂದ ಇರಿದು ಕೊಲ್ಲುವಂತೆ ಎದುರಾದ ಆ ಎರಡೂ ನಾಯಿಗಳನ್ನು ಅಟ್ಟಿಸಿಕೊಂಡು ಹೋಯಿತು.

ಆ ನಾಯಿಗಳು. ಅದರಿಂದ ತಪ್ಪಿಸಿಕೊಳ್ಳುವುದಕ್ಕಿಂತ. ಮರಿಗಳಿಂದ ಅದನ್ನು ಬೇರ್ಪಡಿಸುವ ಹುನ್ನಾರದಿಂದ. ಹಂದಿಯನ್ನು ಚಿಟಗುಮುಳ್ಳು ಆಡಿಸುತ್ತ ಅಷ್ಟು ದೂರ ಕೊಂಡು ಹೋದವು. ಬೇರೊಂದು ನಾಯಿ ಅದಕ್ಕಾಗೇ ಕಾದಿದ್ದಂತೆ ಒಂದು ಮರಿಯನ್ನು ಅವಕ್ಕನೇ ಕಚ್ಚಿ ಹಿಡಿದು ದೂರ ಓಡಬೇಕೆನ್ನುವ ಹೊತ್ತಿಗೆ ಕರ್ಕಶವಾಗಿ ಕಿರುಚಿದ ಅದರ ದನಿಗೆ ತಾಯಿ ಹಂದಿ ಮರಳಿ ಮರಿ ಹಿಡಿದಿದ್ದ ನಾಯಿಯತ್ತ ತಿರುಗಿತು. ಹೆದರುಪುಕ್ಕಲ ಆ ನಾಯಿ. ಜೀವ ಭಯದಿಂದ ಮರಿಯನ್ನು ಚೆಲ್ಲಿ ದೂರಕ್ಕೆ ಓಡಿತು. ಅಷ್ಟರಲ್ಲಿ ತಾಯಿ ಹಂದಿಯನ್ನು ಪ್ರತ್ಯೇಕಿಸಲು ಪ್ರಯತ್ನಿಸಿದ್ದ ಮೊದಲಿನ ನಾಯಿಗಳೆರಡೂ ಈಗ ಮರಿಗಳ ಮೇಲೆ ದಾಳಿಯಿಸಿದ್ದಕ್ಕೆ ಮರಿಗಳೆಲ್ಲ ಚೆಲ್ಲಾಪಿಲ್ಲಿಯಾದವು. ನಾಯಿಗಳ ಬೊಗಳುವಿಕೆ. ತಾಯಿ ಹಂದಿಯ ಭೀಕರ ದನಿ. ಮರಿಹಂದಿಗಳ ಕಿರುಚಾಟಗಳೆಲ್ಲ ಸೇರಿ. ವಾತಾವರಣ ಅಲ್ಲೋಲ ಕಲ್ಲೋಲವಾಯಿತು. ರಸ್ತೆಯಲ್ಲಿದ್ದವರಷ್ಟೇ ಅಲ್ಲ. ಅಂಗಡಿ - ಮುಂಗಟ್ಟುಗಳಲ್ಲಿ ಒಳಗಿದ್ದ ಜನರೆಲ್ಲ ಹೊರಬಂದು ನಿಂತು ಕುತೂಹಲದಿಂದ ಆ ದೃಶ್ಯ ನೋಡಲುಪಕ್ರಮಿಸಿದರು.

ನೋಡನೋಡುತ್ತಿದ್ದಂತೆ. ಆಕ್ರೋಶದಿಂದ ಹೋರಾಡಿದ ತಾಯಿ ಹಂದಿ ತನ್ನೆಲ್ಲ ಮರಿಗಳನ್ನು ಇನ್ನೇನು ಒಟ್ಟುಗೂಡಿಸಿಕೊಂಡಿತೆನ್ನುವ ಹೊತ್ತಿಗೆ; ನಾಯಿಗಳು ಅದನ್ನು ಯಾಮಾರಿಸಿ ಒಂದೇ ಏಟಿಗೆ ಬೇರೆ ಬೇರೆ ದಿಕ್ಕುಗಳಿಂದ ಈಗ ಆಕ್ರಮಿಸಿದವು. ತಾಯಿ ಹಂದಿಯ ಅಸಾಧ್ಯ ಗರ್ಜನೆ. ಮರಿಗಳ ಅರಚಾಟ ಮುಗಿಲಿಗೇರುತ್ತಿದ್ದಂತೆ. ಒಂದು ಮರಿ ಹಿಂಡಿನಿಂದ ತಪ್ಪಿಸಿಕೊಂಡು ತುಸು ದೂರ ಉಳಿಯಿತು. ಆಗ ಆ ಅವಕಾಶಕ್ಕಾಗೇ ಕಾದಿದ್ದಂತೆ ಚಂಗನೇ ನೆಗೆದ ನಾಯಿಯೊಂದು ಅದನ್ನು ಬಾಯಲ್ಲಿ ಕಚ್ಚಿಕೊಂಡು ಓಡಿತು. ತಾಯಿ

ಹಂದಿ ಪುನಃ ಅದನ್ನು ಬಿಡಿಸಿ ತರಲು ಬೆನ್ನಟ್ಟುತ್ತಿದ್ದಂತೆ. ಅಲ್ಲಿದ್ದ ನಾಯಿಗಳೆಲ್ಲ ಒಟ್ಟಾಗಿ ಅದರ ಮೇಲೆ ಮುಗಿಬಿದ್ದು ಅದಕ್ಕೆ ಅಲಕು ಮಲಕು ಹಚ್ಚಿ ತಡೆಗೋಡೆ ಒಡ್ಡಿದವು.

ನಾಯಿಗಳ ಆ ಷಡ್ಯಂತ್ರದಲ್ಲಿ ಬಂದಿಯಾದಂತೆ ಆ ತಾಯಿ ಹಂದಿ ತಹತಹಿಸುತ್ತಲೇ ಸುತ್ತಲೂ ಒಮ್ಮೆ ಅಸಹಾಯಕ ದೃಷ್ಟಿ ಬೀರಿತು. ಬೆದರದೇ 'ಒಬ್ಬನೇ ಆಗಿ ಮುಂದೆ ಬಂದರೆ ತಿವಿದು ಕೊಂದು ಬಿಟ್ಟೇನು' ಎನ್ನುವಂತೆ ಗರ್ಜಿಸಿತು. ನಾಯಿ ಹುಷಾರು ಪ್ರಾಣಿ. ಒಂಟಿಯಾಗಿ ಒಂದೂ ಅದರತ್ತ ನುಗ್ಗುವ ಧೈರ್ಯ ಮಾಡಲಿಲ್ಲ. ಅವುಗಳಿಗೆ ಬೇಕಾದದ್ದು ಎಳೆ ಮರಿಯೇ ಹೊರತು ಈ ದೊಡ್ಡ ಹಂದಿಯಲ್ಲ. ನಿರುಪಾಯವಾಗಿ ತಾಯಿ ಹಂದಿ. ಪಕ್ಕದ ಗಟಾರದಲ್ಲಿ ಇಳಿದು ಕಿಚಾಯಿಸುತ್ತಿದ್ದ ಉಳಿದ ಮರಿಗಳನ್ನು ಸೇರಿಕೊಂಡಿತ್ತು.

ಅದೇ ಹೊತ್ತಿಗೆ. ಅನತಿ ದೂರದಲ್ಲಿ ನಡು ಬೀದಿಯಲ್ಲಿ ಹಾಗೆ ಎಳೆಯ ಹಂದಿ ಮರಿಯನ್ನು ಕಚ್ಚಿ ಹಿಡಿದು ಬರುತ್ತಿದ್ದ ನಾಯಿಗೆ. ಎದುರಾದ ಮತ್ತೊಂದು ನಾಯಿ ಅದರ ಬಾಯಲ್ಲಿದ್ದ ಮರಿಯ ಮತ್ತೊಂದು ಭಾಗಕ್ಕೆ ಬಾಯಿ ಹಾಕಿ ಎರಡೂ ವಿರುದ್ಧ ದಿಕ್ಕಿನಲ್ಲಿ ಎಳೆಯ ಹತ್ತಿದವು. ಬಹುಶಃ ಮರಿಯ ಹೊಟ್ಟೆಯನ್ನು ಸಿಗಿಯುವುದೇ ಅವುಗಳ ಉದ್ದೇಶವಿತ್ತೇನೋ. ಹಂದಿ ಮರಿಯ ಆಗಿನ ಆಕ್ರಂದನ ಬೆಚ್ಚಿ ಬೀಳುವಂತಿತ್ತು. ನಡು ರಸ್ತೆಯಲ್ಲಿ ನಡೆಯುತ್ತಿದ್ದ ಆ ಹತ್ಯಾಕಾಂಡವನ್ನು ನೋಡಿ ಮಮ್ಮಲ ಮರುಗಿದ. ಪಿಡಬ್ಲ್ಯೂಡಿ ವಾಚ್‌ಮನ್ ಕೈಗೆ ಸಿಕ್ಕ ಭಾರವಾದ ಕಟ್ಟಿಗೆ ತುಂಡೊಂದನ್ನು ಹೊತ್ತು ತಂದವನೆ ಮರಿಯನ್ನು ಬಾಯಲ್ಲಿ ಹಿಡಿದು ಬಂದಿದ್ದ ನಾಯಿಯ ಡುಬ್ಬಕ್ಕೆ ಹೇರುತ್ತಿದ್ದಂತೆ– ತತ್ತರಿಸಿದ ಆ ನಾಯಿ 'ಸತ್ತೆನಪ್ಪೋ' ಎಂದು ವಧಸ್ಥಾನದಲ್ಲಿನ ಹೋತಿನಂತೆ ಕೆಟ್ಟದಾಗಿ ಅರಚಿ ಬಾಯಿ ಬಿಟ್ಟಿತ್ತು. ಅದರ ವಿಕಾರ ದನಿಗೆ ಮತ್ತೊಂದು ನಾಯಿಯೂ ಬೆಚ್ಚಿ ಬಿದ್ದು. ಆ ಮರಿಯನ್ನು ನಡುರಸ್ತೆಯಲ್ಲಿಯೇ ಚೆಲ್ಲಿ ಅಷ್ಟು ದೂರ ಓಡಿಹೋಗಿ ನಿಂತು. ಮುಂದಿನ ಬೆಳವಣಿಗೆಯನ್ನು ಎದುರು ನೋಡುತ್ತಿತ್ತು.

ಆದರೇನು ? ನಾಯಿಗಳ ಮರಣಾಂತಕ ಹಲ್ಲೆಯ ಆ ಕಿತ್ತಾಟದಲ್ಲಿ ಆಗಲೇ ಎಳೆಯ ಹಂದಿ ಮರಿಯ ಹೊಟ್ಟೆ ಸಿಗಿಯಲ್ಪಟ್ಟು ಕರುಳುಗಳು ಹೊರಬಿದ್ದು ನೇತಾಡುತ್ತಿದ್ದವು. ಅದು ನಡುದಾರಿಯಲ್ಲಿ ಅವನ್ನು ಕಸೆಯಂತೆ ಎಳೆದುಕೊಂಡೇ ನಡುಗುತ್ತ ಹೊರಟಿದ್ದ ಆ ದೃಶ್ಯ ಕರುಣಾಜನಕವಾಗಿತ್ತು. ಅದಕ್ಕೆ ಕಾರಣವಾದ ನಾಯಿಗಳತ್ತ ಹುಡುಗರು ಕಲ್ಲು ಬೀರಿ ಅಟ್ಟಿಸಿಕೊಂಡು ಹೋದರು. ನಿಂತು ನೋಡುತ್ತಿದ್ದವರೆಲ್ಲ ಪಾಪ ಎಂದು ಲೊಚಗುಟ್ಟಿದರು. ಆ ಮರಿ ತನ್ನ ತಾಯಿಯನ್ನು ಸೇರಿತೋ ಇಲ್ಲವೋ. ಅದರ ಗತಿ ಏನಾಯಿತೋ ಗೊತ್ತಿಲ್ಲ. ಜನ ಅಂತೂ ನಾಯಿಗಳ ಬಾಯಿಂದ ಬಿಡಿಸಿದ್ದರಷ್ಟೆ.

ಬೀದಿ ನಾಯಿಗಳು ಅಂದು ನಡೆಸಿದ ಆ ಶಿಕಾರಿ ಮಾತ್ರ ಕಣ್ಣಿಗೆ ಕಟ್ಟಿದಂತಿದೆ. ಅವುಗಳ ಉಪಾಯವಾದ ಆಕ್ರಮಣಶೀಲ ಪ್ರವೃತ್ತಿಯನ್ನು. ಆ ತರಬೇತಿಯನ್ನು ಎಲ್ಲಿಂದ ಪಡೆದಿದ್ದವೊ ತಿಳಿಯದು. ಅವುಗಳ ಶಿಕಾರಿ ತಂತ್ರಕ್ಕೆ ಅವಾಕ್ಕಾಗಿ ಹೋಗಿದ್ದೆ. ಆ ಕಾರಣಕ್ಕಾಗಿಯೇ ಮನುಷ್ಯ ಬೇಟೆಯಾಡಲು ನಾಯಿಗಳ ನೆರವನ್ನು ಅಪೇಕ್ಷಿಸುತ್ತಿದ್ದನೇನೊ. ಆ ಕಾರಣಕ್ಕಾಗಿಯೇ 'ಘೂತುಗನ ಬೇಟೆ ನಾಯಿ' ಶಿಲಾಶಾಸನದಲ್ಲೂ ದಾಖಲಾಗಿದೆ.

● ▼

ಈರಪ್ಪ ಎಂ. ಕಂಬಳಿ
ಸಂಶೋಧನಾಧಿಕಾರಿ. ಭಾಷಾಂತರ ನಿರ್ದೇಶನಾಲಯ. ಕಾವೇರಿ ಭವನ. ಎಫ್-ಬ್ಲಾಕ್. ಬೆಂಗಳೂರು - ೫೬೦ ೦೦೯ ✆ : ೦೮೦ - ೨೨೪೯೮೦. ೨೨೭೧೩೬೧

ಬೆಳ್ಳಕ್ಕಿಗಳ ಲೋಕದಲ್ಲಿ

▲ ನಾಟಕ

ನಾಟಕರೂಪ : ಶಿರೀಷ ಜೋಶಿ   ಕತೆ : ರಾಘವೇಂದ್ರ ಪಾಟೀಲ

ರಂಗದ ಮೇಲೆ ಮಂದ ಬೆಳಕು ಮೂಡತೊಡಗಿದಂತೆ ಸೂತ್ರಧಾರ ತನ್ನ ಇಬ್ಬರು ಸಂಗಡಿಗರೊಡನೆ ಹಾಡುತ್ತ ಬರುತ್ತಾನೆ. ಸದ್ಯ ರಂಗದ ಮೇಲೆ ಯಾವ ಪರಿಕರಗಳೂ ಇರುವುದಿಲ್ಲ.

ಸೂತ್ರಧಾರ: ಬೆಳ್ಳಕ್ಕಿ ಹಿಂಡು ಹಾರ್ಯಾವೋ । ಆಕಾಶದಾಗ
ಬೆಣ್ಣಿಯ ಮುದ್ದಿ ತೇಲ್ಯಾವೋ ॥
ಗಣಪತಿಯ ಗುಡಿಗೆ ಬಂದಾವೋ । ಬೆಳ್ಳಕ್ಕಿ ಹಿಂಡು
ಗುರುವಿನ ಪಾದಕ ಎರಗ್ಯಾವೋ ॥
ನೆಲತುಂಬ ಹಾಲು ಹರಿಧಾಂಗೋ । ಭೂಮಿಯ ಮ್ಯಾಲ
ಕೈಲಾಸ ಇಳಿದು ಬಂಧಾಂಗೋ ॥
ಸುತ್ತೆಲ್ಲ ಊರು ನೋಡ್ಯಾವೋ । ನೋಡಿದ ಮ್ಯಾಲ
ಪರಿವ್ಯಾನ ಹೊಲದಾಗಿಳದಾವೋ ॥
ಹಸಿರಿನ ಪೈರು ನೋಡ್ಯಾವೋ । ಬೆಳ್ಳಕ್ಕಿ ಹಿಂಡು
ಬಾವಿಯ ನೀರು ಕುಡದಾವೋ ॥
ಮತ್ತ ಮ್ಯಾಲಕ ಹಾರ್ಯಾವೋ । ಹೋಗೂವಾಗ
ಹೊಲಾ ಮತ್ತ ಬಾವೀನs ಒಯ್ದಾವೋ ॥

ಸೂತ್ರಧಾರ ನಿಧಾನವಾಗಿ ಮರೆಯಾಗುತ್ತಿರುವಂತೆ, ಆದೇ ಖಾಲಿ ರಂಗದ ಮೇಲೆ ಹುಚ್ಚ ಪರಿವ್ಯಾ ಪ್ರವೇಶಿಸುತ್ತಾನೆ. ಆತನ ಕಣ್ಣು ಆಕಾಶದತ್ತ ನೆಟ್ಟು ನಿಂತಿವೆ. ಮುಖದಲ್ಲಿ ಉದ್ವಿಗ್ನತೆ, ಕಳವಳ, ಹತಾಶೆ, ತಿರಸ್ಕಾರ ಎಲ್ಲವೂ ಮನೆ ಮಾಡಿ ಮುಖ ವಿಚಿತ್ರಗೊಂಡಂತಿದೆ. ಆತ ತನ್ನಷ್ಟಕ್ಕೆ ತಾನೇ ಮಾತನಾಡಿಕೊಳ್ಳುತ್ತಿದ್ದಾನೆ.

ಪರಿವ್ಯಾ : **(ಆಕಾಶದಿಂದ ಯಾರನ್ನೋ ಕರೆಯುತ್ತಿರುವಂತೆ)** ಬಾ! ಬಾ! ಬಾ. ಬೆಳ್ಳಕ್ಕಿ ಬಾ. ಬರೂವಾಗ ನನ್ನ ಹೊಲಾ ತಗೊಂಡ ಬಾ. ನನ್ನ ಹೊಲದಾಗಿನ ಬಾವಿ ತಗೊಂಡ ಬಾ. ಬಾವ್ಯಾಗಿನ ತಿಳಿ ಗಂಗವ್ವನ ತಗೊಂಡ ಬಾ. ಬಾ. ಬಾ. ಬಾ ಬೆಳ್ಳಕ್ಕಿ ಬಾ. **(ಯಾರೂ ಬರುವುದಿಲ್ಲ. ಸ್ವಲ್ಪ ತಡೆದು)** ಅಯ್ಯೋ ಬರ್ರ್ಯೋ! ಯಾರರೇ ಬಂದು ನನ್ನ ಹೊಲಾ. ಬಾವಿ ಉಳಿಸಿ ಕೊಡ್ರ್ಯೋ– ಅಲ್ಲಿ ನೋಡ್ರಿ ಬೆಳ್ಳಕ್ಕಿಗಳೆಲ್ಲಾ ಕೂಡಿ ನನ್ನ ಹೊಲಾ ಒಯ್ಯಾಕತ್ಯಾವ. ಓಡೀರಿ ಅವನ್ನ. ಓಡೀರಿ ಆ ತುಡಗ ಹಕ್ಕಿಗೋಳ್ನ. ಓಡೀರಿ... ಓಡೀರಿ... ಓಡೀರಿ... **(ಈಗಲೂ ಯಾರೂ ಬರುವುದಿಲ್ಲ)** ಬರ್ರ್ಯೋ... ಬೆಳ್ಳಕ್ಕಿ ಓಡೀಬರ್ರ್ಯೋ... **(ಮತ್ತೆ ನಿರೀಕ್ಷೆ, ಯಾರೂ ಬರುವುದಿಲ್ಲವೆಂಬುದು ಖಾತ್ರಿಯಾದಾಗ, ಕೊನೆಗೆ ತಾನೇ ಕಲ್ಲು ಹೊಡೆಯ ತೊಡಗುತ್ತಾನೆ. ಮೇಲೆ ನೋಡುತ್ತಾ ಕೈಯಲ್ಲಿ ಕಲ್ಲು ಹಿಡಿದು ಓಡತೊಡಗುತ್ತಾನೆ. ಆತ ಬೆಳ್ಳಕ್ಕಿಗಳನ್ನು ಹಿಂಬಾಲಿಸಿ ಓಡಿ ಓಡಿ ಸುಸ್ತಾಗಿ ಕೊನೆಗೆ ಒಂದೆಡೆ ಕೂರುತ್ತಾನೆ.)** ಥೂ! ಇವಸೌವ್ವನ. ಈ ಬೆಳ್ಳಕ್ಕಿಗೋಳು ನನ್ನ ಕೈಗೆ ಸಿಗಾಣೆಲ್ಲ. ನನಗೂ ಈ ಬೆಳ್ಳಕ್ಕಿಗೋಳಗತೆ ಹಾರಾಕ ಬಂದಿದ್ರ ಎಷ್ಟು ಪಾಡಿತ್ತು! ಹಾರ್ಯಾಡಕೋಂತ ಹೋಗಿ ಆ ಬೆಳ್ಳಕ್ಕಿಗೋಳ್ನ ಓಡದು –ಅವುತರ ಕುತಗೀ ಕೊಯ್ದು –ನನ್ನ ಹೊಲಾ ಮತ್ತ ಬಾವಿ ಬಿಡಿಸಿಕೊಂಡು ಬರತಿದ್ದೆ! ಆದರs... ಆದರs... ನನಗ ಹಾರಾಕ ಬರಾಂಗಿಲ್ಲ. ನಾನು ನೆಲದ ಮ್ಯಾಲ... ಅವು ಮುಗಲ ಮ್ಯಾಲ. ನಾನು ನೆಲದ ಮ್ಯಾಲ... ಬೆಳ್ಳಕ್ಕಿಗೋಳು ಮುಗಲ ಮ್ಯಾಲ... **(ಅದನ್ನೇ**

ಮತ್ತೆರಡು ಸಲ ಅಂದು ನಗತೊಡಗುತ್ತಾನೆ. ನಗು ಕ್ರಮೇಣ ಹುಚ್ಚು ನಗೆಯಾಗಿ ಪರಿವರ್ತನೆಯಾಗುತ್ತದೆ. ಆ ಹುಚ್ಚು ನಗೆ ಕೊನೆಯಲ್ಲಿ ಅಳುವಾಗಿ ಪರಿವರ್ತನೆ ಹೊಂದುತ್ತದೆ. **ಆತ ಅಳುತ್ತಾ ತನ್ನೊಳಗೆ ತಾನು ಮಾತನಾಡಿಕೊಳ್ಳುತ್ತಾನೆ.)** ಹೊಡೀಬ್ಯಾಡ್ರೀ.... ನನ್ನ ಹೊಡೀಬ್ಯಾಡ್ರಿ. ನೀವು ಹೇಳಿಧಂಗ ಕೇಳ್ತೀನಿ. ಯಪ್ಪಾ - ನಿಮ್ಮ ಕೈ ಮುಗೀತೀನಿ. ನನ್ನ ಬಿಟ್ಟ ಬಿಡ್ರಿ..... ಪ... ಪ... ನಮ್ಮವ್ವ ಮುದಿಕಿ ಅದಾಳ. ಆಕೀಗೇನೂ ಮಾಡಬ್ಯಾಡ್ರಿ... ಬಿಡ್ರಿ ಆಕಿನ್ನ... ಬಿಡ್ರಿ ಆಕಿನ್ನ... ನಿಮ್ಮ ಕಾಲ ಬೀಳ್ತೀನಿ ನಮ್ಮವ್ವಗ ಏನೂ ಮಾಡಬ್ಯಾಡ್ರಿ. ನಾವಿಬ್ರೂ ನೀವು ಹೇಳಿಧಂಗ ಕೇಳ್ತೀವಿ. ನಿಮ್ಮ ಮಾತು ಮೀರಾಂಗಿಲ್ಲ. ನಮ್ಮನ್ನ ಬಿಟ್ಟು ಬಿಡ್ರಿ... ನಮ್ಮನ್ನ ಬಡೀಬ್ಯಾಡ್ರಿ. **(ಯಾರೋ ಬಡಿಯುತ್ತಿದ್ದಾರೆಂದು ಭ್ರಮಿಸಿ ಕೈಗಳನ್ನು ಹೊಡೆತಕ್ಕೆ ಅಡ್ಡವಾಗಿ ಹಿಡಿಯುತ್ತ)** ಬ್ಯಾಡ... ಹೊಡೀಬ್ಯಾಡ್ರಿಯಪ್ಪಾ... ನೀವs ನನ್ನ ತಂದಿ - ತಾಯಿ ಎಲ್ಲಾ. ಹೊಡೀಬ್ಯಾಡೋ ನನ್ನಪ್ಪಾ... ಯಪ್ಪಾ ಹೊಡೀಬ್ಯಾಡ. **(ಹೊಡೆತ ತಾಳಲಾರದೆ ಹೊಯ್ಕೊಳ್ಳುತ್ತಾನೆ.)** ಹೋತು. ಎಲ್ಲಾ ಹೋತು. ಎಲ್ಲಾ ಬೆಳ್ಳಕ್ಕಿಗಳ ಪಾಲಾಗಿ ಹೋತು... ಹೋತು... ಹೊಲದಾಗಿನ ಬೆಳಿ ಹೋತು. ಬಾವಿ ಹೋತು. ಬಾವ್ಯಾಗಿನ ನೀರ ಹೋತು. ಹೊಲಾ ಹೋತು. ಮನೀ ಹೋತು. ಎಲ್ಲಾ ಹೋತು. ಹೋತು. ಬೆಳ್ಳಕ್ಕಿ ಬಂದ ಮ್ಯಾಗ ಎಲ್ಲಾ ಹೋತು. **(ಹೋತು, ಹೋತು ಎನ್ನುತ್ತ ಕುಸಿಯುತ್ತಾನೆ. ಕುಸಿದವನು ನಿಧಾನವಾಗಿ ನೆಲದತ್ತ ಮುಖ ಮಾಡಿ ಮಲಗಿಬಿಡುತ್ತಾನೆ.)**...ಇಲ್ಲ ...ನಾ ನೋಡಂಗಿಲ್ಲ ಇನ್ನ ಮ್ಯಾಕ ಎಂದೆಂದೂ ಮುಗಿಲ ನೋಡಂಗಿಲ್ಲ. ಮುಗಿಲಾ ನೋಡಂಗಿಲ್ಲ... **(ದನಿ ನಿಧಾನವಾಗಿ ಕ್ಷೀಣವಾಗುತ್ತಿದ್ದಂತೆ ಮತ್ತೆ ಕತ್ತಲು ಆವರಿಸುತ್ತದೆ. ಮಂದ ಬೆಳಕಿನಲ್ಲಿ ಸೂತ್ರಧಾರ ತನ್ನಿಬ್ಬರು ಸಂಗಡಿಗರೊಂದಿಗೆ ಹಾಡುತ್ತ ಬರುತ್ತಾನೆ.)**

ಸೂತ್ರಧಾರ: ಬೆಳ್ಳಕ್ಕಿ ಹಿಂಡು ಹಾರ್‍ಯಾವೋ । ಆಕಾಶದಾಗ
ಬೆಡಗಿನ ಲೋಕ ಮೂಡ್ಯಾವೋ ॥
ಸ್ವರ್ಗದ ಸೀಮಿಗೆ ಬಂದಾವೋ । ಬೆಳ್ಳಕ್ಕಿ ಹಿಂಡು
ಬಣ್ಣದ ಹೂವ ಮುಡದಾವೋ ॥
ಕಿಲಕಿಲನೆ ನಕ್ಕು ನಲಿದಾವೋ । ನಲಿವಿನ್ಯಾಗ
ಸುಖವನ್ನೆ ಸೂರೆಗೊಂಡಾವೋ ॥
ಕಾಲಾಗಿನ ಗೆಜ್ಜಿ ನಲಿದಾವೋ । ನವಿಲಿನ್ಹಾಂಗ
ಗರಿಬಿಚ್ಚಿ ಮೈಯ ಮರತಾವೋ ॥
ಯೌವನದ ಸೊಕ್ಕು ಮೆರದಾವೋ । ಮರಿವಿನ್ಯಾಗ
ಬಯಕಿಗೆ ಬಣ್ಣ ಮೂಡ್ಯಾವೋ ॥

ಗೌಡರ ಮನೆಯ ಒಳ ಜಗುಲಿ. ಒಂದೆಡೆ ಗೌಡ ಎತ್ತರದ ವೇದಿಕೆಯ ಮೇಲೆ ಕುಳಿತಿದ್ದಾನೆ. ಆತನ ಎದುರಿಗೆ ಎಲೆ ಅಡಿಕೆಯ ಬೆಳ್ಳಿಯ ತಟ್ಟೆ ಇದೆ. ಆ ವೇದಿಕೆಗೆ ಆನಿದಂತೆ ಆಚೆ - ಈಚೆ ಇಬ್ಬರು ಸೇವಕರು ಕುಳಿತಿದ್ದಾರೆ. ಗೋಡೆಗೆ ಅಂದರೆ, ಗೌಡ ಕುಳಿತಿರುವ ವೇದಿಕೆಯ ಬಲಗಡೆ ಎತ್ತರದಲ್ಲಿ ಕಟ್ಟಿಗೆಯ ಹಲಗೆಯ ಮೇಲೆ ಆಸೀನವಾದ ರೇಡಿಯೋ ತನ್ನ ಕೆಲಸ ಮಾಡುತ್ತಿದೆ. ಅದರಲ್ಲಿ ಕೇಳಿಬರುತ್ತಿರುವ ‘ ಕರಿ ಎತ್ತ ಕಾಳಿಂಗS ಬಿಳಿ ಎತ್ತ ಮಾನಿಂಗ ’ ಎಂಬ ಹಾಡು ಕೃಷಿರಂಗ ಕಾರ್ಯಕ್ರಮ ಇನ್ನೇನು ಪ್ರಾರಂಭವಾಗಲಿದೆ ಎಂಬುದನ್ನು ಸೂಚಿಸುತ್ತಿದೆ. ಆದರೆ ಗೌಡರಿಗಾಗಲಿ, ಅವರ ಸೇವಕರಿಗಾಗಲಿ ಇದರ ಪರಿವೆ ಇಲ್ಲ. ಗೌಡರು ಯಾವುದೋ ದೀರ್ಘಾಲೋಚನೆಯಲ್ಲಿ ಮುಳುಗಿದ್ದಾರೆ. ಆ ಯೋಚನೆಯ ಫಲಶ್ರುತಿ ಮಾತುಗಳ ರೂಪದಲ್ಲಿ ಇನ್ನೇನು ಬಂದೇ ಬಿಡಬಹುದು ಎಂಬ

ಕಾತರದಲ್ಲಿ ಅವರ ಮುಖವನ್ನೇ ನಿರುಕಿಸುತ್ತ ಗೌಡರ ಆಳುಗಳೂ ಕುಳಿತಿದ್ದಾರೆ. ಅಂಥದ್ದರಲ್ಲಿ ಆ ಯೋಚನಾ ಲಹರಿಗೆ ಭಂಗ ತಂದವ ನಿಂಗ್ಯಾ.

ನಿಂಗ್ಯಾ : (ನಿಧಾನವಾದ ಹೆಜ್ಜೆಯಿಡುತ್ತ, ಗೌಡರ ಏಕಾಗ್ರತೆಗೆ ಭಂಗ ತರಲೋ ಬೇಡವೋ ಎಂದು ಅನುಮಾನಿಸುತ್ತ, ಕೊನೆಗೆ ತಾನು ಹೇಳಬೇಕಾದುದನ್ನು ಹೇಳಲೇಬೇಕು ಎಂದು ನಿರ್ಧರಿಸಿದವನಂತೆ, ಬಾಗಿ ನೆಲ ಮುಟ್ಟಿ) ಶರಣ ಅಂದ್ನರೀ ಯಪ್ಪಾ.

ಗೌಡ : (ತನ್ನ ಏಕಾಗ್ರತೆಗೆ ಭಂಗ ತಂದ ಖದೀಮ ಯಾರೆಂದು ದುರುಗುಟ್ಟಿ ನೋಡಿ, ಆತ ನಿಂಗ್ಯಾ ಎಂಬುದು ಅರಿವಿಗೆ ಬಂದೊಡನೆ ದೃಷ್ಟಿಯಲ್ಲಿನ ತೀಕ್ಷ್ಣತೆಯನ್ನು ಕುತೂಹಲಕ್ಕೆ ಪರಿವರ್ತಿಸುತ್ತ) ಏನಾತಲೇ ನಿಂಗ್ಯಾ ? ಹಣ್ಣೋ ? ಕಾಯೋ ?

ನಿಂಗ್ಯಾ : ಊರಗೌಡರ ದಗದ ಎಂದರೆ ಕಾಯಾದೀತರ್‍ಯಾ ಧಣ್ಯಾರs ? ಯಾವಾಗಿದ್ರೂ ಅದು ಹಣ್ಣs ಅಲ್ಲೇನ್ರೀ ಯಪ್ಪಾ ?

ಗೌಡ : ಛೇಷಲೇ ಮಗನs. ಆಳ ಅನಬೇಕು ನಿನಗs ನೋಡು. ಹಂಗಾರ ಮುಂದಿನ ಯವಸ್ಥಾ ಮಾಡಾಕ ಅಡ್ಡೀ ಇಲ್ಲ ಅನ್ನು.

ನಿಂಗ್ಯಾ : ಹೌಂದರೀ ಯಪ್ಪಾ.

ಗೌಡ : ಬೇಶಾತು ಬಿಡು. ಆಳು. ಚಕಡಿ. ಎಣ್ಣಿ. ಎಲ್ಲಾ ಯವಸ್ಥಾ ಮಾಡಾಕ ಹೇಳ್ತೀನಿ. ನೀನು ಮುಗಿಯೂ ಮಟಾ ಅಲ್ಲೇ ಇದ್ದ ಬಿಡು. ಈಡಂಗೆ ರೊಟ್ಟಿ ಬಡಮು ಕಳಸಾಕ ಹೇಳತೀನಿ. ತ್ಯಾಟದ ಮನ್ಯಾಗ ಇರೋ ದನದ ಹೈನಾ ಸಾಕಾದೀತು ಅಂತ ಅನಸತೈತಿ. ಕಡಿಮಿ ಅನಿಸಿದ್ರs ಮುಂದ ನೋಡಾಕಾದೀತು.

ನಿಂಗ್ಯಾ : ಆತರೀ ಯಪ್ಪಾ.

ಗೌಡ : ಹಂಗs ಮನೀಗಿ ಹೋಗತ ಹೋಗತ ಹಾದ್ಯಾಗ ಸಿಗೋ ಆಳುಗಳ ಮನೀಗೆಲ್ಲ ಸುದ್ದಿ ಮುಟ್ಟಿಸಿ, ನಾಳೆ ಬೆಳಗಿನಿಂದನs ಹ್ವಾರೆಕ್ಕ ಬರಬೇಕಂತ ಹೇಳಿಬಿಡು.

ನಿಂಗ್ಯಾ : ಹ್ಞೂನ್ರೀ ಯಪ್ಪಾ.

ಗೌಡ : ತ್ವಾಟದ ಮನ್ಯಾಗಿರೋ ಕುರಪಿ - ಕುಡಗೋಲು ಬರೋ ಆಳಿಗೆ ಸಾಕಾಗತಾವು. ನಾಳೆ ದೌಡ ದಗದಾ ಸುರೂ ಮಾಡಾಕ ಹೇಳಿ ಬಿಡು.

ಅಷ್ಟರಲ್ಲಿ "ಗೌಡರs" "ಗೌಡರs" ಎಂಬ ದನಿ ಹೊರಗಿನಿಂದ ಕೇಳಿ ಬರುತ್ತದೆ.

ಗೌಡ : ಯಾರ ಬಂದಾರ ನೋಡಿ ಬಾರಲೇ ನಿಂಗ್ಯಾ.

ನಿಂಗ್ಯಾ ಹೊರ ಬಂದಿರುವವರು ಯಾರು ಎಂದು ನೋಡಲು ಸಾಗುತ್ತಾನೆ.

ಗೌಡ : (ಆಳುಗಳಿಗೆ) ನೋಡ್ರಲೆ. ನಾಳೆ ದೌಡ ಹ್ವಾರೆ ಚಾಲೂ ಆಗಬೇಕು. ತಿಳೀತs. ನೀವೂ ಎಲ್ಲಾರ ಮನಿಗೆ ಹೋಗಿ ಹಕೀಕತ್ತ ಹಿಂಗಿಂಗ ಐತಿ ಅಂತ ಹೇಳ್ರಿ. ಹೊತ್ತ ಮೂಡೂದ್ರಾಗ ಎಲ್ಲಾರೂ ತ್ವಾಟಕ್ಕ ಬರೂ ಹಂಗ ಯವಸ್ಥಾ ಮಾಡ್ರಿ.

ಇಬ್ಬರೂ : ಹ್ಞೂನ್ರೀ ಯಪ್ಪಾ.

ಗೌಡ : (ನಿಂಗ್ಯಾ ಮರಳಿ ಬಂದು ಸುಮ್ಮನೆ ನಿಂತದ್ದನ್ನು ಗಮನಿಸಿ) ಯಾರ ಬಂದಾರಲೇ ?

ನಿಂಗ್ಯಾ : (ನಾಚುವನು.)

ಗೌಡ : ಯಾರ ಬಂದಾರ ಹೇಳಲೇ ನಿಮ್ಮೌನ.

ನಿಂಗ್ಯಾ : (ಏನು ಹೇಳಲೂ ತಿಳಿಯದೆ ಮತ್ತೆ ನೆಲ ನೋಡುವನು.)

ಗೌಡ : ಯಾವ ಭೋಸಡಿ ಮಗಾಲೇ ಇಂವಾ ? ಬಂದಾಕಿ ನಿನ್ನ ಹೇಂತೇನ ? ಯಾಕ ಹಿಂಗ ನಾಚಾಕತ್ತೀದಿ ?

ನಿಂಗ್ಯಾ : (ಮತ್ತ ನಾಚಿ) ಇಲ್ರಿ ಯಪ್ಪಾ.

ಗೌಡ : ಮತ್ತ, ಯಾರ ಬಂದಾರಂತ ಬೊಗಳಲಾ.

ನಿಂಗ್ಯಾ : ಪ... ಪ...

ಗೌಡ : (ಜಬರಿಸಿ) ಹ್ಞೂ ಬೊಗಳು.

ಇಷ್ಟೊತ್ತಿಗೆ ಗೌಡತಿ, ಒಳಬಾಗಿಲಿನಿಂದ ಬಾಗಿಲಿಗೆ ಬರುತ್ತಾಳೆ. ಗೌಡ ಆಕೆಯನ್ನು ಗಮನಿಸುವುದಿಲ್ಲ.

ನಿಂಗ್ಯಾ : (ಅಂಜಿ) ಪರವ್ವರೀ.

ಗೌಡ : (ಗಡಬಡಿಸಿ) ಏನಂದೀ ?

ನಿಂಗ್ಯಾ : ಪರವ್ವರೀ.

ಗೌಡ : ಏ... ಸೂಳೀಮಗನs... ನೆಟ್ಟಗ ನೋಡಿದಿಯಿಲ್ಲೊ ?

ನಿಂಗ್ಯಾ : ಹೌಂದ್ರಿ ಯಪ್ಪಾ ಪರವ್ವನರೀ.

ಗೌಡ : ಇಲ್ಲಿಗ್ಯಾಕ ಬಂದಳಪಾ ಆಕಿ ?

ನಿಂಗ್ಯಾ : ನಂಗೂ ಹಂಗs ಅನಿಸಿತರಿ. (ಅನುಮಾನಿಸುತ್ತ) ಒಳಗ ಬರಾಕ ಹೇಳ್ಲಿ ಏನ್ರಿ ?

ಗೌಡ : (ಯೋಚಿಸಿ) ಹ್ಞೂ ! ತೊಯ್ಸಿಗೊಂಡ ಮ್ಯಾಕ ಮಳಿ ಅಂಜಿಕಿ ಏನೈತಿ ? ಯಾಕ ಬಂದಾಳೋ ಏನೋ ? ಬಾ ಅನ್ನು. (ನಿಂಗ್ಯಾ ಹೋಗುವನು.)

ಗೌಡತಿ : (ಸಿಟ್ಟಿನಿಂದ ರೇಡಿಯೋದ ಕಿವಿ ಗಿಂಡಿ) ಇಲ್ಲಿಗೂ ಬಂದಳೇನ ಆ ನಿನ್ನ ಸೂಳಿ ? ನಾ ಇನ್ನಾ ಜೀವಂತ ಅದೀನು ಅಂಬೂದು ಗೊತ್ತಿಲ್ಲಂತ ಕಾಣತೈತಿ ಆಕೀಗಿ. ಏಟ ಧೈರ್ಯಾ ಆಗಿದ್ದೀತು ಆಕಿಗಿ, ಇಲ್ಲಿ ಮಟಾ ಬರಾಕ ?

ಗೌಡ : (ನಿರುತ್ತರನಾಗಿ ಗೌಡತಿಯೆಡೆಗೆ ನೋಡುತ್ತಾನೆ.)

ಗೌಡತಿ : ನಡೀಲಿ. ನಡೀಲಿ. (ವ್ಯಂಗ್ಯವಾಗಿ) ನಿಮ್ಮ ನಡಕ ನಾ ಯಾಕ ಪಾಪ !

ಧುಸುಮುಸು ಮಾಡುತ್ತ ಒಳಸಾಗುತ್ತಾಳೆ. ಗೌಡ ಪೇಚಿಗೊಳಗಾದವರಂತೆ ಒದ್ದಾಡುತ್ತಾನೆ. ಪರವ್ವ ನಿಂಗ್ಯಾ ಒಳಬರುತ್ತಾರೆ.

ಪರವ್ವ : ಅಡ್ಡ ಬಿದ್ನಿ ಯಪ್ಪಾ.

ಗೌಡ : (ಅರೆಬಿಗುಮಾನದಿಂದ) ಹ್ಞೂ ! ಏನ ಬಂದದ್ದು ?

ಪರವ್ವ : ಒಂದು ದಗದ ಬೇಕಾಗೇತಿ. ಕೊಡಾವ್ರೋ ಇಲ್ಲೋ ಹೇಳು.

ಗೌಡ : ಏನಾ ?

ಪರವ್ವ : ಕೊಡಾಂವೋ ಇಲ್ಲೋ ಹೇಳ್ರಿ ಮದಲು.

ಗೌಡ : (ಸ್ವಲ್ಪ ಬಿಗುಮಾನ ಸಡಿಸಿಲಿ) ಎಲಾ ಇವನ ! ಇದ್ರs ಕೊಟ್ಟs ಕೊಡತೇನು.

ಪರವ್ವ : ಒಂದು ಪಿಕಾಸಿ. ಒಂದ ಸಲಕಿ ಮತ್ತ ಒಂದ ಅಗಲಬಾಯಿ ಕುರಪಿ ಬೇಕಾಗಿತ್ತು.

ಗೌಡ : ಯಾಕಾ ?

ಪರವ್ವ : ನೀ ಕೊಟ್ಟ ಮಡ್ಡಿ ಐತೆಲಾ. ಅದನ್ನ ನಿನ್ನ ಮಗಾ ಸಾಗ ಮಾಡತನ ಅಂತಾನ.

ಗೌಡ : ಏನದ ನೀ ಮಾತಾಡೂದು.

ಪರವ್ವ : ಅದs. ನೀ ಕೊಟ್ಟ ಮಡ್ಡಿ ಐತೆಲಾ. ಅದನ್ನ ನಿನ ಮಗಾ –ಪರಗೌಡ– ಸಾಗ ಮಾಡತಾನಂತ.

ಈ ಮಾತು ಕೇಳಿ ನಿಂಗ್ಯಾ ಮತ್ತು ಇಬ್ಬರೂ ಆಳುಗಳು ನಗುತ್ತಾರೆ. ಪರವ್ವ ಅದರ ಕಾರಣ ತಿಳಿಯದೆ ಟಕಮಕ ನೋಡತೊಡಗುತ್ತಾಳೆ. ಗೌಡ ಚಡಪಡಿಸುತ್ತಾನೆ.

ಗೌಡ : ಅದು ಆಗಲಾರದ ಮಾತು. ಕಲ್ಲ ಮಟ್ಟ್ಯಾಗ ಹಸರ ಬೆಳೀತೈತಿ ಅಂತನ್ನೂದು

ಮೂರ್ಖತನಾ. ತಾ ಅಂದರ ಏನಂತ ತಿಳಿದಾನ ಆ ಪರಿವ್ಯಾ! ತಲಿ ಗಟ್ಟಿ ಐತಿ ಅಂತ ಬಂಡಿಗಿ ಹಾಯಾಕ ಬರ್ತೈತೇನು? **(ಎಲ್ಲರನ್ನೂ ಒಮ್ಮೆ ನೋಡಿ)** ಯಾರು ಎಲ್ಲಿರಬೇಕೋ– ಹ್ಯಾಂಗಿರಬೇಕೋ– ಅಲ್ಲಿ– ಹಾಂಗ– ಇದ್ದರನs ಪಾಡ. ತಿಳೀತs.

ಪರವ್ವ : ನಾವು ತಿಳಿಸಿ ಹೇಳಿದಿವಿ. ಆದರs ಅಂವಾ ಕೇಳಾಕ ಒಲ್ಲ ಅಂತಾನ.

ಗೌಡ : ಕೇಳದಿದ್ದರ ಮುಕಳಿ ಮ್ಯಾಗ ನಾಕ ಒದ್ದ ಹೇಳು.

ಪರವ್ವ : **(ಅರೆ ನಾಚಿ)** ನಿನಗ ಗೊತ್ತಿಲ್ಲೇನು? ಅಂವಾ ನಿನ್ನ ಮಗಾ. ನಿನ್ನ ಗುಣಾನs ಬಂದಾವ ಅಂವಗೂ. ನಿಂದು ಹಂಗ ಹಿಡದ ಹಟಾನೋ ಹಾಂಗs ಅಂವಂದೂ.

ಗೌಡ : ಅಂವಾ ಏನ ಮಳಿಗಾಲ ಕಂಡಾನಂತ ಭೋಸಡಿ ಮಗಾ? ನಾನು ಸ್ವತಃ ಗೌಡ. ನಾನs ಕೈ ಬಿಟ್ಟಿದೀನಿ– ಅಲ್ಲಿ ಏನೂ ಬೆಳ್ಯಾಂಗಿಲ್ಲಂತ. ಇನ್ನು ಇಂವಾ ಯಾವ ಮೂಲ್ಯಾಗಿನ ಗುಬ್ಬಿ ಅಂತೀನಿ.

ಪರವ್ವ : ಅಂವಾ ಯಾರ ಏಟ ಹೇಳಿದರೂ ಕೇಳಾಕ ತಯಾರಿಲ್ಲ. ಸಲಿಕಿ. ಪಿಕಾಸಿಗಂತ ಕಮ್ಮಾರ ಕಾಳ್ಯಾನ ಕಡಿಗೆ ಹೋಗಿದ್ನಂತ. ಅಂವಾ ಇಲ್ಲದ ಮಾತಾಡಿದ್ನಂತ ಭಾಮಟ್ಯಾ.

ನಿಂಗ್ಯಾ : ಇಲ್ಲದ್ದು ಅಂದರs...

ಕರವ್ವ : ಹೋಗಲಿ ಬಿಡು. ಅದ್ಯಾಕ ಈಗೆಲ್ಲಾ?

ಗೌಡ : **(ಸಿಟ್ಟಿನಿಂದ)** ಏನಂದ ಹೇಳು.. ಆ ಕಮ್ಮಾರ ಕಾಳ್ಯಾ.

ಪರವ್ವ : **(ಅನಿವಾರ್ಯವೆಂಬಂತೆ)** ಸುರುವಾತಿಗೆ, ಯಲ್ಯಾ ಸತ್ತಾನೇನೂ ಅಂತ ಆಡಿಸ್ಯಾಡಿದ್ರಂತ. ಅದಕ್ಕ ಇಂವಾ 'ಇಲ್ಲಾ, ಹಿಂಗಿಂಗೈತಿ' ಅಂತ ಹೇಳಿದ ಮ್ಯಾಲ– ಹೋಗಲಿ ಬಿಡು ಗೌಡರs, ಅದೆಲ್ಲಾ ಈಗ್ಯಾಕs?

ಗೌಡ : ಮುಂದೇನಾತು ಹೇಳು.

ಪರವ್ವ : ಹೋಗಲಿ ಬಿಡು ಅಂದ್ನೆಲಾ.

ಗೌಡ : ಅರ್ಧಾ ಹೇಳಿದ ಮ್ಯಾಗ ಅರ್ಧಂಗ ಬಿಡಾಕ ಬರ್ತೈತಿ? ಪೂರ್ತಿ ಹೇಳಿದ ಮ್ಯಾಗ ಮುಂದಿನ ಮಾತು.

ಪರವ್ವ : **(ಒಲ್ಲದ ಮನಸಿನಿಂದ ಎಂಬಂತೆ ನಟಿಸಿ)** 'ನಿಮ್ಮ ಅಪ್ಪನ್ನ ಕಳಿಸು. ಅಂದರs ಗೌಡರ ಕೊಡತಾರು' ಅಂದನಂತ. ಅಲ್ಲಾ, ಏಟು ಸೊಕ್ಕಿದ್ದೀತು ಈ ಕಾಳ್ಯಾಗ? ಇದs ಭಾಡಕೋ ಏಳೆಂಟ ವರಸದ ಹಿಂದ ನನ್ನ ನೋಡಿ ಜೊಲ್ಲ ಸುರಸತಿದ್ದ. ಈಗ ಹೀಂಗನ್ನು ಹಾಂಗ ಆಗಿದಾನ.

ಗೌಡ : ನಿಂಗ್ಯಾ, ಪರಿ ಹೇಳಿದ ಮಾತು ಕೇಳಿದೆಲ್ಲಾ?

ನಿಂಗ್ಯಾ : ತಿಳೀತರಿ ಯಪ್ಪಾ.

ಪರವ್ವ : ಅದೆಲ್ಲಾ ಉಸಾಬರಿ ನನ್ನ ಮುಂದ ಬ್ಯಾಡ. ಈಗ ನೀಯೇನ ಸಲಿಕಿ ಪಿಕಾಸಿ ಕೊಡಾಂವ್ರೋ ಇಲ್ಲ್ರೋ ಹೇಳ್ರಿ.

ಗೌಡ : ನೋಡ ಪರಿ, ಎಮ್ಮೀ ಮಗ್ಗಲದಾಗ ನಿಂತರ ತುಪ್ಪ ತಿಂಥಂಗ ಆಗೂದಿಲ್ಲ. ಮೈಮುರದು ದುಡೀಬೇಕಾಗತೈತಿ. ತಿಳೀತs.

ಪರವ್ವ : ಅದು ನಂಗೂ ಗೊತ್ತೈತಿ. ಅಂವಾ ಈಗಿನ ಕಾಲದ ಹುಡಗಾ. ಬೆಳ್ಳಕ್ಕಿ ಹಿಂಡ ನೋಡಿ ನಿನ್ನಂಗ ಮಳ್ಳ ಆಗಾಂವಲ್ಲ. ನೀ ಸುಮಾಕ ಸಲಿಕಿ ಪಿಕಾಸಿ ಕೊಡು. ಅಂವಾ ಏನ ಪವಾಡ ಮಾಡಿ ತೋರಸತಾನೋ ಇಬ್ಬರೂ ಕೂಡೇ ನೋಡೂಣಂತ.

ಗೌಡ : (ಸಮ್ಮತಿಸುತ್ತ) ನಿಂಗ್ಯಾ. ಓತ್ತಲ ಕೊಟಗ್ಯಾಗ ಹಳೇ ಸಲಿಕಿ ಗುದ್ದಲಿ ಅದಾವ- ಅಕಿಗೆ ಏನೇನ ಬೇಕೋ ಕೇಳಿ ಅವನ್ನ ಮನಿಗೆ ಮುಟ್ಟಿಸಿ ಬಾ.

ನಿಂಗ್ಯಾ : ಹ್ಞೂನ್ರೀ ಯಪ್ಪಾ.

••• ಕತ್ತಲು •••

ಸೂತ್ರಧಾರ ಹಾಗೂ ಆತನ ಇಬ್ಬರು ಸಂಗಡಿಗರು ಹಾಡುತ್ತ ಪ್ರವೇಶಿಸುತ್ತಾರೆ. ಪರವ್ವನ ಮನೆಯ ದೃಶ್ಯ ಹಿಂಬದಿಯಲ್ಲಿದೆ. ಒಂದು ಮೂಲೆಯಲ್ಲಿ ಯಲ್ಯಾ ಅಸ್ಥಮಾದಿಂದ ಗೂರುತ್ತ ಮಲಗಿದ್ದಾನೆ. ಇನ್ನೊಂದು ಮೂಲೆಯಲ್ಲಿ ಮಲ್ಲಿ ಅಡುಗೆ ಮಾಡುತ್ತಿದ್ದಾಳೆ. ಮತ್ತೊಂದೆಡೆ ಪರವ್ವ ಹಾಗೂ ಪರಿವ್ಯಾ ಗಲ್ಲಕ್ಕೆ ಕೈ ಹಚ್ಚಿಕೊಂಡು ಕೂತಿದ್ದಾರೆ.

ಸೂತ್ರಧಾರ: ಬೆಳ್ಳಕ್ಕಿ ಹಿಂಡ ಹಾರ್‍ಯಾವ್ರೋ । ಆಕಾಶದಾಗ
ಬೆಳ್ಳನ್ನ ಮೋಡ ತೇಲ್ಯಾವ್ರೋ ॥
ಬರಿದಂಥ ನೆಲಕ ಬಂದಾವ್ರೋ । ಬೆಳ್ಳಕ್ಕಿ ಹಿಂಡು
ನೆಲದಾಗಿನ ಕಲ್ಲ ಕಂಡಾವ್ರೋ ॥
ಕಲ್ಲಿಗೂ ಕಾಲು ಬಂದಾವ್ರೋ । ಕಾಲು ಬಂದು
ಥಕಥೈಯ ಕುಣತಾ ಕುಣದಾವ್ರೋ ॥
ಚಿಂತಿಯ ಮೋಡ ಕವಿದಾವ್ರೋ । ಕಲ್ಲುಗುಂಡು
ಮಳಿ ಬರುವ ಹಾದಿ ನೋಡ್ಯಾವ್ರೋ ॥

ಮಲ್ಲಿ : ಅಡಿಗಿ ತಯಾರೈತಿ. ಕುಂದರತೀಯೇನ ಉಣ್ಣಾಕ ?

ಪರಿವ್ಯಾ : ಏ... ನಿಮ್ಮೌನ... ಸುಮ್ಮಕಿರತೀಯೋ ಏನ ನಾಕ ಬಿಗೀಲ್ಯೋ ? ಹೊಲಾ ಮಾಡೂದು ಹೆಂಗಂತ ನಾವು ಚಿಂತಿ ಮಾಡಾಕತ್ತೀವಿ. ನಿಂಗ ಊಟದ ಚಿಂತಿ ಆಗೇತಲಾ.

ಪರವ್ವ : ಎಲ್ಲಾ ಬೇಜಮಿ ಆದಂಗಾಗೇತಿ. ಆದರೂ...

ಯಲ್ಯಾ : **(ಕುತೂಹಲದಿಂದ, ಮಲಗಿದ್ದಲ್ಲಿಂದಲೇ)** ಆದರೂ... ಅಂದರ ಏನಾ ?

ಪರಿವ್ಯಾ : ಏ... ಸುಮ್ನ ಬೀಳ್ಳೋ ಮಾರಾಯಾ. ನಿನ್ನ ಕೈಲೆ ನೀಗಿದ್ದರ ನಮಗ್ಯಾಕ ಈ ಗತಿ ಬರತಿತ್ತ ? ಕೈಲೆ ನೀಗದಿದ್ದರ ಕಾರಬಾರ ಯಾಂವ ಮಾಡಂತಾನು ?

ಪರವ್ವ : ಪರಗೌಡಾ. ಸಿಟ್ಟಿಗೆದ್ದರ ಕೆಲಸ ನೀಗಾಂಗಿಲ್ಲ. ತಲಿ ವಾಪರಿಸಿ ದಗದಾ ಮಾಡಬೇಕ.

ಪರಿವ್ಯಾ : ಅಲ್ಲ ಯವ್ವಾ. ನಾಳಿ ಆಳಿಗೆ ಪಗಾರ ಏನ ಕೊಡೂದಂತ ನಾ ಚಿಂತಿ ಮಾಡಾಕತ್ತೀನು. ಅಂಥಾವರಾಗ ಈಕಿ ಉಣ್ಣಾಕ ಕರೀತಾಳು. ಮತ್ತ ಅಂವಾ.. ಕಾರಬಾರ ಮಾಡಾಕ ಬರ್‍ತಾನು. ಸಿಟ್ಟ ಬರಾಣೆಲ್ಲ ?

ಪರವ್ವ : ನೀ ಸುಮ್ಮನಿರು ಅಂತ ನಾ ಹೇಳಿದ್ನೆಲ್ಲ. ನೀ ಉಣ್ಣಾಕ ನಡಿ. ಮುಂದಿನ ಯವಸ್ಥಾ ನನಗ ಬಿಡು.

ಪರಿವ್ಯಾ ಊಟದ ತಟ್ಟೆಯೆದುರು ಕೂಡುತ್ತಿರುವಂತೆಯೇ ಪರವ್ವ ಹಳೆಯದಾದ ಒಂದು ಟ್ರಂಕನ್ನು ಎಳೆದು ತಂದು ಅದರ ಕೀಲಿ ತೆಗೆಯುವ ಪ್ರಯತ್ನ ಮಾಡತೊಡಗುತ್ತಾಳೆ. ಕೀಲಿ ಒಮ್ಮೆಲೆ ತೆರೆದುಕೊಳ್ಳುವುದಿಲ್ಲ.

ಯಲ್ಯಾ : ಹಳೇ ಕಾಲದ ಟರಂಕ. ಹಳೇ ಕಾಲದ ಕೀಲಿ. ಒಮ್ಮಗೀಲೆ ತಗೀ ಅಂದರ ಹ್ಯಾಂಗ ತಗದಾವ್ರೂ ?

ಪರಿವ್ಯಾ : (ಉಣ್ಣುತ್ತಲೇ) ಏ... ಸುಮ್ನ ಬೀಳ್ಳೋ ಮಾರಾಯಾ. ಏಟ ಸರ್ತಿ ಹೇಳಬೇಕ ನಿನಗ ?

ಮಲ್ಲಿ : ಉಣ್ಣಾಕ ಕುಂತಾಗ ಹೆಂತಾ ಸಿಟ್ಟದು ? ಸುಮಾಕ ಉಣ್ಣರೆಲಾ ?

ಪರವ್ವ : **(ಕೀಲಿ ತೆರೆಯಲು ಪ್ರಯತ್ನಿಸಿ ಸೋತು)** ಏ... ಮಲ್ಲಿ... ಈ ಹಳೇ ಕಾಲದ ಕೀಲಿ ನಾಯಾಕ ಬಾಯಿ ಬಿಡಲಿ ಅಂತೈತಿ. ಒಂದೀಟು ಚುಮಣಿ ಎಣ್ಣೀನಾರೆ ಹಾಕು ಇದರ ಬಾಯಾಗ. ಜಂಗ ಬಿಟ್ಟಿತಂದರs ಕೀಲಿ ಬರಭೌದು.

ಯಲ್ಯಾ : ಹೌದು. ಮದಲ ಜಂಗ ಹೋಗಬೇಕು. ಆ ಮ್ಯಾಕ ಕೀಲಿ ತಾನs ತಗೀತೈತಿ.

ಪರಿವ್ಯಾ : ಏ... ಯಪ್ಪಾ... ಸುಮ್ನ ಬೀಳೋ ಮಾರಾಯಾ. ಆ ಜಂಗು ನಿನ್ನ ಕಾಲದಾಗs ಹಿಡದದ್ದು. ಇನ್ನಾ ಬಿಡಾಕ ಒಲ್ಲೆ ಅಂತೈತಿ. ನಿನ್ನ ಕಾಲದಾಗ ಜಂಗ ಬಿಟ್ಟಿದ್ದರs ಈಟೊತ್ತಿಗ ಮಡ್ಡಿ ಹೋಗಿ ಹೊಲಾ ಆಗಿರತಿತ್ತು... ಕೈಲೆ ನೀಗದ ಮಾತು ಯಾಕ ಆಡ್ತಿ ? ಸುಮಾಕ ಬಿದ್ದಿರು.

ಮಲ್ಲಿ : ಏ... ಮಾವನ ಕಡಿ ಯಾಕ ನಿನ್ನ ನದರಾ ? ಸುಮ್ನ ಉಣ್ಣಲಾ.

ಎದ್ದು ಚಿಮಣಿಯನ್ನು ಬಗ್ಗಿಸಿ ಕೀಲಿಗೆ ಎಣ್ಣೆ ಬಿಡುವಳು. ಮತ್ತೆ ಬಂದು ಉಣ್ಣಲು ಕುಳಿತ ಪರಿವ್ಯಾನಿಗೆ ಬಡಿಸಲು ಅಣಿಯಾಗುವಳು.

ಪರಿವ್ಯಾ : **(ಸುರಗುಡುತ್ತ)** ಏ... ಪಣಿಗಿ ಖಾರ ಬಾಳ ಆಗೇತಿ ಇವತ್ತ. ಹಸೀ ಕಾರಾ ಹಾಕೀ ಏನು ?

ಮಲ್ಲಿ : ಹೌದು. ಗೌಡರ ಮನಿಂದ ಹಸೀ ಮೆಣಸಿನ ಕಾಯಿ ತಂದಿದ್ದು ಯತ್ತಿ. ಅವನ್ನs ಅರದ ಕಾರಾ ಮಾಡಿ ರೊಟ್ಟಿಗೆ ಹಚ್ಚೀನಿ.

ಪರಿವ್ಯಾ : **(ಅರೆ ತುಂಟತನದಿಂದ)** ಇನ್ನೇಟ ದಿನಾ ? ನಮ್ಮ ಹೊಲದ್ದs ಬರ್ತಾವು ಮೆಣಸಿನಕಾಯಿ. ನಮ್ಮ ಹೊಲದಾಗ ಹಸರ ಬೆಳೀತೈತಿ. ನಮ್ಮ ಹೊಲಾ. ನಮ್ಮ ಬೀಜಾ. ನಮ್ಮ ಫಸಲು.

ಯಲ್ಯಾ : **(ನಗಲು ಪ್ರಯತ್ನಿಸಿ, ಕೆಮ್ಮಿ, ಸುಸ್ತಾಗಿ, ಕೆಳದನಿಯಲ್ಲಿ)** ಏ... ಪರಿವ್ಯಾ. ಆ ಹೊಲಾ ನಮ್ಮದಾಗೂದಿಲ್ಲ. ಅದು ಎಂದಿದ್ದರೂ ಗೌಡಂದs. ಸುಮ್ಮ ಏನೋ ಖುಶಿಗಂತ ಕೊಟ್ಟಾನ. ಅಂಥಾ ಖರೇವಂದ್ರೂ ನಮಗದನ್ನ ಘಾಳೆದ ಮ್ಯಾಲ ಕೊಟ್ಟಿದಾನ. ನಂ ಪುಣ್ಣೇವು. ಇನ್ನಾ ಮಟಾ ಘಾಳೇ ಕೇಳಿಲ್ಲ. **(ಈಗ ದನಿ ತಹಬಂದಿಗೆ ಬರುತ್ತದೆ)** ನಾಳೆ ನೀ ಏನರೆ ಆ ಮಡ್ಡಿಯೊಳಗ ಬೆಳದೀ ಅಂದ್ರs ಗೌಡರಿಗೆ ಘಾಳೆ ಕೊಡಬೇಕಾಗತೈತಿ. ಇದನ್ನ ತಲ್ಯಾಗ ಇಟಗೊಂಡು ದಗದಾ ಮಾಡು.

ಪರಿವ್ಯಾ : ಏ... ಮಾರಾಯಾ... ನಂಗೆಲ್ಲಾ ಗೊತ್ತೈತಿ. ನೀ ಸುಮ್ಮಕ ಬೀಳು. ಆ ಮಡ್ಡೀನ ನೀ ಘಾಳೇದ ಮ್ಯಾಲ ಹಿಡದು ಇಪ್ಪ ವರ್ಷ ಆಗೇತೆಲ್ಲಾ– ಏನ ಕರಾಮತಿ ಮಾಡಿದಿ ಅಲ್ಲಿ ? ಒಂದು ಕಲ್ಲು ಆ ಕಡಿಲಿಂದ ಈ ಕಡೀಕೆ ಅಳಗ್ಯಾಡಲಿಲ್ಲ. ಈಗ ದೊಡ್ಡ ಬುದ್ಧಿ ಹೇಳಾಕ ಬಂದಾನ. ಸಾಕ. ಸುಮ್ಮಿರು ಗೊತ್ತೈತಿ ಎಲ್ಲಾ.

ಯಲ್ಯಾ : ಅದಕ್ಕ ಹೊಲಾ ಅಂತ ಯಾಂವ ಅಂತಾನ ? ಕಲ್ಲ ಖಣೀ ಅದು.

ಪರಿವ್ಯಾ : ಮತ್ತ ದಗದಾ ಸುರು ಮಾಡಿದೇನೂ– ನಾ ಯೇನ ಮನಶಾ ಅಲ್ಲಾ ?

ಯಲ್ಯಾ : ನಿನ್ನ ಮಾತs ಬ್ಯಾರೆ– ನನ್ನ ಮಾತ ಬ್ಯಾರೆ.

ಹೀಗನ್ನುತ್ತಿರುವಂತೆಯೇ ಪರವ್ವ ಟ್ರಂಕು ತೆಗೆಯುವಲ್ಲಿ ಯಶಸ್ವಿಯಾಗುತ್ತಾಳೆ.

ಪರಿವ್ಯಾ : ಮೈ ಮುರದು ದುಡಿಯಾಂವಿದ್ರು ಯಾವ ಹೊಲಾ ಏನು ? ನೀ ಮದಲs ಕಂಡಾಪಟಿ ಆಲಸೀ ಮನಶ್ಯಾ. ಸತ್ತ ದನಾ ಮನೀ ಮುಂದ ಬಿದ್ರೂ ಕಣ್ಣೆತ್ತಿ ನೋಡಾಂವಲ್ಲ. ನೀ ಬರೋಬ್ಬರ್ ಇದ್ರs ನಾವ್ಯಾಕ ಅನಿಸಿಗೋಬೇಕಾಗತಿತ್ತು ಊರ ಮಂದಿ ಕಡೆ.

ಯಲ್ಯಾ : ಏ... ಸೂಳೀಮಗನಽ... ನಾವು ಹುಟ್ಟಿದ್ದಽ ಮುಂದಿ ಕೈರೆ ತಿಸಿಗೋಳಾಕ. ನಮ್ಮ ಜಾತಿನಽ ಅಂಥಾದೈತಿ. ಈ ಗೌಡಕಿ ಮಾತೆಲ್ಲಾ ನಂ ಮುಂದ್ಯಾಗ ನಡ್ಯಾಣೆಲ್ಲ. ತಿಳೀತಽ. ನೀ ಯೇನ ಗೌಡರ ಮಗಾ ಅಂತ ತಿಳಿದೀಯೇನ ?

ಪರವ್ವ : (ಟ್ರಂಕಿನಿಂದ ಏನನ್ನೋ ತೆರೆಯುತ್ತ) ಅಂವಾ ಗೌಡರ ಮಗಾ ಅಂತ ಊರಿಗೇ ಗೊತ್ತೈತಿ. ಸುಮ್ಮಕ ಬಿದ್ದಿರೂ ಹಾಸಿಗಿ ಮ್ಯಾಲ.

ಪರಿವ್ಯಾ : (ಪರವ್ವನಿಗೆ) ಏ... ನಿಮ್ಮೌನ... ಸುಮ್ಮ ಕುಂದರಲಾ: ಏನ ಮಾತಾಡಾಕತ್ತಿ ಅಂತ ಕಬರಿ ಐತೇನ ನಿನಗ ?

ಯಲ್ಯಾ : (ನಗಲು ಪ್ರಯತ್ನಿಸಿ ಕೆಮ್ಮುವನು.)

ಪರವ್ವ : (ತನ್ನ ಕೆಲಸವಾಯಿತೆಂಬಂತೆ ಟ್ರಂಕು ಮುಚ್ಚಿ, ಮತ್ತೆ ಕೀಲಿ ಜಡಿದು) ಬರೇ ಟುರ್ ಪುರ್ ಚೀರ್ಯಾಡಿದ್ರ ಕೆಲಸ ಆಗಾಂಗಿಲ್ಲೋ ಹುಡುಗಾ. (ಪರಿವ್ಯಾನ ಮುಂದೆ ಒಂದಿಷ್ಟು ನೋಟುಗಳನ್ನೆಸೆಯುತ್ತ) ಈಟ ರೊಕ್ಕ ಅದಾವು ನೋಡು. ಏನ ಮಾಡತೀಯೋ ಮಾಡು. ಒಟ್ಟು ಆ ಮುಡ್ಯಾಗ ಹಸರ ಮಾಡಿದ್ರು ಸಾಕು.

ಮಲ್ಲಿ : (ಆಶ್ಚರ್ಯದಿಂದ) ಐ ! ಏಸ ಅದಾವ ಇವು ?

ಪರವ್ವ : (ಅಭಿಮಾನದಿಂದ) ಗೌಡ ಕೊಟ್ಟದ್ದು ಅವು.

ಪರಿವ್ಯಾ : (ತಲೆ ತಗ್ಗಿಸುತ್ತಾನೆ.)

ಮಲ್ಲಿ : ಅಂವಾ ಯಾಕ ಕೊಟ್ಟ ?

ಯಲ್ಯಾ : (ನಗಲು ಪ್ರಯತ್ನಿಸಿ ಮತ್ತೆ ಕೆಮ್ಮುತ್ತಾನೆ.)

ಪರವ್ವ : (ಅದೇ ಅಭಿಮಾನದಿಂದ) ನಂದು ಮತ್ತ ಈ ಯಲ್ಯಾಂದು ಹೆಣಾ ಛಂದಾ ಮಾಡಾಕ ಇರಲಿ ಇಟಗೋ ಅಂತ ಆಗಾಗ ಕೊಡತಿದ್ದ. ನಾ ಹಂಗಽ ಕಾದ ಇಟ್ಟಿದ್ನಿ. (ಪರಿವ್ಯಾನಿಗೆ) ಪರಗೌಡಾ. ನಮ್ಮ ಹೆಣಾ ಛಂದಾ ಮಾಡೋ ದಗದ ಹ್ಯಾಂಗಾರೆ ಆದೀತು. ಮದಲಽ ನಿನ್ನ ದಗದಾ ಪಾರಾಗ್ಲಿ.

ಪರಿವ್ಯಾ : (ತಲೆ ಎತ್ತದೆ ಹ್ಞೂ ಎನ್ನುವಂತೆ ಗೋಣು ಹಾಕುತ್ತಾನೆ.)

••• ಕತ್ತಲು •••

ಗೌಡರ ಮನೆ. ಅದೇ ಎತ್ತರದ ಪೀಠದ ಮೇಲೆ ಗೌಡರು ಕುಳಿತಿದ್ದಾರೆ. ಆದರೆ ಅವರಿಗೆ ಈಗ ಮೊದಲಿಗಿಂತ ಹೆಚ್ಚು ವಯಸ್ಸಾಗಿದೆ. ಅವರ ಆಳುಗಳೂ ತಮ್ಮ ತಮ್ಮ ಜಾಗದಲ್ಲಿ ಆಸೀನರಾಗಿದ್ದಾರೆ.

ಮುಂಬದಿಯಲ್ಲಿ ಸೂತ್ರಧಾರ ತನ್ನ ಸಂಗಡಿಗರೊಂದಿಗೆ ಹಾಡುತ್ತಿದ್ದಾನೆ.

ಸೂತ್ರಧಾರ: ಬೆಳ್ಳಕ್ಕಿ ಹಿಂಡು ಹಾರ್‍ಯಾವೋ । ಆಕಾಶದಾಗ
ಬೆಳ್ಳಿಯ ಬೆಳಕು ಮೂಡ್ಯಾವೋ ॥
ಕಲ್ಲಾಗ ಹಸರು ಬೆಳದಾವೋ । ಬೆಳ್ಳಕ್ಕಿ ನೋಡಿ
ಆನಂದದ ಹೊಳೆಯ ಹರಿಸ್ಯಾವೋ ॥
ಭೂಮ್ಯಾಗ ಮೊಳಕೆ ಎದ್ದಾವೋ । ಬೆಳ್ಳಕ್ಕಿ ಹಿಂಡು
ಮೊಳಕೆಯ ನೋಡುತ ನಲಿದಾವೋ ॥
ಒಂದೆರಡು ಹಕ್ಕಿ ಹಾರ್‍ಯಾವೋ । ಹಾರುತ ಹೋಗಿ
ಕೈಲಾಸದ ಗೂಡು ಸೇರ್‍ಯಾವೋ ॥

ಗೌಡ : ಅಂವಾ... ನಿಂಗ್ಯಾ ಬರಲಿಲ್ಲೇನು ಇನ್ನಾ ?

ಆಳು - ೧ : ಇನ್ನೇನು ಈಗ ಬಂದಾನ್ರಿ.

ಗೌಡ : ಏಟೊತ್ತು ಬೇಕಂತ ಆ ಸೂಳಿಮಗ್ಗ. ಗೌಡ ಬರಾಕ ತಿಳ್ಯಾಣಿಲ್ಲ ?

ಆಳು - ೨ : ಅಂವಾ ತ್ವಾಟದಿಂದ ಗಾಡಿಗುಂಟ ಹಂಗs ಹೋದ್ನರಿ. ನಾವಿಬ್ರು ಈ ಕಡೆ ಬಂದಿವ್ರಿ.

ಗೌಡ : ಹಿಂಗೇನು ?

ಆಳು - ೧ : ಹೌಂದರಿ ಯಪ್ಪಾ. ಅಂವಾ ಬೆಲ್ಲದ ಪೆಂಟಿ ಹಚ್ಚಿ ಈ ಕಡೆ ಬರ್ತೀನಿ ಅಂದ್ನರಿ.

ಗೌಡ : ಆತು ಬಿಡು.

ಅಷ್ಟರಲ್ಲಿ ಹೊರಗಡೆ ಗೌಡರs ಎಂಬ ದನಿ ಕೇಳುತ್ತದೆ.

ಗೌಡ : ಲೇ.. ಯಾರ ನೋಡು ?

ಆಳು ಎದ್ದು ಹೋಗುತ್ತಾನೆ.

ಆಳು - ೨ : ಈ ಸರ್ತಿ ಬೆಲ್ಲ ನಿವಳ ಆಗೇತಿರಿ. ಬಾಯಾಗಿಟ್ಟರ ಸಕ್ರೀ ತಿಂದಂಗ ಆಕ್ಕೈತಿ. ಬಣ್ಣನೂ ವಳೆ ನಿವಳ ಬಂದೈತಿ ಬಿಡ್ರಿ.

ಗೌಡ : ಇದೆಲ್ಲಾ ನನ್ನ ಮಗಾ ಭದ್ರಗೌಡನ ಕರಾಮತಿ. ಅವನ ದೇಖರೇಖಿಯೊಳಗ ಆತು ನೋಡು ಈ ಸರ್ತಿ ಗಾಣ. ಹೀಂಗಾಗಿ ಯಾಂವಗೂ ಮಿಸಕಾಕ ಸಂದು ಸಿಗಲಿಲ್ಲ.

ಆಳ - ೨ : ಹೌಂದರಿ ಯಪ್ಪಾ. ಸಣ್ಣ ಗೌಡರೂ ವಳೆ ಜಬರ ಅದಾರ ಬಿಡ್ರಿ.

ಗೌಡ : ಹುಲಿ ಹೊಟ್ಯಾಗ ಹುಲಿನs ಹುಟ್ಟತೈತಿ ಹೌಂದಲ್ಲೋ ?

ಆಳು - ೧ ತಿರುಗಿ ಬಂದು 'ಪರವ್ವ ಬಂದಾಳ್ರಿ,' ಎನ್ನುತ್ತಾನೆ.

ಗೌಡ : **(ಸಹಜವಾಗಿ)** ಒಳಗ ಬಾ ಅನ್ನು. **(ಆಳು - ೧ ತಿರುಗಿ ಹೋಗುತ್ತಾನೆ.)**

ಆಳು - ೨ : ಆ ಪರವ್ವನ ಮಗಾ ಪರಿವ್ಯಾ ಮಡ್ಡೀನ ವಳೇ ನಿವಳ ಮಾಡ್ಯಾನ ಬಿಡ್ರಿ ಗೌಡರ.

ಗೌಡ : ಹೌಂದೇನು ?

ಆಳು - ೨ : ಏನಿತ್ತರೀ ಗೌಡರ ಅಲ್ಲಿ ? ಬರೀ ಕಲ್ಲು ಮಡ್ಡಿ. ಕಲ್ಲ ಬಿಟ್ಟರ ಬ್ಯಾರೆ ಏನಿತ್ತ ಅಲ್ಲಿ ? ಆ ಮಡ್ಯಾಗ ಹಸರು ಹುಟ್ಟೇತಿ ಅಂದ್ರs ಕರಾಮತಿ ಹೆಂಗಿರಬೇಕು ನೀವs ಹೇಳ್ರಿ. ಅಂವೂ ವಳೇ ಜಿಗಟ ಮನಿಶಾ ಬಿಡ್ರಿ (ಎಂದು **ಅರ್ಥಗರ್ಭಿತವಾಗಿ ನಗುತ್ತಾನೆ. ಅಷ್ಟರಲ್ಲಿ ಪರವ್ವ, ಆಳು - ೧ ಬರುತ್ತಾರೆ**).

ಪರವ್ವ : **(ತನ್ನ ಸ್ಥಾನದಲ್ಲಿ ಕೂರುತ್ತ)** ಅಡ್ಡ ಬಿದ್ನಿ ಯಪ್ಪಾ.

ಗೌಡ : ಹೆಂಗದಿ ? ಯಲ್ಯಾ ಹ್ಯಾದನಂತಲಾ ?

ಪರವ್ವ : ಹೌಂದ ಯಪ್ಪಾ. ಗೂರಿ ಗೂರಿ ಅರ್ಧಾ ಹಣ್ಣಾಗಿದ್ದ ಅಂವಾ.

ಗೌಡ : ಎಷ್ಟ ದಿನಾ ಆತು ಹೋಗಿ ?

ಪರವ್ವ : ತಿಂಗಳಾತು.

ಗೌಡ : ಭಾಳ ಸಂಭಾವಿತ ಮನಿಶಾ.

ಆಳು ೧, ೨ : ಹೌಂದು. ಹೌಂದು.

ಪರವ್ವ : ನಂದು ಬಿಡ್ರಿ ಗೌಡ. ನಿಂದು ಹ್ಯಾಂಗ ನಡದೈತಿ ?

ಗೌಡ : ನಂದೇನ ಮಾಡತಿ ಬಿಡು. ಏನಂತಾನ ನಿನ್ನ ಪರಿವ್ಯಾ ?

ಪರವ್ವ : ಅದನ್ನs ಹೇಳಾಕಂತ ಬಂದಿದ್ದೆ. **(ಅತ್ತಿತ್ತ ನೋಡಿ)** ಸಣ್ಣ ಗೌಡ ಬಂದಾನಂತಲಾ. ಎಲ್ಲಿ ಅದಾನ ?

ಗೌಡ : ಅಂವಾ ನನ್ನ ಕೈಗೆ ಎಲ್ಲಿ ಸಿಗತಾನ ? ಗಾಣಾ ಮುಗಿಸಿ ಬೆಳಗಾಂವಿ ಕಂಡಿರಬೇಕು.

ಆಳು - ೨ : ಸಣ್ಣ ಗೌಡಾ ಅಲ್ಲೇ ಬಂಗ್ಲೆ ಕಟ್ಟಿಸ್ಯಾನ.

ಆಳು - ೧ : ಆ ಬಂಗ್ಲೆದಿಂದನs ರಗಡ ರೊಕ್ಕ ಬರ್ತೈತಿ ಅಂತ.

ಪರವ್ವ : ಬಂಗ್ಲೆದಿಂದ ರೊಕ್ಕ ಹೆಂಗ ಬರ್ರ್ಯೆತಿ ?

ಗೌಡ : ಅದು ನಿಂಗ ತಿಳಿಯೂ ಮಾತಲ್ಲ ಬಿಡು. ಶಾರದಾಗಿನ ಮಂದಿ ಉಳಕೊಳ್ಳಾಕೂ ರೊಕ್ಕಾ ಕೊಡತಾರು. ಅದೆಲ್ಲಾ ಬಿಡು. ಏನ ಹಾಕ್ಯಾನಂತ ಪರಿಪ್ಯಾ ಹೊಲದಾಗ.

ಪರವ್ವ : ಜ್ವಾಳಾ ಹಾಕಿದಾನ. ಜೆಳಿನೂ ನಿವಳ ಐತಿ ಅಂತಿದ್ರು. ಏನಿದ್ರು ಏನ ಐತಿ ಬಿಡು. **(ಉಸ್ಸೆಂದು ಉಸಿರು ಬಿಡುವಳು).**

ಗೌಡ : ಹಂಗ್ಯಾಕ ಉಸಲ ಬಿಡತಿ ? ಅಂಥಾದ್ದೇನ ಆಗೇತಿ ಈಗ ?

ಪರವ್ವ : ಉಸಲ ಬಿಡದ ಇನ್ನೇನ ಮಾಡ್ಲಿ ?

ಗೌಡ : ಅದಽ ಯಾಕಂತ ?

ಪರವ್ವ : ನೀ ನೋಡಿದ್ರಽ ಊರಿಗೇ ಗೌಡ. ಊರಿನ ನಾಕೂ ದಿಕ್ಕಿಗೆ ಜಮೀನ ಅದಾವು. ನಂಬದು ಅಂತ ಏನ್ಯೆತಿ ?

ಗೌಡ : ಮತ್ತ ಈಗ ಪರಿಪ್ಯಾ ಮಾಡಾಕತ್ಯಾನಲಾ ?

ಪರವ್ವ : ಯಾರ ನೆಲಾ ಅದು ? ನಂದ್ಯೆತ್ಯ ? ಯಲ್ಯಾಂದ್ಯೆತ್ಯಽ ? ಪರಿಪ್ಯಾಂದ್ಯೆತ್ಯ ? ಅದು ನಿಂದ ಅಲ್ಲೇನ ? ನಿನ್ನ ನೆಲದಾಗ ಗೇಣಿ ಮಾಡಿದ್ರ ನಮಗೇನ ಬಂಧಾಂಗಾತು ?

ಗೌಡ : ಈಗ ಯಾಂವ ಏನಂದ ?

ಪರವ್ವ : ಯಾರ್ಯಾಕ ಅನಬೇಕು ? ನಮಗೇನ ತಿಳ್ಯಾಣೆಲ್ಲ ? ಛಪ್ಪಗೌಡನೂ ನಿನ್ನ ಮಗಾನಽ ಪರಗೌಡನೂ ನಿನ್ನ ಮಗಾನಽ. ಒಂದ ಕಣ್ಣಿಗೆ ಸುಣ್ಣ. ಒಂದ ಕಣ್ಣಿಗೆ ಬೆಣ್ಣೆ ಯಾಕಂತ ನಾ ಕೇಳಾಕತ್ತೀದೀನ.

ಗೌಡ : **(ಒಂದು ಕ್ಷಣ ಯೋಚಿಸಿ)** ಏನಾಗಬೇಕಂತಿ ಈಗ ?

ಪರವ್ವ : ನಿಂದು ಊರ ತುಂಬ ಹೊಲಾ ಅದಾವು... ಪರಗೌಡನೂ ನಿನ್ನ ಮಗಾನಽ. ಅದಷ್ಟ ಮಡ್ಡಿ ಅವನ ಹೆಸರೆ ಮಾಡಿ ಬಿಡು. ನಿನ್ನ ಹೆಸರ ಹೇಳಿ ಹೊಟ್ಟಿ ತುಂಬಿಕೋತಾನಂತ.

ಗೌಡ : ನೋಡೂಣಂತ ಬಿಡು. ಅದಕ್ಯಾಕಿಷ್ಟು ತಲಿ ಕೆಡಿಸ್ಕೋತಿ ?

ಪರವ್ವ : ನೋಡೂಣು ಗೀಡೂಣು ಅಂದ್ರ ನಾ ಕೇಳಾಕೆಲ್ಲ. ಏನಿದ್ದದ್ದು ಈಗ ನಿಕಾಲಿ ಆಗ್ಲಿ.

ಗೌಡ : ನಾ ಹೇಳಿದ್ದೊಂದೀಟ ತಿಳಕೋ.

ಪರವ್ವ : ತಿಳಕೋ - ಗಿಳಕೋ ಏನಿಲ್ಲ. ಕೊಡತೀರ್‍ಯೋ ಏನ ಇಲ್ಲೋ ಹೇಳಿ ಬಿಡು.

ಗೌಡ : ನಾಯೆಲ್ಲಿ ಇಲ್ಲ ಅಂದೀನಿ ?

ಪರವ್ವ : ಹಂಗಂದ್ರ ಹೆಂಗ ? ಕೊಡತೀನಿ ಅಂತ ಹೇಳಲಾ.

ಗೌಡ : ಹ್ಞೂ.

ಪರವ್ವ : ಬರೇ ಹ್ಞೂ ಅಂದ್ರ ಆಗಾಣೆಲ್ಲ. ಹಂಗಂತ ಕಾಜಗಾ ಬರದ ಕೊಡು. ಅಂದರಽ ನಮಗೂ ಧೈರ್ಯಾ ಇರ್ರ್ಯೆತಿ.

ಗೌಡ : ನಮ್ಮ ನಮ್ಮ ನಡುವ ಕಾಗದ್ಯಾಕ ? ನಾ ಹೇಳಿದ್ರ ಮುಗೀತಲಾ ?

ಪರವ್ವ : ನಾಳೆ ನಾನೂ ಯಲ್ಯಾನ ಹಿಂದ ಹ್ವಾದ ಮ್ಯಾಲ ಇದು ಹಿಂಗಽ ಇರತ್ಯೆತಿ ಅಂತ ಖಾತ್ರಿ ಏನ್ಯೆತಿ ಹೇಳು. ಮಾಡೂದು ಮಾಡತೀರಿ. ಒಂದೀಟ ನೀಟಾಗಿ ಮಾಡ್ರಿ.

ಗೌಡ : ಆತು. ನಾ ಬರದ ಕೊಡೂ ಮಟಾ ನೀ ಕೇಳಾಕಿ ಅಲ್ಲ. **(ಎದ್ದು ಒಳಹೋಗುವನು.)**

ಪರವ್ವ : **(ಆಳುಗಳಿಗೆ)** ನಮ್ಮ ಗೌಡಂದ್ರ ದೇವರಂಥಾ ಮನಿಶಾ.

ಆಳು ೧, ೨ : ಹೌಂದು. ಹೌಂದು.

ಪರವ್ವ : ನಮ್ಮದೇನಿದ್ರೂ ಅದು ಗೌಡಂದಽ ಪುಣ್ಣೇವು.

ಆಳು ೧, ೨ : ಹೌಂದು. ಹೌಂದು.

ಗೌಡ : **(ಒಳಗಿನಿಂದ ಬಂದು)** ತಗೋ ಕಾಗದಾ.

ಪರವ್ವ : ಏನಂತ ಬರ್ದಿ ಅದರಾಗ ?

ಗೌಡ : ಮಡ್ಡೀ ಹೊಲಾನ ನಿನ್ನ ಮಗಾ ಪರಗೌಡಗ ಬಿಟ್ಟು ಕೊಟ್ಟೇನಿ ಅಂತ ಬರದೀನಿ.

ಪರವ್ವ : ಖರೇವಂದ್ರೂ ?

ಗೌಡ : ನಾಯಾಕ ಸುಳ್ಳ ಹೇಳ್ಳಿ? ಬೇಕಾರ ಯಾರದರೆ ಕಡೆ ಓದಸು.

ಪರವ್ವ : ಬೇಶಾತು ಬಿಡು. ಪರಿವ್ಯಾ ಒಂದಳತಿ ಚಡಪಡಸತಿತ್ತು. ಆ ಮಡ್ಡಿ ನಮ್ಮದಾಗಿದ್ರ ಅಲ್ಲಿ ಒಂದು ಬಾವಿ ತಗೀತಿದ್ದೆ ಅಂತ. ಈಗವಂಗ ಬಾವಿ ತಗೀ ಅಂತ ಹೇಳತೀನಿ.

ಗೌಡ : **(ನಗುತ್ತ)** ಪರಿವ್ಯಾ ಮನಸ ಮಾಡಿದ್ರ ಅದೇನ ದ್ವಾಡದಲ್ಲ ಬಿಡು.

ಪರವ್ವ : ಹೌಂದ್ರಿ ಗೌಡ. ನಾ ಬರ್ತೇನಿ ಇನ್ನ. **(ಉತ್ಸಾಹದಿಂದ ಹೋಗುವಳು.)**

ಆಳು - ೨ : **(ಪರವ್ವ ಹೋಗಿದ್ದನ್ನು ಖಾತ್ರಿ ಮಾಡಿಕೊಂಡು)** ಏನ ಯಪ್ಪಾ ನೀ ಆಕಿ ಕೇಳಿದಳಂತ ಮಡ್ಡಿ ಬರದ ಕೊಟ್ಟ ಬಿಡೂದs ?

ಗೌಡ : ಅದು ನಿನಗ ತಿಳಿಯಾಂಗಿಲ್ಲ. ಕಟ್ಟಿ ಕಲ್ಲು ಕಟ್ಟಿಗಿ ಕುಂದರಬೇಕು. ಕುಂದರತೈತಿ.

••• ಕತ್ತಲು •••

ಖಾಲಿಯಾದ ರಂಗಮಂಚ. ಅಲ್ಲಿ ಏಳೆಂಟು ವರ್ಷದ ಬಾಲಕನೊಬ್ಬ ಕೈಯಲ್ಲಿ ರಾವುಕಾಜು ಹಿಡಿದು ಆಡುತ್ತಿದ್ದಾನೆ. ಸೂತ್ರಧಾರ ತನ್ನ ಸಂಗಡಿಗರೊಂದಿಗೆ ಪ್ರವೇಶಿಸುತ್ತಾನೆ.

ಸೂತ್ರಧಾರ: ಬೆಳ್ಳಕ್ಕಿ ಹಿಂಡು ಹಾರ್ಯಾವೋ । ಆಕಾಶದಾಗ
ಬಣ್ಣದ ಕೋಲು ಕುಣದಾವೋ ॥
ಘಸಲಿಗೆ ತೆನಿ ಮೂಡ್ಯಾವೋ । ಬೆಳ್ಳಕ್ಕಿ ಹಿಂಡು
ತೆನಿಕಂಡು ಮೂಕ ಆಗ್ಯಾವೋ ॥
ತೆನಿ ಒಡದು ಕಾಳು ಮೂಡ್ಯಾವೋ । ಬೆಳ್ಳಕ್ಕಿ ಹಿಂಡು
ಕಾಳಿನ ಪಿಂಡ ನೋಡ್ಯಾವೋ ॥
ಬಾವಿಗೆ ನೀರು ಬಂದಾವೋ । ಬೆಳ್ಳಕ್ಕಿ ಹಿಂಡು
ಬಾವಿಯ ನೀರು ಕುಡದಾವೋ ॥

ಸೂತ್ರಧಾರ ನಿರ್ಗಮಿಸುತ್ತಿದ್ದಂತೆ ಪರವ್ವ ರಂಗಮಂಚ ಪ್ರವೇಶಿಸುತ್ತಾಳೆ.

ಪರವ್ವ : **(ಮಗುವಿನ ಕೈಯಲ್ಲಿನ ರಾವುಕಾಜು ನೋಡುತ್ತ)** ಏನೋ ಸಂತ್ರಾಮಾ ಇದು ?

ಸಂತ್ರಾಮ : ಇದಕ್ಕs ರಾವುಕಾಜು ಅಂತಾರಬೇ.

ಪರವ್ವ : ಹಂಗಂದ್ರ ಏನಪಾ ಯಪ್ಪಾ ?

ಸಂತ್ರಾಮ : ಇದರಾಗಿಂದ ನೋಡಬೇ. ಎಲ್ಲಾ ಅಕ್ರಾಳ ವಿಕ್ರಾಳ ಕಾಣತಾವು.

ಪರವ್ವ : ನೋಡೂಣ ತಾ ಇಲ್ಲಿ. **(ನೋಡಿ)** ಏ... ಏನೂ ಕಾಣಂಗಿಲ್ಲ ಬಿಡೋ ಯಪ್ಪಾ.

ಸಂತ್ರಾಮ : ಹಂಗಾರ ನೀ ಕುಡ್ಡಿ ಅದಿ.

ಪರವ್ವ : ಅಜ್ಜಿಗೆ ಹಂಗೆಲ್ಲಾ ಅನಬಾರದೋ ಮಗನ.

ಸಂತ್ರಾಮ : ಅಜ್ಜಿ... ಇಲ್ಲಿ ಕೈ ಇಡು.

ಪರವ್ವ : **(ಮೊಮ್ಮಗ ಹೇಳಿದಂತೆ ಇಡುತ್ತಾಳೆ.)**

ಸಂತ್ರಾಮ : **(ಬಿಸಿಲಿಗೆ ರಾವಕಾಜನ್ನು ಹಿಡಿದು, ಆದರ ಕಿರಣ ಅಜ್ಜಿಯ ಕೈಮೇಲೆ ಬೀಳುವಂತೆ ಮಾಡುತ್ತ)** ವಟ್ಟs ಕೈ ತೆಗೀಬಾರದು... ತಿಳೀತs ?

ಪರವ್ವ : ಹ್ಞೂ.

ಸಂತ್ರಾಮ : ಒಟ್ಟೊಟ್ಟು ತಗೀಬಾರದ ನೋಡ.

ಪರವ್ವ : ತಗಿಯಾಂಗಿಲ್ಲ (ಇಷ್ಟರೊಳಗೆ ಕೈ ಚುರುಗುಟ್ಟಿ ಸರಕ್ಕನೇ ಕೈ ತೆಗೆದುಕೊಳ್ಳುತ್ತಾಳೆ.)

ಸಂತ್ರಾಮ : (ಚಪ್ಪಾಳೆ ತಟ್ಟಿ ನಗುತ್ತ) ಹಂಗಾತು ಫಜೀತಿ.. ಹಂಗಾತು ಫಜೀತಿ.

ಪರವ್ವ : (ಹುಸಿ ಮುನಿಸಿನಿಂದ) ಥೂ! ಹಲಕಟ್ ಭಾಡ್ಯಾ!

ಸಂತ್ರಾಮ : (ಕಿಲಕಿಲ ನಗುವನು.)

ಪರವ್ವ : ಸಂತ್ರಾಮಾ, ನಿಮ್ಮವ್ವ ಎಲ್ಲಿ ಹೋಗೇತಿ?

ಸಂತ್ರಾಮ : ಹೊಲಕ್ಕ.

ಪರವ್ವ : ಬಾ, ನಾವೂ ಹೋಗೂಣಂತ.

ಸಂತ್ರಾಮ : ವಲ್ಲೇವು. ನಾ ಸಾಲಿಗೆ ಹೊಕ್ಕೀನಿ.

ಪರವ್ವ : ಅವ್ ನನ್ ಬಂಗಾರ... (ಲಟಿಗೆ ಮುರಿಯುತ್ತಾಳೆ.)

ಸಂತ್ರಾಮ : ಅಜ್ಜಿ... ಇದೆಲ್ಲಿ ಸಿಕ್ಕೈತ ಗೊತ್ತೈತೇನ ನಿನಗ? (ರಾವಕಾಜನ್ನು ತೋರಿಸುತ್ತಾನೆ.)

ಪರವ್ವ : ಗೊತ್ತಿಲ್ಲ ಬಿಡು.

ಸಂತ್ರಾಮ : ಸಾಲ್ಯಾಗ ಸಿಕ್ಕೈತಿ. ಹಾರೋರ ಹುಡಗನ ಹಂತೀಕ ಯಾಡ್ಡ ಇದ್ವು. ಅಂವಾ ಒಂದು ನನಗ ಕೊಟ್ಟ.

ಪರವ್ವ : ಛೇಶಾತ ಬಿಡು. ನಿನಗ ಇರ್ಲಿ ಅದು ಆಡಾಕ. ಸಂತ್ರಾಮಾ. ಬಿಸಲು ಚುರುಗುಟ್ಟಾಕತ್ತೈತಿ. ನಿನ್ನ ಅವ್ವ - ಅಪ್ಪ ಹೊಲಕ್ಕ ಹೋಗ್ಯಾರ. ನಾನೂ ಇಲ್ಲೇ ದ್ಯಾಮವ್ವನ ಗುಡಿ ಮಟಾ ಹೋಗಿ ಬರ್ತೀನಿ. ನೀನು ಒಳಗ ನಡಿ. ಬಿಸಿಲಿಗೆ ತಲಿ ಒಡ್ಡಿ ನಿಲ್ಲೂದು ಚಲು ಅಲ್ಲ.

ಸಂತ್ರಾಮ : ನೀ ಹೋಗಿ ಬಾರಬೇ. ನಾ ಒಳಗ ಆಡತಿರತೀನಿ.

ಪರವ್ವ : ಜ್ವಾಕಿ! ನೀ ಒಬ್ಬs ಅದಿ.

ಸಂತ್ರಾಮ : ನಾಯೇನ ನಿನ್ನಾಂಗ ಕುಡ್ಡ ಇಲ್ಲೇಳ. ನೀ ಹೋಗಿ ಬಾ.

ಪರವ್ವ ಹೊರಡುವಳು. ಅಷ್ಟರಲ್ಲಿ ಗಾಳಿಗೆ ಹಾರಿ ಬಂದ ಕಾಗದದ ಮೇಲೆ ಸಂತ್ರಾಮನ ದೃಷ್ಟಿ ಬೀಳುತ್ತದೆ. ಆತ ಅದಕ್ಕೆ ರಾವಕಾಜು ಹಿಡಿಯುತ್ತಾನೆ. ಅದು ಸುಡುತ್ತದೆ. ಅದೇ ರೀತಿ ಗುಡಿಸಲಿನ ಚಪ್ಪರದ ಭಾಗಕ್ಕೂ ಹಿಡಿಯುತ್ತಾನೆ. ಅದೂ ಸುಡತೊಡಗಿದೊಡನೆ ಗಾಬರಿಯಾಗಿ ಅಲ್ಲಿಂದ ಓಟ ಕೀಳುತ್ತಾನೆ. ಗುಡಿಸಲು ಹೊತ್ತಿ ಉರಿಯತೊಡಗುತ್ತದೆ. ಜನರ ಹಾಹಾಕಾರ ಆರಂಭವಾಗುತ್ತದೆ. ಜನರ ಗುಂಪಿನಲ್ಲಿ ಪರವ್ವನೂ ಇದ್ದಾಳೆ.

ಪರವ್ವ : ನನ್ನ ಮಮ್ಮಗ ಎಲ್ಲೈತಿ ?... ಸಂತ್ರಾಮಾ... ಸಂತ್ರಾಮಾ... ಎಲ್ಲಿ ಅದೀಯೋ... ನನ್ನ ಮಮ್ಮಗನ್ನ ಯಾರರೆ ನೋಡಿದ್ರ ಹುಡಕರ್ರೋ... ಅಯ್ಯೋ... ಸಂತ್ರಾಮಾ... ಸಂತ್ರಾಮಾ... ಸಂತ್ರಾಮಾ...

ಒಬ್ಬ : ಏ... ಮುದಕಿ... ನಿನ್ನ ಮಮ್ಮಗಾ ಬೆಂಕ್ಯಾಗೇನರೆ ಸಿಕ್ಕಾನೇನು ನೋಡು.

ಪರವ್ವ : (ಅಳುತ್ತ) ಇದ್ದರೂ ಇರಬೇಕು. ನಾ ಒಳಗಿರು ಅಂತ ಅಂವಗ ಹೇಳಿನ್ನಿ.

ಒಬ್ಬ : ಹಂಗಾರ ಅಂವಾ ಒಳಗs ಅದಾನು... ಅಯ್ಯಯ್ಯೋ... ಪರವ್ವನ ಮಮ್ಮಗಾ ಬೆಂಕ್ಯಾಗ ಸಿಕ್ಕಾನ್ಯೋ...

ಪರವ್ವ : (ಎದೆ ಬಡಿದುಕೊಂಡು ಅಳುತ್ತ) ಅಯ್ಯೋ... ನನ್ನ ಮಗನs... ಸಂತ್ರಾಮಾ... ನನ್ ಬಿಟ್ಟ ಹ್ವಾದೇನೋ ಸಂತ್ರಾಮಾ...

ಇನ್ನೊಬ್ಬ : ಯಾಕ ಅಳಾಕತ್ಯಾಳ ಈ ಮುದುಕಿ ?

ಒಬ್ಬ : ಆಕಿ ಮಮ್ಮಗಾ ಬೆಂಕ್ಯಾಗ ಸಿಕ್ಕಾನಂತ.

ಇನ್ನೊಬ್ಬ : ತ್ಚು... ತ್ಚು... ಪಾಪ! ಹಿಂಗಾಗಬಾರದಿತ್ತು.

ಮತ್ತೊಬ್ಬ : ಏನಾತಂತ ?

ಇನ್ನೊಮ್ಮ : ಪರವ್ವನ ಮಮ್ಮಗಾ ಬೆಂಕ್ಯಾಗ ಸಿಕ್ಯಾನಂತ.

ಮತ್ತೊಬ್ಬ : ಛೆ ! ಛೆ ! ಇಲ್ಲ ತಗಿ. ಆ ಭಾಮಟ್ಯಾನs ಗುಡಸಲಕ್ಕ ಬೆಂಕಿ ಹಚ್ಚಿದಾಂವಾ. ನಾ ಕಣ್ಣಾರೆ ಕಂಡೀನಿ. ಬೆಂಕಿ ಹತ್ತೂಟ್ಲೆ ಅಂವಾ ಪಸಾರ ಆಗ್ಯಾನ.

ಒಬ್ಬ : ಹುಡಕು ಹಂಗಾರ ಅಂವಾ ಎಲ್ಲಿ ಅದಾನಂತ.

ಇನ್ನೊಬ್ಬ : ಹುಡಕ್ರಿ... ಹುಡಕ್ರಿ...

ಗದ್ದಲ ಹೆಚ್ಚಾಗುತ್ತದೆ. ಪರವ್ವ ಮೊಮ್ಮಗನಿಗಾಗಿ ಹಂಬಲಿಸತೊಡಗುತ್ತಾಳೆ. ಹಾಹಾಕಾರ, ಗದ್ದಲ, ಜನರ ಓಡಾಟದಲ್ಲಿ ಏನೂ ತಿಳಿಯದಂತಾಗಿ ಕುಳಿತಿರುವಂತೆಯೇ ಯಾರೋ ಮುರುಕು ಟ್ರಂಕನ್ನು ಈಕೆಯ ಮುಂದೆಯೇ ತಂದಿಡುತ್ತಾರೆ. ಪರವ್ವ ಅದನ್ನು ಗಟ್ಟಿಯಾಗಿ ಹಿಡಿದುಕೊಳ್ಳುತ್ತಾಳೆ. ಅಷ್ಟರಲ್ಲಿ ಪರವ್ಯಾ - ಮಲ್ಲಿ ಜೊತೆಗೂಡುತ್ತಾರೆ. ಮತ್ತೊಬ್ಬ ಪರವ್ಯಾನಿಗೆ ನಡೆದ ಸಂಗತಿಯನ್ನು ಹಾವ-ಭಾವ ಸಮೇತ ವರದಿ ಒಪ್ಪಿಸುತ್ತಾನೆ. ಕೆಲವು ಜನ ಸಂತ್ರಾಮನನ್ನು ಹಿಡಿದು ತಂದು ಪರವ್ಯಾನ ಮುಂದೆ ನಿಲ್ಲಿಸುತ್ತಾರೆ. ಪರವ್ಯಾ ಹಿಂದೆಮುಂದೆ ನೋಡದೆ ಸಂತ್ರಾಮನನ್ನು ಸದೆಯತೊಡಗುತ್ತಾನೆ.

ಪರವ್ವ : **(ಸಂತ್ರಾಮನನ್ನು ಬಿಡಿಸಿಕೊಳ್ಳುತ್ತ)** ಮೈಮ್ಯಾಲ ಖಬರಿ ಐತಿಲ್ಲ ನಿಂಗ ? ಬಡವರ ಏನ ಸುಟ್ಟ ಗುಡಸಲ ಎದ್ದ ನಿಂದರತಾವೂ ? ಈಗ ಮುಂದಿಂದ ನೋಡಕೋ.

ಪರವ್ಯಾ : ನಿನ್ನ ಸವರs ಹೆಚ್ಚಾಗೇತಿ ಅಂವಗ. ತಾಯಿಲ್ಲಿ ಅಂವನ್ನ. ತುಂಡ ಮಾಡತೇನು.

ಮಲ್ಲಿ : ಸಾಕ ಶಾಣ್ಯಾ ಅದಿ ಏಳ. ಯತ್ತಿ ಹೇಳಿಧಂಗ ಮುಂದಿಂದ ಇಚಾರಾ ಮಾಡು.

ಮತ್ತೊಬ್ಬ : ಬೆಂಕಿ ಪೂರಾ ನಂದಿಧಂಗ ಆಗೇತಿ. ಬ್ಯಾರೆ ಗಳಾ ತಂದ ನಿಂದರಿಸಿ ಗುಡ್ಸಾ ಹಾಕಬೇಕ.

ಪರಿವ್ಯಾ : ಹೌಂದು ಹೌಂದು. ಗಳಾ ತರೂ ಯವಸ್ಥಾ ಮಾಡೂಣು. **(ಪರವ್ವನನ್ನು ಹಾಗೂ ಆಕೆಯ ಸೆರಗಿನಲ್ಲಿ ಅಡಗಿದ್ದ ಮಗನನ್ನು ನೋಡಿ)** ಯವ್ವಾ. ತಿಳಿಸಿಹೇಳ ಅಂವಗ. ಆ ಸೂಳಿ ಮಗಾ ' ಸಾಲಿ ' ಅಂದರs ಮಣಕಾಲ ಗಣೆಕಿ ಕೈಯಾಗ ಕೊಡತನು. ಖಬರ್‌ದಾರ್.

ಒಬ್ಬ : ಇರ್ಲಿ ನಡಿಯೋಪಾ.

ಪರಿವ್ಯಾ : ಅಂವಾ ಸಾಲಿಗೆ ಹೋಗ್ಯಾನಂತ ಈಟ ಆಗಿದ್ದು. ಆ ಸಾಲ್ಯಾಗ ಇನ್ನಾ ಎಂಥೆಂಥಾ ಸಾಮಾನ ಅದಾವೋ ಯಾಂಬಾಲ.

ಮತ್ತೊಬ್ಬ : ಇರ್ಲಿ ನಡೀಯಪಾ. ಜೀವನ ಅಂದ ಮ್ಯಾಕ ಇದೆಲ್ಲಾ ನಡಿಯೂದs. ದೇವರದಾನ ನಡಿ.

ಮೂವರೂ ಸಾಗುತ್ತಿರುವಂತೆ ಪೊಲೀಸ್ ಇನ್ಸಪೆಕ್ಟರ್, ಕುಲಕರ್ಣಿ ಹಾಗೂ ಒಬ್ಬ ಪುಢಾರಿ ಆಗಮಿಸುತ್ತಾರೆ. ಹೊರಟವರು ಹಾಗೆಯೇ ಗಾಬರಿಯಾಗಿ ನಿಲ್ಲುತ್ತಾರೆ.

ಇನ್ಸಪೆಕ್ಟರ್: ಯಾರ ಗುಡಸಲ ಅದು ಸುಟ್ಟ ಕರಕಲಾಗಿದ್ದು ?

ಪರಿವ್ಯಾ : ನಂದರೀ ಯಪ್ಪಾ.

ಕುಲಕರ್ಣಿ : ಓಹೋ... ನಿಂದs. ಗೊತ್ತಾತ ಬಿಡು.

ಪುಢಾರಿ : ಯಾರ್ರಿ ಅಂವಾ ?

ಕುಲಕರ್ಣಿ : ಇಂವಾ ಪರಗೌಡ ಅಂತರಿ. ಕಲ್ಲ ಮಡ್ಡ್ಯಾಗ ಭಾವಿ ತಗದ ಶೂರ.

ಇನ್ಸಪೆಕ್ಟರ್: ಏ... ಪರಿವ್ಯಾ... ಬೆಂಕಿ ಹ್ಯಾಂಗ ಹತ್ತಿತು ಹೇಳು.

ಪರಿವ್ಯಾ : ನ... ನ... ನ... ನನನ...

ಪುಢಾರಿ : ಅಂಜಬ್ಯಾಡ. ನಂಗೊತ್ತೈತಿ ಇದು ಯಾರ ಕರಾಮತಿ ಅಂತ. ನೀ ಕಂಪ್ಲೆಂಟು ಬರದು ಕೊಡು. ಈ ಸಾಹೇಬ್ರು ಪರಿಹಾರ ಕೊಡಸ್ತಾರ.

ಪರವ್ವ : ಯಪ್ಪಾ. ನಿಂ ಕೈ ಮುಗೀತೀನಿ. ನಮಗ ಅಂಥಾದ್ದೇನೂ ಬ್ಯಾಡರಿ.

ಪರಿವ್ಯಾ : ಹೌಂದ್ರಿ ಯಪ್ಪಾ... ಕಂಪ್ಲೇಂಟ್ - ಗಿಂಪ್ಲೇಂಟ್ ಏನ ಬ್ಯಾಡರಿ.

ಇನ್ಸಪೆಕ್ಟರ್: ನೀವು ಅಂಜಬ್ಯಾಡ್ರಿ. ನಾ ಅದೀನು. ಈ ಕುಲಕರ್ಣ್ಯಾರೂ ಅದಾರ. ಮತ್ತ ಈ ನಾಯಕರೂ ಅದಾರ. ಯಾರ್ದು ಈ ಕರಾಮತಿ ಅಂತ ಬರಕೊಡ್ರಿ. ಅವರ ಚರ್ಮಾ ಸುಲದು ತೂಗಹಾಕತೀನಿ.

ಪರಿವ್ಯಾ : ಯಪ್ಪಾ. ನಿಂ ಕಾಲಿಗೆ ಬೀಳ್ತೀನಿ. ಅಂಥಾದೆಲ್ಲಾ ಏನ ಬ್ಯಾಡ. ನಂ ಪಾಡಿಗೆ ನಮ್ಮನ್ನ ಬಿಟ್ಟ ಬಿಡ್ರಿ.

ಪುಢಾರಿ : ನೀವು ಯಾಕ ಅಂಜಾಕತ್ತೀರ್‍ಯೋ ನಮಗ ಗೊತ್ತಿಲ್ಲ. ನಾವೆಲ್ಲ ಅದೀವಲ್ಲ. ನೀವು ಧೈರ್ಯಾದಿಂದಿರ್ರಿ. ಯಾರ ಬೆಂಕಿ ಹಚ್ಯಾರ ಅವರ ಹೆಸರ ಹೇಳ್ರಿ ಸಾಕು.

ಪರವ್ವ : ಯಪ್ಪಾ... ತಂದೆ. ನಮ್ಮ ನಸೀಬ ಕೆಟ್ಟ. ಹಿಂಗಾತು. ನೀವು ಹೋಗಿಬಿಡ್ರಿ. ಏನ ಬಂದರೂ ನಾವು ಅನುಭೋಗಸ್ತೀವಿ.

ಮೂವರೂ ತಮ್ಮಲ್ಲಿಯೇ ಏನೇನೋ ಮಾತನಾಡಿಕೊಳ್ಳುತ್ತಾರೆ. ನಂತರ–

ಇನ್ಸಪೆಕ್ಟರ್: ಹಂಗಾರ ನೀವು ಕಂಪ್ಲೇಂಟ್ ಕೊಡಂಗಿಲ್ಲಂಥಂಗಾತು.

ಪರಿವ್ಯಾ : ಹೌಂದ್ರಿ ಯಪ್ಪಾ.

ಪುಢಾರಿ : ಕುಲಕರ್ಣ್ಯಾರs, ಇವರ ಲುಕ್ಸಾನು ತುಂಬಿ ಕೊಡಾಕ ಅರ್ಜಿ ಬರಿಸಿಕೊಂಡು ಮ್ಯಾಲ ಕಳಸರಿ. ನಾವು ಲುಕ್ಸಾನ ಕೊಡಸತೀವಿ.

ಕುಲಕರ್ಣಿ : ಹ್ಞೂನ್ರಿ. **(ಎಂದು ನಾಲ್ಕಾರು ಹಾಳೆ ತೆಗೆದು)** ಇಲ್ಲಿ ಬಟ್ಟ ಒತ್ತ. ಲುಕ್ಸಾನದ ರೊಕ್ಕ ಬಂದ ಮ್ಯಾಲ ತಂದ ಕೊಡತೀವಿ.

ಪರವ್ಯಾ ಪರವ್ವನ ಮುಖ ನೋಡುತ್ತಾನೆ. ಆಕೆ ‘ ಒತ್ತು ’ ಎಂದು ಸನ್ನ ಮಾಡುತ್ತಾಳೆ.

ಕುಲಕರ್ಣಿ : ಹಾಂ! ಹಾಂಗs... ಒಂಚೂರು ಈ ಕಡೆ ಬಾ ತಮ್ಮಾ. ಸ್ವಲ್ಪ ಬ್ಯಾರೆ ಕೆಲಸದ. **(ಪರಿವ್ಯಾನನ್ನು ಜನರ ಗುಂಪಿನಿಂದ ಬೇರ್ಪಡಿಸಿ)** ನೋಡು. ನಿಂಗ ಸಾವಿರಾರಗಟ್ಲೆ ಪರಿಹಾರ ಬರ್ತದ. ತಿಳೀತs ? ನಾಯಕರು ಅದನ್ನ ಕೊಡಸ್ತಾರ. ಅವರಿಗೆ ಬೆಂಗಳೂರಿಗೆ ಹೋಗಿಬರೋ ವ್ಯವಸ್ಥಾ ಮಾಡಬೇಕು. ತಿಳೀತs ? ಎರಡುನೂರು ಕೊಡು ಸಾಕು.

ಪರಿವ್ಯಾ : ಅಲ್ರೀ ಧಣ್ಯಾರs– ಎಲ್ಲಾ ನಿಂ ಕಣ್ಣ ಮುಂದs ಸುಟ್ಟ ಹೋಗೇತಿ. ನಾ ಎಲ್ಲಿಂದ ತರ್ಲಿ ರೊಕ್ಕಾ ?

ಕುಲಕರ್ಣಿ : ನೋಡೂ... ನಿನ್ನ ಮಗಾನs ಗುಡಸಲಾ ಸುಟ್ಟಾನಂತ ಅವರಿಗೆ ಗೊತ್ತದ. ನಿನ್ನ ಮಗನ್ನ ಹಿಡಕೊಂಡ ಹೋದ್ರು ಏನ ಮಾಡಾಂವಿದ್ದಿ ? ಸುಮ್ಮನs ನಾ ಹೇಳಿಧಂಗ ಮಾಡು. ತಿಳೀತs ?

ಪರಿವ್ಯಾ : **(ಗಾಬರಿಯಾಗಿ)** ಹ್ಞೂನ್ರಿ ಯಪ್ಪಾ.

ಪರಿವ್ಯಾ ಪರವ್ವನ ಬಳಿ ಬಂದು ಏನೇನೋ ಹೇಳುತ್ತಾನೆ. ಆಕೆ ಟ್ರಂಕಿನಿಂದ ನೋಟುಗಳನ್ನು ತೆಗೆದು ಕೊಡುತ್ತಾಳೆ. ಪರಿವ್ಯಾ ಅವುಗಳನ್ನು ಕುಲಕರ್ಣಿಯ ಕೈಯೊಳಗಿಡುತ್ತಾನೆ.

ಕುಲಕರ್ಣಿ : ಪರಿಹಾರ ಬಂದ ಮ್ಯಾಲ ಹೇಳಿ ಕಳಸ್ತೀನಿ. ಬಂದು ನಿನ್ನ ರೊಕ್ಕಾ ತಗೊಂಡು ಹೋಗು.

ಪರಿವ್ಯಾ : ಹ್ಞೂನ್ರಿ ಯಪ್ಪಾ.

ಕುಲಕರ್ಣಿ : ಸಾಹೇಬ್ರs, ನಡೀರಿನ್ನ. ಆಫೀಸಿಗೆ ಹೋಗಿ ರಿಪೋರ್ಟ್ ಬರಿಯೂಣಂತ.

ಕುಲಕರ್ಣಿ, ಇನ್ಸಪೆಕ್ಟರ್, ಪುಢಾರಿ ನಿರ್ಗಮಿಸುವರು.

ಮತ್ತೊಬ್ಬ : (ಸ್ವಗತ) ಅವರು ಪರಿಹಾರ ಕೊಟ್ರು. ಪರಿವ್ಯಾ ತಗೊಂಡ.

••• ಕತ್ತಲು •••

ಭದ್ರಗೌಡನ ಮನೆ. ಬೆಳಗಾವಿ. ಎದುರು ಗೋಡೆಯ ಮೇಲೆ ಹಿರಿಯ ಗೌಡನ ಭಾವಚಿತ್ರಕ್ಕೆ ಮಾಲೆ ಹಾಕಿ ತೂಗು ಬಿಟ್ಟಿದ್ದಾರೆ. ಭದ್ರಗೌಡ ಆರಾಮ ಕುರ್ಚಿಯ ಮೇಲೆ ಕುಳಿತಿದ್ದಾನೆ. ಆತನ ಇಕ್ಕೆಲಗಳಲ್ಲಿ ಅದೇ ಆಳುಗಳು ಕೂತಿದ್ದಾರೆ. ಮಗಳು ಗೀತಾ ತಂದೆಯ ಮುಂದೆ ಅತ್ತಿತ್ತ ಸುಳಿದಾಡುತ್ತಿದ್ದಾಳೆ.

ಸೂತ್ರಧಾರ: ಬೆಳ್ಳಕ್ಕಿ ಹಿಂಡ ಹಾರ್‍ಯಾವೋ । ಆಕಾಶದಾಗ
ಬೆಳ್ಳಿಯ ಮೋಡ ತೇಲ್ಯಾವೋ ॥
ನಂದನ ವನದಾಗ ಬಂದಾವೋ । ಬೆಳ್ಳಕ್ಕಿ ಹಿಂಡು
ಬಣ್ಣದ ಕಾರಂಜಿ ಕಂಡಾವೋ ॥
ಕಾಮನ ಬಿಲ್ಲು ನೋಡ್ಯಾವೋ । ಬೆಳ್ಳಕ್ಕಿ ಹಿಂಡು
ಚಿತ್ತಾರ ಚಿತ್ರವ ಬರದಾವೋ ॥
ಕನಸಿನ ಕುಲಾಯಿ ಹೆಣದಾವೋ । ಬೆಳ್ಳಕ್ಕಿ ಜೋಡಿ
ಕುಂಚಿಗಿಯ ಮುತ್ತು ಎಣಿಸ್ಯಾವೋ ॥
ಮುಗಲೆಲ್ಲ ತಾವೇ ತುಂಬ್ಯಾವೋ । ಬೆಳ್ಳಕ್ಕಿ ಜೋಡಿ
ಗಗನದ ಮ್ಯಾಲ ತೇಲ್ಯಾವೋ ॥
ನೆಲದವ್ವನ ಹಂಗು ಹರದಾವೋ । ಬೆಳ್ಳಕ್ಕಿ ಜೋಡಿ
ಹಾಲು ಹೊಳೆಯ ಈಸು ಬಿದ್ದಾವೋ ॥

ಭದ್ರಗೌಡ : ಗೀತವ್ವ... ಎಲ್ಲಿ ಅಂವಾ... ಇನ್ನಾ ಬರಲಿಲ್ಲಲಾ ?

ಗೀತಾ : ಬರ್ತೀನಿ ಅಂದಿದ್ದ. ಇನ್ನಾ ಬರವಲ್ಲ ನೋಡು.

ಭದ್ರಗೌಡ : ಶಾರದೂರಿಗೆ ಬಂದ್ರ ಏನಾತು ? ಹಳ್ಳಿ ಚಟಾ ಹ್ಯಾಂಗ ಹೋದೀತು ? ಎಷ್ಟಂದ್ರೂ ಹಳ್ಳಿ ರಕ್ತನs ನೋಡು.

ಗೀತಾ : (ಹುಸಿ ಮುನಿಸಿನಿಂದ) ಹೋಗಪಾ.. ಅಂವಾ ಹಂಗಿಲ್ಲ. ಕಾಲೇಜಿಗದೂ ಸರಿಯಾಗಿ ಬರ್‍ತಾನ. ಶಾಣ್ಯಾನೂ ಇದ್ದಾನ.

ಭದ್ರಗೌಡ : ಅಂವನ ಹೆಸರೇನಂದಿ ?

ಗೀತಾ : ಎಸ್. ರಾಮ್ ಅಂತ.

ಭದ್ರಗೌಡ : ನಮ್ಮೂರಾಗ ಯಾಂವ ಇದ್ದಾನಾದೀತು ಈ ಎಸ್. ರಾಮು ಅಂದ್ರs... ?

ಗೀತಾ : ನನಗೂ ಮದಲ ಹಿಂಗs ಅನಿಸಿತ್ತು ಪಪ್ಪಾ.

ಭದ್ರಗೌಡ : ಮತ್ತ ನಿನಗ ಹ್ಯಾಂಗ ಗೊತ್ತಾತು– ಅಂವಾ ನಮ್ಮೂರಾಂವಾ ಅಂತ ?

ಗೀತಾ : ಒಂದಿನಾ ಏನಾತು ಗೊತ್ತೈತಿ ಏನು ? ನಾ ಲೈಬ್ರಿಯೊಳಗ ಪುಸ್ತಕ ತರಾಕ ಅಂತ ಹೋಗಿದ್ದೆ. ಅಲ್ಲಿ ಇಂವಾ ದೂರ ಖಿಡಕ್ಯಾಗ ಏನೋ ನೋಡಿಕೊಂತ ಮಳ್ಳನ್ಹಾಂಗ ನಿಂತಿದ್ದ. ನಾ ಲೈಬ್ರರಿಯನ್‌ನ ಟೇಬಲ್ಲಿಗೆ ಬರೂದಕ್ಕೂ– ಆ ಲೈಬ್ರರಿಯನ್ನು – 'ಯಾರ್ರಿ ಅದು ಎಸ್. ರಾಮ್ ಬೆಟಗೇರಿ ಅಂದ್ರs– ?' ಅಂತ ಒದರೂದಕ್ಕೂ ಚಾಟಿ ಆತು. ಇಂವಾ ನಾನರೀ ಅಂತ ನಾಚಿಕೋತ ಬಂದು ತನ್ನ ಐಡೆಂಟಿಟಿ ಕಾರ್ಡು ಒಯ್ದ. ನನಗ ಇಂವಾ ನಮ್ಮ ಊರಾಂವನs ಇದ್ದಿರಬೇಕು ಅಂತ ಅನಿಸ್ತು. ಸಹಜ ಹೋಗಿ ಕೇಳಿದೆ. 'ನಿಂಬದು ಯಾವೂರ್‍ರೀ ?' ಅಂತ. ಪಪ್ಪಾ. ಹೇಳ್ತೀನಿ ನಿಂಗs. ಅಂವಾ ನಾ ಮಾತಾಡ್ಸಿದ ಕೂಡ್ಲೆ ಎಷ್ಟು ಬೆವರಿದ್ದ ಗೊತ್ತದ ಏನು ? ಬ್ಯಾಡದರ ಸುದ್ದಿ. ಮೈಮ್ಯಾಲಿನ ಅರಿವಿ ಒದ್ದಿ ಆಗಿ ಹೋಗಿದ್ದು. ನಾನು ಮತ್ತ ಕೇಳಿದೆ– 'ಯಾವೂರ್‍ರೀ ನಿಂಬದು ?' ಅಂತ. ಅಂವಾ ತೊದಲಿಕೋತ 'ಬೆ್ಬೆಬೆಬೆಟಗೇರಿ' ಅಂದಾ. ನಂಗಂತೂ ಕಂಡಾಪಟಿ ನಗಿ ಬಂದಿತ್ತು.

ಭದ್ರಗೌಡ : (ನಗುತ್ತ) ಅಂತೂ ಎಸ್. ರಾಮನ್ನ ಫೈಲಾ ಸರ್ತೆನs ಠುಸ್. ರಾಮನ್ನ ಮಾಡಿದಿ ಬಿಡು.

ಗೀತಾ : ಹೀಂಗ ನಮ್ಮಿಬ್ಬರಿಗೂ ಪರಿಚಯ ಆತು. ಈಗೀಗ ಅಂವಾ ನನ್ನ ಕಂಡರs ಚವರಾಂಗಿಲ್ಲ. ಶಾರದೂರ ಗುಣಾ ಈಗ ಬರಾಕ ಸುರು ಮಾಡಿದಾವ ಅವನ ನಡತಿಯೊಳಗ.

ಭದ್ರಗೌಡ : (ನಗುತ್ತ) ನೀಯೇನ ಅಂವನ್ನ ಲವ್-ಗಿವ್ ಮಾಡಂಗಿಲ್ಲ ಹೌಂದಲ್ಲೋ ಮತ್ತ ?

ಗೀತಾ : (ನಾಚಿ) ಥೂ ! ನಿಂಗಂತೂ ನಾಚಿಗೀನs ಇಲ್ಲ.

ಭದ್ರಗೌಡ : ಇದ್ದರೂ ಏನ ತಪ್ಪಿಲ್ಲ ಬಿಡು.

ಗೀತಾ : (ಹುಸಿಮುನಿಸಿನಿಂದ) ಪಪ್ಪಾ!

ಪಾರ್ವತಿ : (ಒಳಗಿನಿಂದ ಬರುತ್ತ) ನೋಡ್ರಿ. ಆಕಿ ನಿಮ್ಮ ಮುಂದ ಹೇಳಾಕ ನಾಚಿರಬೇಕು. ಆದರs... ಅವರಿಬ್ಬರ ನಡಕ ಏನೋ ಐತಿ.

ಭದ್ರಗೌಡ : (ಸ್ವಲ್ಪ ಸೀರಿಯಸ್ಸಾಗಿ) ಹಿಂಗ್ಯೆತಿ ?

ಪಾರ್ವತಿ : ನಿಮ್ಮ ದಗದದಾಗ ಇವೆಲ್ಲಾ ನಿಮಗ ಹ್ಯಾಂಗ ತಿಳೀತಾವು ? ನಮ್ಮ ಗೀತಾ ಮತ್ತ ಆ ರಾಮನ ಹೆಸರು ಕಾಲೇಜಿನ ಗ್ವಾಡಿ ಮ್ಯಾಗ ಬರದು ಯಾಷ್ಟ ತಿಂಗಳಾತು. ಇಷ್ಟರ ಮ್ಯಾಗ ತಿಳಕೋಬೇಕು.

ಭದ್ರಗೌಡ : ಮತ್ತ ನನಗ್ಯಾಕ ಹೇಳಲಿಲ್ಲ ?

ಪಾರ್ವತಿ : ಹೇಳಾಕ ನೀವು ಊರಾಗ ಅದೀರೆಲ್ಲಿ ? ಬೆಟಗೇರಿ - ಬೆಳಗಾಂವಿ ನಡಕ ತಿರಗಿದ್ದs ತಿರಗಿದ್ದು. ಮಗಳು ದೊಡ್ಡಾಕಿ ಆಗಿದಾಳಸ್ನೂದರೆ ಖಬರಿ ಐತಿಲ್ಲೊ ನಿಮಗ ?

ಭದ್ರಗೌಡ : ಅದಲ್ಲಾ ಬರೋಬ್ಬರಿ. ಆದರs ಈ ಎಸ್. ರಾಮು ಅಂದ್ರs ಯಾರ ಮಗಾ ಇರಬೇಕು ?

ಪಾರ್ವತಿ : ಈಗ ಅವನs ಬರತಾನಲ್ಲ ಕೇಳಿದ್ರಾತು.

ಗೀತಾ : ಮಮ್ಮಿ, ಅಂವಾ ಬರ್‍ತಾನಂತೀ ?

ಭದ್ರಗೌಡ : ಯಾಕs... ನಿನಗs ಅನುಮಾನ ಐತೇನು ?

ಗೀತಾ : ನಾ ಮನೀಗೆ ಬರ್‍ರಿ ಅಂತ ಕೇಳಾಕ ಹತ್ತಿ ಭಾಳ ದಿವಸಾತು. ಏನರೆ ನೆವಾ ಹೇಳಿ ತಪ್ಪಿಸತಿದ್ದ. ಇವತ್ತ ಬರಾಕs ಬೇಕು ಅಂತ ಹೇಳಿದಾಗ ಸೈತ ಅಂವಾ ಒಲ್ಲದ ಮನಸಿಲೆ ಹ್ಞೂ ಅಂಧಾಂಗಿತ್ತು.

ಭದ್ರಗೌಡ : ಇದು ಬೆಳಗಾಂವಿ. ಆದರs ಏನಾತವಾ ತಂಗೀ ? ಹಳ್ಳಿ ಊರ ವರ್ಚಸ್ಸು ಇರತೈತಿ ನೋಡು. ಗೌಡನ ಮನಿಗೆ ಹ್ಯಾಂಗ ಹೋಗೂದು ಅಂತ ಅಂಜಿಕಿ ಆಗಿರಬೇಕು ಅಂವಗೂ.

ಗೀತಾ : ಪಪ್ಪಾ, ನಂಗ್ಯಾಕೋ ಬರಾಣಿಲ್ಲ ಅನಸತೈತಿ.

ಭದ್ರಗೌಡ : ಇಂದ ಬರದಿರಕ ಮತ್ತೊಂದ ದಿನಾ ಬಂದಾನು. ಅದಕ್ಯಾಕ ಅಷ್ಟ ಚಿಂತಿ ಮಾಡತಿ ಬಿಡು.

ಪಾರ್ವತಿ : ಬಂದಂತ ಕಾಣತೈತಿ. ಗೇಟ ಸಪ್ಪಳಾತು.

ಗೀತಾ : ಹೌದು ಪಪ್ಪಾ. ಅಂವ ಬಂದ.

ಭದ್ರಗೌಡ ಗತ್ತಿನಿಂದ ಕೂರುತ್ತಾನೆ. ಆಳುಗಳು ಇನ್ನಷ್ಟು ವಿನಯಶೀಲರಾಗಿ ಕೂರುತ್ತಾರೆ. ಎಸ್. ರಾಮ ಒಳಬರುತ್ತಾನೆ.

ಗೀತಾ : ಪಪ್ಪಾ, ಇವನs ಎಸ್. ರಾಮ ಅಂತಂದ್ರು.

ರಾಮ : ನಮಸ್ಕಾರ್ರೀ ಗೌಡ್ರs.

ಭದ್ರಗೌಡ : ನಮಸ್ಕಾರ... ಬಾ... ಕುಂದರು.

ರಾಮ : (ಹೆದರುತ್ತ) ಇರ್ಲಿ ಬಿಡ್ರಿ.

ಗೀತಾ : ಕುಂದರಂದ್ರs ಕುಂದರಬೇಕು. (ರಾಮ ಖಾಲಿ ಇರುವ ಕುರ್ಚಿಯಲ್ಲಿ ಕೂತ ನಂತರ, ತಾಯಿಯನ್ನು ತೋರಿಸಿ) ಇವರು ನನ್ನ ಮಮ್ಮಿ.

ರಾಮ : ನಮಸ್ಕಾರ್ರೀ. (ಪಾರ್ವತಿ ನಮಸ್ಕರಿಸುತ್ತಾಳೆ.)

ಭದ್ರಗೌಡ : ನೀನೂ ಗೀತಾನ ಕಾಲೇಜದಾಗ ಕಲ್ಯಾಕತ್ತಿ ಅಂತ ಗೀತಾ ಹೇಳಿದ್ಲು. ಗೀತಾ. ಇಂವಗ ಚಾ ತಂದ ಕೊಡವಾ. (ಒಳ ಹೋಗುತ್ತಾಳೆ.)

ರಾಮ : ಹೌಂದ್ರಿ.

ಭದ್ರಗೌಡ : ನಿಂದೂ ಬೆಟಗೇರಿನ ಅಂತ.

ರಾಮ : (ಹೆದರಿ) ಹೌಂದ್ರಿ.

ಭದ್ರಗೌಡ : ಬೆಟಗೇರ್‍ಯಾಗ ಯಾರ ಮಗಾ ನೀ ?

ರಾಮ : ನಾ... ನಾ... ಪರಿವ್ಯಾನ ಮಗಾ... ಸಂತ್ರಾಮ ಅಂತರಿ. ಕಾಲೇಜಿಗೆ ಬಂದ ಮ್ಯಾಕ ಎಸ್. ರಾಮ ಅಂತ ಮಾಡಕೊಂಡೀನ್ರಿ.

ಭದ್ರಗೌಡ : ಹ್ಲಾ !

ರಾಮ : ಇಲ್ಲೇ ಹಾಸ್ಟೇಲಿನ್ಯಾಗ ಅದೀನ್ರಿ.

ಭದ್ರಗೌಡ : (ಬರುತ್ತಿರುವ ಸಿಟ್ಟನ್ನು ತಡೆಯುತ್ತ ಪಾರ್ವತಿಗೆ) ಇಂವಾ ಯಾರು ಗೊತ್ತಾತೇನು ? ನಮ್ಮ ಮಡ್ಡಿ ಹೊಲಾ ಮಾಡ್ಯಾನಲಾ... ಪರಿವ್ಯಾ... ಅಂವನ ಮಗಾ. (ಸಂತ್ರಾಮನಿಗೆ) ಏನಪಾ ಮಗನs... ನಮ್ಮ ಹುಡಗೀ ಜೋಡಿ ಗೆಳತನ ಮಾಡೂ ಹಂಗ ಆಗಿ ಬಿಟ್ಯಾ ! ಶಹಭಾಶ್ ! ನಿಮ್ಮಪ್ಪ ನಮ್ಮ ಹೊಲಕ್ಕ ಕೈ ಹಚ್ಚಿದರs ನೀ ನಮ್ಮ ಮನೀಗೇ ಕೈ ಹಚ್ಚೀಯಲಾ.

ರಾಮ : ಇದ್ರಾಗ ಏನ ತಪ್ಪೈತ್ರಿ ? ಮನಿಶಾರೆಲ್ಲ ಒಂದs ಅಂತ ಗೀತಾನs ಹೇಳಿದಳು.

ಭದ್ರಗೌಡ : ಆಕಿ ಸಾವಿರ ಹೇಳತಾಳ. ತಿಳೀಲಾರದ ಹುಡಗಿ. ನಿನಗ ಬುದ್ಧಿ ಬ್ಯಾಡಾ ? ಏನು ? ಇನ್ನೂ ಕುಂತಿದೀಯಲಾ– ಇಷ್ಟಾದ ಮ್ಯಾಗೂ. ಸೇವಾಗೀವಾ ಆಗಬೇಕೇನು ?

ಸಂತ್ರಾಮ ಅವಮಾನದಿಂದ ಎದ್ದು ಹೊರಟುಹೋಗುತ್ತಾನೆ.

ಪಾರ್ವತಿ : ಸಲಗಿ ನಾಯಿ ತಲಿಗೇರಿತಂತ. ಹಂಗ ಆಗೇತಿ.

ಗೀತಾ : (ಒಳಗಿನಿಂದ ಬಂದು ರಾಮನನ್ನು ಕಾಣದೆ) ಅಂವಾ ಎಲ್ಲಿ ? ರಾಮು ?

ಭದ್ರಗೌಡ : ಹ್ಲೂ ! ಹ್ವಾದಾ. ಇನ್ನೊಂದೀಟು ಕುಂತಿದ್ರs ಚಪ್ಪಲಿ ಸೇವಾ ಮಾಡಿ ಕಳಸತಿದ್ದೆ.

ಗೀತಾ : ಯಾಕ ಏನಾತು ?

ಭದ್ರಗೌಡ : ಅಲ್ಲವಾ.. ಬುದ್ಧಿ ಐತೇನ ನಿನಗ ? ನಮ್ಮ ಊರಾಂವಾ ಅಂದ ಕಾರಣಕ್ಕ ಹೊಲಿ ಹನ್ನೆರಡು ಜಾತಿಯವರು ಸ್ನೇಹಿತರಾಗಿ ಬಿಡ್ತಾರೇನು ? ಈ ಸೂಳಿಮಗಾ ಯಾರು ಗೊತ್ತದ ಏನು ? ನಮ್ಮ ಮಡ್ಡಿ ಮಾಡ್ಯಾನಲ್ಲ... ಹೊಲ್ಯಾರ ಪರಿವ್ಯಾ... ಪರವ್ವ ಅಂತ ಮುದಕಿ ಐತಲಾ– ಆಕಿ ಮಮ್ಮಗಾ.

ಪಾರ್ವತಿ : ನಿಮ್ಮ ಅಜ್ಜಾ ಆಕಿನ್ನ ಇಟಗೊಂಡಿದ್ನಂತ !

ಭದ್ರಗೌಡ : ನೀ ಒಬ್ಬಾಕಿ... ಅಂವನ್ನ ಮನೀಗಿ ಕರಕೊಂಡ ಬಂದೀಯಲಾ. ಇನ್ನ ಇಂವನ ಜೋಡಿ ಗೆಳೆತನಾ ಇಟಗೊಂಡರ ಯೋಗ್ಯ ಆಗೂದಿಲ್ಲ ನೋಡ ಹುಡುಗಿ.

ಗೀತಾ : **(ಅಳುತ್ತ ಒಳ ಸಾಗುತ್ತಾಳೆ.)**

ಪಾರ್ವತಿ : ಮದಲಽ ಇಕಿನ್ನ ಕಾಲೇಜ ಬಿಡಸರಿ. ಅಂದರಽ ಎಲ್ಲಾ ನೆಟ್ಟಗಾಗತೈತಿ.

ಭದ್ರಗೌಡ : ತಡಿ ! ಮದಲಽ ಇವರಪ್ಪನ್ನ ಮಡ್ಡಿ ಬಿಡಸತೇನ... ನಾಕ ದಿನಾ ಉಣವಲ್ಲನ್ಯಾಕ ಅಂತ ಬಿಟ್ಟದ್ದಽ ತಪ್ಪಾತು... ಕಬ್ಬಿಣ ಕಾದಾಗನಽ ಬಡದ ತಗೀಬೇಕು.

ಗೀತಾ : **(ಹೊರಬಂದು, ಸಿಟ್ಟಿನಿಂದ)** ಪಪ್ಪಾ ! ನಂಗಂತೂ ಜಾತಿ - ಪಾತಿ ಏನೂ ಇಲ್ಲ... ನನಗೆ ಮನಿಶಾರೆಲ್ಲಾ ಏಕಪ್ರಕಾರ ಅನಸತೈತಿ. ನೀವು ಏನ ಮಾಡಿದ್ರೂ ನಾ ಕೇಳಾಕಿ ಅಲ್ಲ. **(ಸರ್ರನೆ ಒಳಸಾಗುತ್ತಾಳೆ.)**

ಭದ್ರಗೌಡ : ಕೇಳಿದೇನು ಆಕಿ ಮಾತು ? ಇಬ್ಬರೂ ಭಾಳ ಮುಂದ ಹೋಗ್ಯಾರ ಕಾಣತೈತಿ.

• • • ಕತ್ತಲು • • •

ಬಟಗೇರಿ. ಗೌಡರ ಮನೆ. ಭದ್ರಗೌಡ ಕೂತಿದ್ದಾನೆ. ಎಡ-ಬಲದಲ್ಲಿ ಆಳುಗಳೂ ಕೂತಿದ್ದಾರೆ. ನಿಂಗ್ಯಾ ಅನತಿ ದೂರದಲ್ಲಿ ಕೂತಿದ್ದಾನೆ.

ಸೂತ್ರಧಾರ: ಬೆಳ್ಳಕ್ಕಿ ಹಿಂಡ ಹಾರ್ಯಾವೋ । ಆಕಾಶದಾಗ
ಕಪ್ಪನ್ನ ಮೋಡ ತೇಲ್ಯಾವೋ ॥
ಮೋಡಿಗೆ ಮೋಡ ತಾಗ್ಯಾವೋ । ತಾಗಿದ ಮ್ಯಾಲ
ಸಿಡಿಲಿಗೆ ಜೀಂವ ಬಂದಾವೋ ॥
ನೆಲದಾಗ ಬಿರಕು ಮೂಡ್ಯಾವೋ । ಬಾವ್ಯಾಗಿನ
ನೀರಾಗ ಕಲಕು ಮೂಡ್ಯಾವೋ ॥
ಹಸರಿಗೆ ವರ್ಷ ತುಂಬ್ಯಾವೋ । ತುಂಬಿದ ಮ್ಯಾಲ
ಹಳದಿಯ ಬಣ್ಣ ಬಂದಾವೋ ॥

ಭದ್ರಗೌಡ : ಬಂದನೋ ಇಲ್ಲೋ ಆ ಪರಿವ್ಯಾ ?

ನಿಂಗ್ಯಾ : ಬರಾಕತ್ತಾನಂತರಿ. ಮಡ್ಡಿಂದ ಬರಬೇಕಲ್ಲರಿ..

ಭದ್ರಗೌಡ : ಬರಲಿ. ಬರಲಿ. ಇನ್ನೆಷ್ಟ ದಿನಾ ಮಡ್ಡಿಗೆ ಹೋಗತಾನಂತ ಆ ಸೂಳಿಮಗಾ.

ನಿಂಗ್ಯಾ : ನಾವು ಹಿರೇಗೌಡ ಹ್ವಾದ ಮ್ಯಾಗ ನಿಮಗ ಹೇಳಿದಿವಿರಿ. ನೀವಽ ಕಿವಿ ಮ್ಯಾಲ ಹಾಕ್ಕೊಳಿಲ್ಲ. ನಾವು ಕೇಳಿದಾಗೆಲ್ಲ 'ಕುರಿ ಮಯ್ಯಲಿ ಬಿಡ್ರಿ' ಅಂದಿರಿ. ಈಗ ನೋಡ್ರಿ... ಪರಿವ್ಯಾನ ಮಗಾ ಕುತಿಗಿಗೇ ತಂದಿಟ್ಟಾನು.

ಭದ್ರಗೌಡ : ಈಗರೆ ಏನಾತು ? ಇನ್ನಾ ಕಾಲ ಮಿಂಚಿಲ್ಲ.

ಪರಿವ್ಯಾ : ನಮಸ್ಕಾರ ಮಾಡತನರೀ ಯಪ್ಪಾ. **(ನಮಸ್ಕರಿಸಿ ದೂರ ನಿಲ್ಲುವನು.)**

ಭದ್ರಗೌಡ : ಅಡ್ಡೀ ಇಲ್ಲ– ಅಪ್ಪಾ - ಮಗಾ ಭೇಶ್ ನಾಟಕ ಆಡತೀರಿ. ಈ ನಾಟಕ ಮಾಡೂದು ಬಿಡಲೇ.

ಪರಿವ್ಯಾ : ಹಂಗ್ಯಾಕಂತೀರಿ ಯಪ್ಪಾ..

ಭದ್ರಗೌಡ : ಅಲ್ಲಲೇ... ಮಗನಽ– ಆ ಮಡ್ಡೀ ಏನು ಸ್ವಂತದ್ದ ಮಾಡೀ ಏನು ? ಅಲ್ಲಿ ಯಾರನ್ನ ಕೇಳಿ ಭಾವಿ ತಗದೆಪಾ ಮಗನಽ ? ನಾ ಇನ್ನೂ ಜೀವಂತ ಅದೀನಿ ಅನ್ನೂ ಖಬರಿ ಐತಿಲ್ಲೋ ?

ಪರಿವ್ಯಾ : ಹಂಗ್ಯಾಕಂತೀರಿ ಧಣ್ಯಾರಽ... ಹಿರೇಗೌಡರು ಬಡವ ಮನಿಶಾ ಹೊಟ್ಟಿ ತುಂಬಿಕೊಳ್ಳಲಿ ಅಂತ ಅದನ್ನ ಬರದ ಕೊಟ್ಟಾರ್ರೀ ಯಪ್ಪಾ. ಆ ಜಾಗಾದಾಗ

ಮದಲ ಕರಿಕಿ ಸೃತ ಬೆಳೀತಿದ್ದಿಲ್ಲರೀ ಯಪ್ಪಾ... ಪುಣ್ಯವಂತರ ಹೆಸರ ಹೇಳಿ ನಾಕ ತುತ್ತು ಊಟಾ ಮಾಡಾಕತ್ತೀವ್ರಿ ಯಪ್ಪಾ.

ಭದ್ರಗೌಡ : ಸುಮ್ಮ ನಾಕ ತುತ್ತು ತಿಂದ ಬಿದ್ದಿದ್ರs ಹಿಂಗ್ಯಾಕ ಆಗತಿತ್ತು ? ಆ ನಾಕ ತುತ್ತ ನಿಮ್ಮನ್ನ ಸೊಕ್ಕಿಗೇರಸೇತಿ. ಹ್ಞಾ. ಹ್ಞಾ... ಹೌದು... ನಾಕ ತುತ್ತು ಅನ್ನಾ ತಿನ್ನಾಕತ್ತೇರಿ... ಮಗನ್ನ ಕಾಲೇಜಿಗೂ ಕಳಸ್ತೀರಿ... ಅಲ್ಲಿ ಅಂವಾ ತಾ ಯಾರು ಅಂಬೂದನ್ನ ಮುಚ್ಚಿ ಇಟ್ಟು ಸಂತ್ರಾಮ ಅಂತ ಹೇಳಾಕ ನಾಚಿಕಿ ಬಂದು ಎಸ್. ರಾಮು ಅಂತ ಹೇಳಿಕೊಂತ ಗೌರವಸ್ಥರ ಮನಿ ಹೆಣ್ಣಮಕ್ಕಳ ಹಿಂದಿಂದ ಅಡ್ಡ್ಯಾಡತಾನು.

ಪರಿವ್ಯಾ : ಹಂಗಲ್ರೀ ಯಪ್ಪಾ...

ಭದ್ರಗೌಡ : ಹಂಗಲ್ಲ ಏನಲೇ... ಅತ್ತ ಆ ಮಗನ್ನ ತುರಂಗಿಗೆ ಕಳಿಸೇ ಇತ್ತ ಬರಬೇಕಂತ ಮಾಡಿನ್ನಿ... ಕೆಟ್ಟ ಹೆಸರು ನಮ್ಮೂರಿಗೇ ಬರೂದಂತ ಸುಮ್ಮ ಆಗಿದೇನು. ಛಂದಂಗೆ ತಿಳಿಸಿ ಹೇಳು ಅಂವಗ.

ಪರಿವ್ಯಾ : ಹ್ಞೂನ್ರಿ ಯಪ್ಪಾ.

ಭದ್ರಗೌಡ : ಮತ್ತ ನೀನು ಸುಮ್ಮನ ನಾ ಹೇಳಿದಲ್ಲಿ ಬಾಯಿ ಮುಚಿಗೊಂಡು ಒಟ್ಟ ಊರ ಮಡ್ಡಿ ಬಿಟ್ಟು ಹೋದರ ಪಾಡ ಆಗತೈತಿ. ಇಲ್ಲಾಂತಂದರ ಹಿಂಡಲಗಿ ಜೇಲು ಬೆಳಗಾಂವಿಗೆ ಅಗದೀ ಸನೇ ಐತಿ. ತಿಳೀತ ?

ಪರಿವ್ಯಾ : ಗೌಡರs... ಹಂಗೆಲ್ಲಾ ಮಾಡಬ್ಯಾಡರಿ. ತಪ್ಪು ಆಗೇತಿ. ಹೊಟ್ಯಾಗ ಹಾಕ್ಕೊರಿ.

ಭದ್ರಗೌಡ : ಹೊಟ್ಯಾಗ ಹಾಕೊಂಡದ್ದಕ್ಕs ನಿನ್ನ ಮಗಾ ಇನ್ನಾ ಜೇಲಿಗೆ ಹೋಗಿಲ್ಲ. ತಿಳೀತs ? ಆ ಮಡ್ಡಿ ಬಿಟ್ಟು ಹೊರಗ ನಡಿ.

ಪರಿವ್ಯಾ : ಆ ಮಡ್ಡಿಗೂ ಇದಕೂ ಏನ ಸಂಬಂದರೀ ಯಪ್ಪಾ ?

ಭದ್ರಗೌಡ : ಆ ಮಡ್ಡಿಗೂ ನಿನಗೂ ಏನ ಸಂಬಂದಲೇ ಮಗನs ?

ಪರಿವ್ಯಾ : ಹೇಳಿದ್ನಲ್ರೀ– ಹಿರೇಗೌಡರು ಬಡ ಮನಿಷಾ ಉಣ್ಣಲಿ ಅಂತ ಬರಕೊಟ್ಟಾರ.

ಭದ್ರಗೌಡ : ಹಿರೇಗೌಡನ ಕಾಲ ಮುಗದು ಹಳೇ ಮಾತಾಗೇತಿ. ತಿಳೀತs.

ಪರಿವ್ಯಾ : (ನಿರ್ಧಾರದಿಂದ) ಹಿರೇಗೌಡರು ಬರಕೊಟ್ಟಾರ್ರೀ ಯಪ್ಪಾ. ಅವರ ಪುಣ್ಣೇ ಇರುವಷ್ಟು ದಿನಾ ನಾ ಆ ಹೊಲಾ ಬಿಡಾಣೆಲ್ಲರಿ. **(ಎಂದವನೇ ಅಲ್ಲಿಂದ ಎದ್ದು ಹೊರಟು ಹೋಗುತ್ತಾನೆ. ಉಳಿದವರೆಲ್ಲ ಕೂತೇ ಇದ್ದಾರೆ.)**

• • • ಕತ್ತಲು • • •

ಬೆಟಗೇರಿಯ ಚಾವಡಿ. ಚಾವಡಿಯಲ್ಲಿ ನಿಂಗ್ಯಾ, ಭದ್ರಗೌಡ, ಕುಲಕರ್ಣಿ, ಪೊಲೀಸ್ ಇನ್ಸಪೆಕ್ಟರ್ ಹಾಗೂ ಮತ್ತೆ ಕೆಲವರು ಕೂತಿದ್ದಾರೆ.

ಸೂತ್ರಧಾರ: ಬೆಳ್ಳಕ್ಕಿ ಹಿಂಡು ಹಾರ್ಯಾವೋ । ಆಕಾಶದಾಗ
ಬೆಣ್ಣಿಯ ಮುದ್ದಿ ತೇಲ್ಯಾವೋ ॥
ಹಸಿರಿನ ಪೈರು ನೋಡ್ಯಾವೋ । ಬೆಳ್ಳಕ್ಕಿ ಹಿಂಡು
ಬಾವಿಯ ನೀರು ಕುಡದಾವೋ ॥
ಮ್ಯಾಲ ಮ್ಯಾಲಕ ಹಾರ್ಯಾವೋ । ಬೆಳ್ಳಕ್ಕಿ ಹಿಂಡ
ನೆಲದವ್ವನ ನೋಡಿ ನಕ್ಕಾವೋ ॥
ಥಕಥೈಯ ಥಿತ್ತೈ ಕುಣದಾವೋ । ಬೆಳ್ಳಕ್ಕಿ ಹಿಂಡು
ನೆಲವನ್ನೆ ಹೊತ್ತ ಒಯ್ದಾವೋ ॥

ಶರಣು ಶರಣೆಂದು ಹಾಡ್ಯಾವೋ । ಬೆಳ್ಳಕ್ಕಿ ಹಿಂಡು
ನೀರಾನ ಮೀನು ಹಿಡದಾವೋ ॥
ಬೆಳ್ಳಕ್ಕಿ ಹಿಂಡು ಕೂಡ್ಯಾವೋ । ಗುಡ್ಡದ ಮ್ಯಾಗ
ಕುಣಕೋಂತ ಕ್ಯಾಕಿ ಹಾಕ್ಯಾವೋ ॥

ಭದ್ರಗೌಡ : ಅಲ್ರೀ ಸಾಹೇಬ್ರs. ನಮ್ಮಪ್ಪ ಬರದ ಕೊಟ್ಟಾನಂತ ಹೇಳಾಕತ್ಯಾನ ಅಂವಾ. ಎಷ್ಟ ಸೊಕ್ಕ ಇರಬೇಕು ನೋಡ್ರಿ ಅಂವಗ.

ಕುಲಕರ್ಣಿ : ಚಾವಡಿಗೆ ಬಾರೋ ಅಂತ ಹೇಳಿ ಕಳಿಸಿದರs ಓಡಿ ಹೋಗಿ ತ್ವಾಟದಾಗ ಕೂತಾನ ನೋಡ್ರಿ.

ನಿಂಗ್ಯಾ : ಧಣ್ಯಾರs, ಅಂವನ ಕೀಲs ಸಡ್ಲ ಆಗ್ಯಾವರಿ. ಮನ್ನಿ ಗೌಡರು ಕರಿಸಿ ಬೈದಾಗಿಂದ ಅಂವಾ ಹುಚ್ಚನಾಂಗ ಮಾಡಾಕತ್ಯಾನ್ರಿ.

ಭದ್ರಗೌಡ : ಅಂವಾ ಯಾಕ ಹುಚ್ಚ ಆಗತಾನಲೇ ?

ನಿಂಗ್ಯಾ : ಹೌಂದ್ರಿ ಯಪ್ಪಾ. ತ್ವಾಟಾ ಬಿಟ್ಟು ಬರಾಕ ತಯಾರs ಇಲ್ಲಂತ್ರಿ. ಯಾರರೆ ಕೇಳಿದ್ರs– 'ಬೆಳ್ಳಕ್ಕಿ ಬಂದು ನನ್ನ ತ್ವಾಟಾ ಒಯ್ಯಾವ' ಅಂತಾನಂತ್ರಿ.

ಕುಲಕರ್ಣಿ : ಏ ! ಭಾರಿ ಮಜಾ ಅದ ಬಿಡು ಈ ಸುದ್ದಿ. ಮುಂದs ?

ನಿಂಗ್ಯಾ : ಇದಕ್ಕಿದ್ದಂಗ ಬಾವಿ ನೋಡಿ ಬುಳುಬುಳು ಅಳತಾನಂತ್ರಿ. ಒಮ್ಮಿಂದೊಮ್ಮಿಗೀಲೇ ಎಲ್ಲವ್ವನ ಗುಡ್ಡದ ಕಡೀಕ ನೋಡಿ ಉಧೋ ಉಧೋ ಅಂತ ಒದರ್ತಾನಂತ್ರೀ.

ಕುಲಕರ್ಣಿ : ಮತ್ತೇನ ಮಾಡ್ತಾನಂತಪಾ ?

ನಿಂಗ್ಯಾ : ಮುಗಲ ಕಡೆ ನೋಡಿ. ಹಿರೇಗೌಡನ ಹೆಸರ ತಗೊಂಡು ಕೈ ಮುಗೀತಾನಂತ್ರಿ.

ಕುಲಕರ್ಣಿ : ಅಂತೂ ಪರಿವ್ಯಾಗ ಹುಚ್ಚ ಹಿಡದsದ ಅನ್ನು.

ಭದ್ರಗೌಡ : ಅಂವಾ ಹೀಂಗ ಭರಮಿಷ್ಟನಾಂಗ ಮಾಡಾಕತ್ಯಾನಂತ ನೀವು ಬಿಟ್ಟ ಬಿಡಬ್ಯಾಡರಿ ಮತ್ತ.

ನಿಂಗ್ಯಾ : ಅಂವಂದ ಹೋಗಲ್ರೀ ಧಣ್ಯಾರ. ಅವರ ಅವ್ವನ ಸುದ್ದಿ ಹೇಳ್ತೀನಿ ಕೇಳ್ರಿ. ಸಣ್ಣ ಗೌಡರು ಹೊಲಾ ಬಿಡಂದಾರ ಅಂಬೂ ಸುದ್ದಿ ಕೇಳಿ ಮುದಿಕಿಗೆ ಕಂಡಾಪಟಿ ಸಿಟ್ಟ ಬಂದೇತಂತ.

ಕುಲಕರ್ಣಿ : ಅಕಿ ಏನಂತಾಳಂತ ?

ನಿಂಗ್ಯಾ : ಸಣ್ಣ ಗೌಡರನ್ನ ಹೆಸರ ತಗೊಂಡು ಬೈತಾಳಂತ್ರಿ.

ಕುಲಕರ್ಣಿ : ಏನಂತ ಬೈತಾಳ ಹೇಳಲಾ. ಅವರಿಗೂ ಗೊತ್ತಾಗಲಿ ಅದು.

ನಿಂಗ್ಯಾ : **(ಹೆಂಗಸರಂತೆ ದನಿ ತೆಗೆದು)** 'ಅವ್ - ಅವ್ - ನನ್ನ ಸವತೀ ಮಗನs... ಕಡೀಕೂ ಕೈ ತೋರಿಸೇ ಬಿಟ್ಯಾ ?... ಅಧೆಂಗ ಹೊಲಾ ಬಿಡಿಶಾರಪಾ... ನನ್ನ ಮಗಾ ಮುಕಳ್ಯಾಗಿಂದ ಕಟನೀರು ಬಸಿಯೂ ಹಾಂಗ ದುಡದೈತಿ... ಭಾಂವಿ ಕಡದೈತಿ... ಇಷ್ಟರ ಮ್ಯಾಗ ಕಾಗದ ಐತ್ಯೋ ತಮ್ಮಾ... ಕಾಗದೈತಿ... ದೊಡ್ಡ ಗೌಡನs ಬರಕೊಟ್ಟಾನು' **(ದನಿ ಬದಲಿಸಿ)** ಅಂತ ಒದರ್ಯಾಡತೈತರೀ.

ಇನ್ಸಪೆಕ್ಟರ್: ಏನದು ಕಾಗದಾ ?

ನಿಂಗ್ಯಾ : ಏನಿಲ್ಲ ಬಿಡ್ರಿ ಸಾಹೇಬ್ರs... ಪರಿವ್ಯಾನ ಅವ್ವ ಹಿರೇಗೌಡರನ್ನ ಮಡ್ಡಿ ಬರಕೊಡು ಅಂತ ಕಾಡಿ ಕಾಡಿ ಕಾಗದದ ಮ್ಯಾಲ ಬರಿಸಿಕೊಂಡಾಳ. ಹಿರೇಗೌಡ ಏನ ಬರದ ಕೊಟ್ಟಾ ಅಂತ ಅಕಿಗಿ ಓದಾಕ ಸೈತ ಬರಾಣಿಲ್ಲ. ಮತ್ತ ಅದೇನ ಥಾಪಾ ಕಾಗದೂ ಅಲ್ಲ.

ಇನ್ಸಪೆಕ್ಟರ್: ಕುಲಕರ್ಣ್ಯಾರ. ನಂ ಪೊಲೀಸರು ಎಲ್ಲಿ ಹೋದರು ನೋಡ್ರಿ.

ಕುಲಕರ್ಣಿ : ಅವರೆಲ್ಲಿ ಹೋಗ್ತಾರ ಬಿಡ್ರಿ ಸಾಹೇಬ್ರs. ಮಡ್ಡಿ ಕ್ವಾಟಕ್ಕ ಹೋಗಿರಬೇಕ. ಆ ಪರಿವ್ಯಾ ಅಲ್ಲೇ ಇರತಾನಲಾ.

ಅಷ್ಟರಲ್ಲಿ ಹೊರಗೆ ಗದ್ದಲ ಕೇಳಿಸುತ್ತದೆ. ಪೊಲೀಸರು ಪರಿವ್ಯಾನನ್ನು ಹೊಡೆಯುತ್ತಲೇ ತಂದು ಚಾವಡಿ ಹೊಗಿಸುತ್ತಾರೆ. ಪರಿವ್ಯಾ ಅಲ್ಲಿದ್ದವರನ್ನೆಲ್ಲ ನೋಡಿ ಗಾಬರಿಯಾಗಿ ಮುದುರುತ್ತಾನೆ.

ಕುಲಕರ್ಣಿ : ನೀನs ಏನಪಾ ಪರಿವ್ಯಾ ಅಂದರs ?

ಪರಿವ್ಯಾ : ಹ್ಞೂನ್ರೀ ಯಪ್ಪಾ.

ಇನ್ಸಪೆಕ್ಟರ್: ಹ್ಞೂನ್ರೀ ಏನೋ ಭೋಸಡೀಕೇ... ಕಂಡವರ ಹೊಲಾ ನಂದಂತೀ ಏನೋ ಲೌಡಿ ಮಗನs... ಹಾಕರಲೇ ಈ ಸೂಳಿಮಗ್ಗ.

ಪೊಲೀಸರು ಮತ್ತೆ ಆವನನ್ನು ಸದೆಯುತ್ತಾರೆ.

ಪರಿವ್ಯಾ : (**ಹೊಡೆತ ಸಹಿಸಲಾರದೆ**) ಅಯ್ಯೋ... ಯಪ್ಪಾ... ನಾ ಏನೂ ಮಾಡಿಲ್ಲರೀ... ಯಪ್ಪಾ.

ಇನ್ಸಪೆಕ್ಟರ್: ಸಾಕು ನಿಲ್ಲಸರಿ. (**ಪೊಲೀಸರು ಹೊಡೆತ ನಿಲ್ಲಿಸುತ್ತಾರೆ.**) ಲೇ ಪರಿವ್ಯಾ ಭೋಸಡಿ ಮಗನs... ಈ ಕಾಗದಕ್ಕ ಬಟ್ಟ ಊರು... ಇಲ್ಲಂದ್ರ ನಿನ್ನ ಜಮಡಾ ನಿಕಾಲ್ ಮಾಡಸ್ತೀನು ಭೋಸಡೀಕೆ ?

ಪರಿವ್ಯಾ : ಹಿರೇಗೌಡರು ಬರಕೊಟ್ಟಾರ್ರೀ ಯಪ್ಪಾ. ನನ್ನ ಕೂಳ ಕಸಗೋಬ್ಯಾಡ್ರಿ.

ಇನ್ಸಪೆಕ್ಟರ್: ಹಾಕರೆಲೆ... ಈ... ಮಂಗ್ಯಾನ ಮಗ್ಗ.

ಪೊಲೀಸರು ಮತ್ತೆ ಥಳಿಸತೊಡಗುತ್ತಾರೆ. ಅಷ್ಟರಲ್ಲಿ ಪರವ್ವ ಬಂದು ಇನ್ಸಪೆಕ್ಟರನ ಕಾಲಿಗೆ ಬೀಳುತ್ತಾಳೆ. ಆಕೆಯ ಕೈಯಲ್ಲೊಂದು ಬಿಳಿಯ ಕಾಗದವಿದೆ.

ಪರವ್ವ : ಯಪ್ಪಾ... ನೀನs ದೇವರು ಅಂತೀನಿ. ನನ್ನ ಮಗನ್ನ ಬಿಟ್ಟಿ ಬಿಡ್ರಿ.

ಇನ್ಸಪೆಕ್ಟರ್: ರಘಾಡಿಸಿ ಒದ್ದರs ಹಲ್ಲು ಬಿಜ್ಜಿ ಬಿದ್ದಾವು... ನಿನೌನ... ನಿನ್ನ ಮಗ್ಗ ಬುದ್ಧಿ ಹೇಳು. ನಾ ಹೇಳಿದಲ್ಲಿ ಬಟ್ಟ ಒತ್ತಲಿ.

ಪರವ್ವ : ಹಿರೇಗೌಡ ಬರಕೊಟ್ಟ ಕಾಗದ ಐತ್ರೋ ಯಪ್ಪಾ.

ಇನ್ಸಪೆಕ್ಟರ್: ಇಕಿಗೂ ನಾಕ ಹಾಕರೆಲೆ.

ಇಬ್ಬರೂ ಪೊಲೀಸರು ಪರವ್ವನ ಎರಡೂ ಬದಿಯ ರಟ್ಟೆಯೊಳಗೆ ಕೈ ಹಾಕಿ ಹಿಡಿದು ಎತ್ತಿ ಚೀಲ ಜಾಡಿಸುವಂತೆ ಝಾಡಿಸುತ್ತಾರೆ. ನಂತರ ಥಪ್ ಎಂದು ಒಗೆಯುತ್ತಾರೆ.

ಪರಿವ್ಯಾ : ಅಯ್ಯೋ... ಯಪ್ಪಾ... (**ಪೊಲೀಸರಿಗೆ**) ನಮ್ಮವ್ವ ಮುದಿಕಿ ಅದಾಳ. ಆಕಿಗೇನೂ ಮಾಡಬ್ಯಾಡ್ರಿ... ಬಿಟ್ಟಿ ಬಿಡ್ರಿ ಆಕಿನ್ನ... ನಿಮ್ಮ ಕಾಲ ಬೀಳತೀನಿ... ನಮ್ಮವ್ವಗ ಏನೂ ಮಾಡಬ್ಯಾಡ್ರೀ. (**ಪರವ್ವಳತ್ತ ಧಾವಿಸುವನು.**)

ಪೊಲೀಸರು ಆವನ ಕುತಗಿ ಹಿಡಿದು ಎಳೆದು ತರುತ್ತಾರೆ. ಒಬ್ಬ ಬಲವಂತವಾಗಿ ಆತನ ಎಡಗೈ ಹೆಬ್ಬಟ್ಟಿಗೆ ಶಾಯಿ ಹಾಕುತ್ತಾನೆ. ಇದೇ ಸಂದಿಗಾಗಿ ಕಾದಿದ್ದ ಕುಲಕರ್ಣಿ ಕೆಲವು ಕಾಗದ ಪತ್ರಗಳ ಮೇಲೆ ಬಟ್ಟು ಒತ್ತಿಸಿಕೊಳ್ಳುತ್ತಾನೆ.

ಭದ್ರಗೌಡ : ಕುಲಕರ್ಣ್ಯಾರ. ಆ ಕಾಗದ ಪತ್ರಾ ಜ್ವಾಕಿ. (**ಪರಿವ್ಯಾನನ್ನು ಒದೆಯುತ್ತ**) ಲೇ ನಿಮೌನ... ಇನ್ನ ಹೊಲದ ಕಡೆ ಹ್ವಾದಿ ಅಂದರs ನಿನ್ನ. ಮತ್ತ ನಿನ್ನ ಮಗನ್ನ ಇಬ್ಬರ್ನೂ ಜೇಲಿಗೆ ಹಾಕಸ್ತೀನಿ... ಖಬರ್‌ದಾರ್.

ಇನ್ಸಪೆಕ್ಟರ್: (**ಭದ್ರಗೌಡನನ್ನು ಒಂದು ಬದಿಗೆ ಕರೆತಂದು**) ಗೌಡರ. ನಾ ಹೇಳಿದ್ದು ನೆನಪದಲಾ. ಯಾಕಂದ್ರs ನಮ್ಮ ಮ್ಯಾಲಿನವರು ಖರೇ ನಮ್ಮ ಕೈಯೂ ಕಿಸೇನೂ ನೋಡತಿರತಾರ. ಇಲ್ಲಾಂತಂದರs ಏನ್ರೀ... ನೀವು ಗೌಡರು. ನಾವು ಕುಲಕರ್ಣ್ಯಾರು. ಒಬ್ಬರಿಗೊಬ್ಬರು ಆಗದಿದ್ರ ಹೆಂಗ್ರೀ ? ಒಂದ ಪೈಸೆ ಇಲ್ಲಧಂಗ

ಈ ಕೆಲಸಾ ಮಾಡಿಕೊಡತಿದ್ದ. ನಮಗೂ ಪ್ಯಾಲಿಸವರು ಇದ್ದಾರ ನೋಡ್ರಿ.

ನಾಳೆ ಅಲ್ಲೇ ಕುಲಗೋಡ ಠಾಣೆಕ್ಕ ಬರ್ರಿ.

ಪೊಲೀಸರಿಗೆ ಹೊರಡುವಂತೆ ಸನ್ನೆ ಮಾಡುತ್ತಾನೆ. ಮೊದಲು ಪೊಲೀಸರು, ನಂತರ ಕುಲಕರ್ಣಿ, ನಂತರ ಭದ್ರಗೌಡ ಹಾಗೂ ಅವನ ಪರಿವಾರ ಹೀಗೆ ಇಡೀ ಚಾವಡಿಯೇ ಖಾಲಿಯಾಗಿ ಕೊನೆಗೆ ಪರಿವ್ಯಾ ಮತ್ತು ಪರವ್ವ ಮಾತ್ರ ಉಳಿಯುತ್ತಾರೆ. ಸೋತು ಸುಣ್ಣವಾದ ಪರಿವ್ಯಾ ಅವ್ವನ ಹತ್ತಿರ ಬರುತ್ತಾನೆ. ಅವ್ವ ನರಳುತ್ತ ಬಿದ್ದುಕೊಂಡಿದ್ದಾಳೆ.

ಪರಿವ್ಯಾ : ಅಯ್ಯೋ... ಯವ್ವಾ... ಬೆಳ್ಳಕ್ಕಿ ಬಂದೈತಿ... ಅಯ್ಯೋ ಮಲ್ಲೀ... ಎಲ್ಲಿ ಅದೀಯ... ಈಟುದ್ದ ಜುಂಜು... ಹಿಡೀತೈತಿ ನನ್ನ... ಹಿಡೀತೈತಿ ನನ್ನ... ಅದರ ಕಾಲು ಕೆಸರಾಗದಾವು... ನಾ ತ್ರಿಳಿಸೀರಿನ್ಯಾಗ ತೇಲಾಕತ್ತೀನು... ಆದರೂ ಹಿಡೀತೈತಿ ನನ್ನ. ಅದರ ಜುಂಜು ಉದ್ದ ಭಾಳ ಅದಾವು... ಬೆಳ್ಳಕ್ಕಿ... ಒಂದಲ್ಲ. ಎರಡಲ್ಲ. ಮೂರಲ್ಲ. ನೂರಾರು ಅದಾವು... ಸಾವಿರಾರು ಅದಾವು... ದೊಡ್ಡ ಹಿಂಡS ಐತಿ... ಬೆಳ್ಳಕ್ಕಿ ಹಿಂಡ ಐತಿ... ನನ್ನ ಹೊಲಾ ಹೊತಗೊಂಡ ಹೊಂಟಾವ ಬರ್ರ್ಯೋ... ನನ್ನ ಭಾವಿ ಹೊತಗೊಂಡ ಹೊಂಟಾವ ಬರ್ರ್ಯೋ... **ಮೇಲೆ ಬೆಳ್ಳಕ್ಕಿಗಳು ತೇಲುತ್ತಿವೆ ಎಂದು ಭ್ರಮಿಸಿ, ಅತ್ತಲೇ ಕೈ ಮಾಡಿ ಅವುಗಳನ್ನು ಹಿಡಿಯಲು ಸಾಗುತ್ತ ಸಾಗುತ್ತ ಕಲ್ಲಡವಿ ಬೀಳುತ್ತಾನೆ.**

• • • ಮುಕ್ತಾಯ • • •

● ▼

ಶಿರೀಷ ಜೋಶಿ, ಶ್ರೀಕೃಪೆ. ಪ್ಲಾಟ್ ನಂ. ೪/೩೨೦. ನರಗುಂದಕರ ಕಾಲೋನಿ ಬಸ್ ನಿಲ್ದಾಣದ ಎದುರು. ರಾಣಿ ಚೆನ್ನಮ್ಮನಗರ. ೨ ನೇ ಹಂತ. ಬೆಳಗಾವಿ ✆ : ೦೮೩೧ - ೪೪೩೭೬೪

ರಾಘವೇಂದ್ರ ಪಾಟೀಲ, ಮಲ್ಲಾಡಿಹಳ್ಳಿ - ೫೭೭ ೫೩೧ ✆ : ೨೮೯೧ - ೪೯೫೦೦

▲ **ಕವಿತೆ - ೨**

ಪ್ರೀತಿ ಅಂದ್ರೆ

ಸಂತೇಬೆನ್ನೂರು ಫೈಜ್ನಟ್ರಾಜ್

ಪ್ರೀತಿ ಅಂದ್ರೆ
ಮಾತಲ್ಲ ಕಥೆಯಲ್ಲ   ಬರೀ ಮೌನ
ಹಾಡಲ್ಲ ರಾಗವಲ್ಲ   ಕೇವಲ ಕವನ

ವಯಸಿಲ್ಲ, ಸೊಗಸಿಲ್ಲ   ಹ್ಞು, ಕನಸು
ಕಾಮವಲ್ಲ, ಕರ್ಮವಲ್ಲ   ಬರೀ ಮನಸು

ಹೂವಲ್ಲ, ಮುಳ್ಳಲ್ಲ   ಬರೀ ಸ್ಪರ್ಶ
ಕತ್ತಲಿಲ್ಲ ಬೆಳಕಿಲ್ಲ   ಹೊನಲ ಹರ್ಷ

ನೋವಿಲ್ಲ ನಲಿವಿಲ್ಲ   ಬರೀ ಯಾನ
ಇತಿ ಇಲ್ಲ ಮಿತಿ ಇಲ್ಲ   ಭ್ರಮಾ ಪ್ರಯಾಣ !

● ▼

ಸಂತೇಬೆನ್ನೂರು ಫೈಜ್ನಟ್ರಾಜ್. ಸರ್ಕಾರಿ ಪ್ರೌಢಶಾಲೆ. ಕಣಿವೆ ಬಿಳಚಿ - ೫೭೭ ೨೩೧. ತಾ. ಚನ್ನಗಿರಿ

ಭರತೋದಯ*

ಎಚ್. ಎಂ. ನಾಗರಾಜರಾವ್ (ಶೃಂಗೇರಿ)

ವಸಂತ ಮಾಸದೊಳೊಂದು ದಿನ
ಶಕುಂತಲೆ ನಲಿಯುತಲಾ ಸುದಿನ
ಪ್ರಿಯಂವದಾದಿ ಸಖೀಜನ
ನೆರೆದಿರೆ ಹಾಡಿತು ಆಕೆ ಮನ ॥

ಶ್ರುತಿಯದಾಯಿತು ಕೋಗಿಲೆ ಕೂಜನ
ಗತಿಯದಾಯಿತು ನವಿಲಿನ ನರ್ತನ
ಮತಿಯ ಗತಿಯನುರೆ ಹಿಡಿದೆಳೆದಾಡಿತು
ಪ್ರೀತ ಹರಿಣಗಳ ಚೆಂಗನ ರಿಂಗಣ ॥

ಹರಿಣದ ಬೆಂಬತ್ತಿ ಬಳಲಿದ ರಾಜ
ದಾಹವ ನೀಗಿಸೆ ಬಂದಿರಲಾಗ
ಶಕುಂತಲೆಯನು ಕಂಡನು ಅಲ್ಲಿ
ಅಂಕುಶ ಕಳಚಿತು ಆ ಮನದಲ್ಲಿ ॥

ಕಂಡಳು ಬಾಲೆಯು ದುಷ್ಯಂತನನ್ನು
ಉಂಡಳು ಸುಮಶರದಾ ಸವಿಯನ್ನು
ನೋಟ ನೋಟಗಳು ಕೂಡಿ ಬೆಸೆದವು
ಪ್ರೇಮದಾಟಗಳು ತಾವ್ ಮೊದಲಾದವು ॥

ದುಂಬಿಯು ಎರಗಿರೆ ಅವಳಧರಕ್ಕೆ
ತುಂಬಿದ ಮಧುವಿನ ಹೂ ಬಟ್ಟಲಿಗೆ
ನಂಬಿರಿ ಅದುವೇ ಪ್ರೇಮ ಸಂಕೇತ
ಬಾಳನು ಬೆಳಗುವ ನಂದಾದೀಪ ॥

ಪರಿಚರ - ಸತ್ಕಾರ ಮುಗಿದಾನಂತರ
ಬರಿಯಿತು ಮನಸಿನ ಪ್ರೇಮದ ರಾಗ
ಅರಿತರು ಅವರವರೊಳಮನವನ್ನು
ಆದರು ಗಾಂಧರ್ವ ಕಲ್ಯಾಣವನ್ನು ॥

ಕಳೆದವು ದಿನಗಳು ಅರೆಕ್ಷಣದಂತೆ
ಬೆಳೆದವು ರಾಜಗೆ ಅರಮನೆ ಚಿಂತೆ
ಹೊಳೆಯುವ ಉಂಗುರ ಅವಳಿಗೆ ನೀಡಿ
ನಡೆದನು ಪುರದೆಡೆ, ಮೋಡಿಯ ಮಾಡಿ ॥

ಉರುಳದು ದಿನಗಳು ಅಗಲಿರಲಿನಿಯ
ನೆನೆಯುತ ನಾರಿಯು ಇನಿಯನ ಸನಿಹ
ಮರೆತಳು ಅರಿಯದೆ ನಿಜ ಈ ಭುವಿಯ
ಮನದಲಿ ಸ್ಮರಿಸುತ ನಲ್ಲನ ನಗೆಯ ॥

* ಇದು ಕಿರಿಯಮಕ್ಕಳ ಅಭಿನಯಕ್ಕಾಗಿ ರಚಿತವಾದ ಸರಳ ಗೀತರೂಪಕ. ಮಲೆನಾಡು ಭಾಗದಲ್ಲಿ ಹಲವು ಕಡೆ ಪ್ರದರ್ಶನಗೊಂಡಿದೆ. ದೇವೇಂದ್ರನಿಗೆ ಸಹಾಯಮಾಡಲು ದುಷ್ಯಂತ ಹೋಗಿಬಂದುದನ್ನು ಇಲ್ಲಿ ಉದ್ದೇಶಪೂರ್ವಕ ಬಿಡಲಾಗಿದೆ. ನುಡಿಯಿಂದ ನುಡಿಗೆ ದೃಶ್ಯಬದಲಾವಣೆ ಇದೆ. ಒಂದೊಂದುನುಡಿಗೂ ಒಂದೊಂದುರಾಗ ಹಾಕಿದರೆ ಚೆನ್ನ.

ಬಂದರು ದೂರ್ವಾಸ ಮುನಿಗಳು ಆಗ
ಸುಂದರ ವದನೆಯು ಮರೆತಿರಲೀ ಜಗ
ದೊರೆಯದೆ ಆತಿಥ್ಯ ನುಡಿದರು ಶಾಪ
'ಆ ದೊರೆ ಮರೆಯಲಿ ನಿನ್ನಯ ರೂಪ' ॥

ಬೆದರಿದ ಸಖಿಯರು ಪಿಡಿದಿರೆ ಪಾದ
ಸದರವಾಯಿತು ವರಮುನಿ ಕೋಪ
ಉಂಗುರ ಕಾಣಲು ಶಾಪ ವಿನಾಶ
ಎನ್ನುತ ಹೊರಟರು ತಾಪಸರೀಶ ॥

ಬರುತಿರೆ ಕಣ್ವರು ಆಶ್ರಮದೆಡೆಗೆ
ಅರಿತರು ತನುಜೆಯ ಹಿಂದಿನ ನಡಿಗೆ
ನಸುನಗೆ ತೋರುತ ಹರಸಿದರಂದು
ಹಸನಾಗಿಹ ಸುತೆ ಬಾಳನು ಕಂಡು ॥

ತುಂಬಲು ತನುವದು ತನುಜೆಗೆ, ತೆರಳಲು
ಅನುಮತಿ ಇತ್ತರು ಅರಮನೆ ಸೇರಲು
ಹಿರಿಯರ ಸಂಗವು ಜೊತೆ ತಾ ಬರಲು
ಪೊರಟಳು ಹಸ್ತಿನಾಪುರವನು ಸೇರಲು ॥

ಕಾಡಿತು ಕಣ್ವಗೆ ಪುತ್ರಿಯ ಪ್ರೇಮ
ಪಾಡಿತು ಸಖೀಜನ ಮಿತ್ರೆಯ ನಾಮ
ಬಾಡಿತು ಕುಲವಧು ಇಲ್ಲದ ಆಶ್ರಮ
ನೊಂದಿತು ಪಶುಕುಲ ಕಾಣದ 'ಅಮ್ಮ' ॥

ಹೊಳೆಯನು ದಾಟಲು ಕುಳಿತಳು ನಾರಿ
ಬಳಿ ಸಾರಿದ ಕಿರು ದೋಣಿಯ ಸೇರಿ
ಬೆರಳಾಡಿಸುತಿರೆ ನೀರಲಿ ನಾರಿ
ಉರುಳಿತು ಉಂಗುರ ನೀರಿಗೆ ಜಾರಿ ॥

ಉರುಳಿದ ಉಂಗುರ ಮೀನನು ಸೇರಲು
ಮರುಕ್ಷಣ ರಾಜಗೆ ಮರೆಯಿತು ನೆನಪು
ಅರಿಯದ ಮುಗುದೆಯು ಶಕುಂತಲೆಯು
ಅರಳಿದ ಕನಸನು ತಾನಾಂತಿಹಳು ॥

ಅರಮನೆ ಸೇರಿ ನುಡಿದರು ಅಲ್ಲಿ
ಮರೆತಿಹ ರಾಜನ ಸಮ್ಮುಖದಲ್ಲಿ
ಬಾರದು ಆತಗೆ ವರಿಸಿದ ನೆನಪು
ಪರಸತಿ ಎಂದು ತಿಳಿಯಿತು ಮನಸು ॥

ಪರಿಪರಿ ಯಾಚನೆ ಮುಗಿದಾನಂತರ
ತೋರಿಸ ಹೊರಟಳು ಪ್ರೇಮದ ಉಂಗುರ
ಉಂಗುರ ಕಾಣದೆ ಬೆದರಿರೆ ನಾರಿ
ಸಂಗವು ಜರಿಯಿತು ನಾರಿಯ ದೂರಿ

ವರಿಸಿದ ಪತಿಯು ತೆರಳಿರೆ ಮುಂದಕೆ
ಪೊರೆದಿಹ ಜೊತೆಯು ತೆರಳಿರೆ ಹಿಂದಕೆ

ಮೊರೆಯನು ಕೇಳಿ ಧರೆಗಿಳಿದೀಚೆ
ಕರೆದಳು ಮಗಳನು ಆ ಸಿರಿಮಾತೆ ॥
ಮೇನಕೆ ಮಾರೀಚಾಶ್ರಮ ಸೇರಿ
ಜ್ಞಾನದ ಋಷಿಗಾ ವಿಷಯವ ಸಾರಿ
ಮನುಜೆಗೆ ಅಲ್ಲಿರಲನುಮತಿ ಕೋರಿ
ಅನುಗ್ರಹವಾಗಿರೆ ಪೊರಟಳು ತಾಯಿ ॥
ಫಲಿಸಿತು ಪ್ರೇಮದ ಸಂಗಮವಲ್ಲಿ
ಜನಿಸಿದ ಬಾಲಕ ಆಶ್ರಮದಲ್ಲಿ
ಉದಿಸಿದ ರವಿಯ ಹೊಂಬಣ್ಣದಲ್ಲಿ
ನಲಿಯುತ ಬೆಳೆದನು ಪ್ರತಿಫಳಿಗೆಯಲಿ ॥
ಮೀನಲಿ ಉಂಗುರ ಕಂಡಾ ಬೆಸ್ತ
ಮಾರಲು ಅವನು ಮಾಡಿದ ಚಿತ್ತ
ರಾಜಮುದ್ರೆಯು ಅದರಲಿ ಕಾಣಲು
ಅರಮನೆಗೆಳೆದರು ಅವನನು ಭಟರು ॥
ಉಂಗುರ ನೋಡಿದ ಮರುಕ್ಷಣದಲ್ಲಿ
ಢಂಗುರ ಸಾರಿತು ಒಳಮನದಲ್ಲಿ
ಮುನಿಸುತೆ ವರಿಸಿದ ನೆನಪದು ಕಾಡಿ
ಜನಪತಿ ಮರುಗಿದ ನಿಜ ಸತಿಗಾಗಿ ॥
ಬರುತಿರೆ ರಾಜನು ವನಪಥದಲ್ಲಿ
ಬೆರಗಾದನು ತಾ ಮನಮತಿಯಲ್ಲಿ
ಸಿಂಹದಿ ಸೆಣಸುವ ಬಾಲಕನನ್ನು
ಕಂಡು ಕರೆದನು ಆ ಮಗುವನ್ನು ॥
ಮಗುವನು ಅರಸುತ ಬಂದ ಶಕುಂತಲೆ
ಕಂದನ ನಗುವನು ಕಾಣಲು ಕೂಡಲೆ
ಪರಮಾನಂದವ ಪಡೆದಳು ಅಲ್ಲಿ
ವರಪತಿ ನಿಂತಿರೆ ತನ್ನೆದುರಲ್ಲಿ ॥
ರಾಜನು ಬೇಡಲು ಕ್ಷಮೆಯನು ಅಂದು
ರಾಣಿಯು ನುಡಿದಳು 'ಮರೆತೆನು ಎಂದೋ'
ರಾಜರಾಣಿ ಯುವರಾಜ ಸಮಾಗಮ
ರಾಜಿಪ ಲೋಕಕೆ ಭಾರತದಾಗಮ ॥
ಮುನಿಗಳ ಆಶೀರ್ವಾದವ ಪಡೆದು
ಸ್ಮರಿಸುತ ಕಳೆದಿಹ ದಿನಗಳ ಕುರಿತು
ಮಂಗಳ ಮಹಿಮನ ಮನದಲಿ ನೆನೆದರು
ಸುಂದರ ನಾಡಿನ ಬುನಾದಿಯಾದರು ॥

ಎಚ್. ಎಂ. ನಾಗರಾಜರಾವ್ (ಶೃಂಗೇರಿ), ಉಪನ್ಯಾಸಕ. ಚೌಳಹಿರಿಯೂರು - ೫೭೭ ೧೮೦
ಜಿ. : ಚಿಕ್ಕಮಗಳೂರು

ಭಾರತೀಯ ಸಂಸ್ಕೃತಿ

ಮನು ಬಳಿಗಾರ್

'ಸಂಸ್ಕೃತಿ' ಎಂಬ ಪದವು ಕಳೆದೆರಡು ಶತಮಾನಗಳಿಂದ ಬಹಳ ಪ್ರಚಲಿತವಲ್ಲಿದೆ. ಆ ಮೊದಲು 'ಸಂಸ್ಕೃತಿ' ಶಬ್ದವಿರಲೇ ಇಲ್ಲ ಎಂದಲ್ಲದಿದ್ದರೂ. ಈಗಿನ ಅರ್ಥದಲ್ಲಿ ಅದರ ಬಳಕೆಯಾಗಿರುತ್ತಿರಲಿಲ್ಲವೆಂದು ಹೇಳಬಹುದು. ಅದಕ್ಕೆ ಪರ್ಯಾಯವಾಗಿ ಆ ಪೂರ್ವದಲ್ಲಿ ಸಂಸ್ಕಾರ ಪದ ಚಲಾವಣೆಯಲ್ಲಿದ್ದುದು ಕಂಡುಬರುತ್ತದೆ. ಇಂಗ್ಲಿಷ್ ಮೂಲದ 'culture' (ಕಲ್ಚರ್) ಎಂಬುದಕ್ಕೆ ಸರಿಸಮಾನವಾಗಿ ಇಂದಿನ 'ಸಂಸ್ಕೃತಿ' ಪದ ಭಾರತೀಯ ಸಂದರ್ಭದಲ್ಲಿ ಉಪಯೋಗಿಸಲ್ಪಡುತ್ತಿರುವುದು ಹತ್ತೊಂಬತ್ತನೇ ಶತಮಾನದಿಂದಲೆನ್ನಬಹುದು. ಪಾಶ್ಚಾತ್ಯರಲ್ಲಿ 'ಕಲ್ಚರ್' ಪದದ ಬಳಕೆ ಅತಿಯಾದಂತೆಲ್ಲ ವಿಶ್ವದ ಇನ್ನಿತರೆಡೆಗಳಲ್ಲೂ ಇದಕ್ಕೆ ಎಲ್ಲಿಲ್ಲದ ಮಹತ್ವ ಬರತೊಡಗಿತು.

ಒಂದು ದೃಷ್ಟಿಯಲ್ಲಿ ಈ 'ಸಂಸ್ಕೃತಿ' ಪದದ ಅರ್ಥವಿವರಣೆ ನೀಡುವುದು ತುಂಬ ಪ್ರಯಾಸಕರ ಕೆಲಸ. ಜಗತ್ತಿನ ಬಹುತೇಕ ಎಲ್ಲ ಕಡೆ. ಎಲ್ಲ ಭಾಷೆಗಳಲ್ಲಿ ಕೂಡ ಈ ಬಗ್ಗೆ ತೀವ್ರ ಜಿಜ್ಞಾಸೆ ನಡೆದಿದ್ದಾಗ್ಯೂ. ಸಂಸ್ಕೃತಿಯ ಅರ್ಥವಿವರಣೆ ಕೆಲ ಸಾರೆ ವಿಪರೀತಕ್ಕಿಟ್ಟುಕೊಂಡು ಅಪಾರ್ಥಗಳನ್ನೂ ಹುಟ್ಟುಹಾಕಿದೆ. ಆದ್ದರಿಂದ ಈ ಶಬ್ದದ ಬಗ್ಗೆ ಸ್ಪಷ್ಟ ತಿಳಿವಳಿಕೆ ಅವಶ್ಯವಾಗಿದೆ. ಹಲವಾರು ವಿದ್ವಾಂಸರು ಈ ಬಗ್ಗೆ ತಮ್ಮದೇ ಆದ ವ್ಯಾಖ್ಯಾನಗಳನ್ನು ನೀಡಿದ್ದಾರೆ. ಈ ಹಿನ್ನೆಲೆಯಲ್ಲಿ ಒಂದು ಸಾಮಾನ್ಯವಾದ ವಿವರಣೆ ಹೊರಹೊಮ್ಮಬಹುದಾಗಿದೆಯಾದರೂ ನಿರ್ದಿಷ್ಟವಾಗಿ ಇದೇ ಸಂಸ್ಕೃತಿಯ ವ್ಯಾಖ್ಯಾನ ಎಂದು ಹೇಳುವುದು ಕಷ್ಟಸಾಧ್ಯವಾದದ್ದು. ಅನೇಕ ವಿಚಾರವಾದಿಗಳೂ. ಅಲ್ಲದೇ ಸಂಯುಕ್ತ ರಾಷ್ಟ್ರಸಂಘ (ಯು.ಎನ್.ಓ.). ಭಾರತೀಯ ಸಾಂಸ್ಕೃತಿಕ ಸ್ವಾತಂತ್ರ್ಯ ಸಂಸ್ಥೆ (ಇಂಡಿಯನ್ ಕಾಂಗ್ರೆಸ್ ಫಾರ್ ಕಲ್ಚರಲ್ ಫ್ರೀಡಂ) ಗಳಂತಹ ರಾಷ್ಟ್ರೀಯ. ಅಂತರ್‌ರಾಷ್ಟ್ರೀಯ ಸಂಘಟನೆಗಳು ಈ ಬಗ್ಗೆ ಕಾರ್ಯತತ್ಪರವಾಗಿದ್ದರೂ. ಇದನ್ನು ವ್ಯಾಖ್ಯಾನಿಸುವ ದಿಸೆಯಲ್ಲಿ ಒಮ್ಮತ ಸಾಧಿಸಲಾಗಿಲ್ಲವೆನ್ನಬಹುದು. ಸಂಸ್ಕೃತಿ ಪದದ ಅರ್ಥವ್ಯಾಪ್ತಿ ತುಂಬ ಆಳ ಹಾಗೂ ವಿಸ್ತಾರವಾದದ್ದಾದ್ದರಿಂದ ಒಂದು ವಾಕ್ಯದಲ್ಲೊ. ಮಾತಿನಲ್ಲೊ ಅದರ ವಿವರಣೆ ಅಸಾಧ್ಯ. ಈ ಎಲ್ಲವುಗಳನ್ನು ನೇಪಥ್ಯದಲ್ಲಿರಿಸಿಕೊಂಡು ಇಲ್ಲಿ 'ಸಂಸ್ಕೃತಿ'ಯನ್ನು ವ್ಯಾಖ್ಯಾನಿಸಲು ಯತ್ನಿಸಲಾಗಿದೆ.

'ಸಂಸ್ಕೃತಿ' ಪದವು ಇಂಗ್ಲಿಷ್ ಕಲ್ಚರ್ (culture) ಶಬ್ದದಿಂದ ಬಂದುದಾಗಿದ್ದರೆ ಆ 'ಕಲ್ಚರ್' (culture) ಎಂಬುದು ಮೂಲ ಲ್ಯಾಟಿನ್ ಪದ ಕಲ್ಟ್ (cult) ಅಥವಾ ಕಲ್ಟಸ್ (cultus) ಎಂಬುದರಿಂದ ಉದ್ಭವವಾಗಿದೆ. ಲ್ಯಾಟಿನ್‌ನಲ್ಲಿ ಈ ಪದಕ್ಕೆ ಗೌರವಿಸು. ಸೇವಿಸು. ನಿಷ್ಠೆ ಮಾಡು. ಲಕ್ಷ್ಯದಲ್ಲಿರಿಸಿಕೊ. ಟಿಲೇಜ್ (tillage). ಕಲ್ಟಿವೇಶನ್ (cultivation). ರಿಫೈನ್‌ಮೆಂಟ್ (refinement) ಎಂಬ ಕೃಷಿ. ವ್ಯವಸಾಯ. ಸಂಸ್ಕಾರ. ಸಂಸ್ಕೃತಿ. ಬೆಳೆ – ಈ ಅರ್ಥಗಳನ್ನು ನೀಡಲಾಗಿದೆ. ಅಂದರೆ ಪ್ರಾರಂಭದಲ್ಲಿ ಇದು ವ್ಯವಸಾಯ ಮಾಡು. ಹದ ಮಾಡು. ಸುಧಾರಣೆ ಮಾಡು ಎಂಬ ಭೂಸಂಬಂಧೀ ಕ್ರಿಯೆಗಳ ಸೂಚಕವಾಗಿ ಬಂದಿತೆನ್ನಬಹುದು. ಭಾರತೀಯ ಸಂದರ್ಭದಲ್ಲಿ ಪುರಾತನ ಗ್ರಂಥಗಳಲ್ಲೆಲ್ಲೂ ಈ ಸಂಸ್ಕೃತಿ ಶಬ್ದದ ಪ್ರಸ್ತುತ ಅರ್ಥದ ಉಪಯೋಗವಾದದ್ದಿಲ್ಲ. ಆದಾಗ್ಯೂ ಈ ಹಿಂದೆಯೇ ಹೇಳಿದಂತೆ ಇದಕ್ಕೆ ತತ್ಸಮಾನವಾದ ಸಂಸ್ಕಾರ ಪದದ ಪುಷ್ಕಳ ಬಳಕೆಯಾದದ್ದಿದೆ. ಬುದ್ಧಿ ಸಂಸ್ಕಾರ. ಮನೆತನದ ಸಂಸ್ಕಾರ. ಷೋಡಶ ಸಂಸ್ಕಾರ

ಇಂತಹ ಪದಗಳು ಯಥೇಚ್ಛವಾಗಿವೆ. ಪ್ರಾರಂಭದಲ್ಲಿ ಜಮೀನಿಗೆ. ಬೆಳೆಗಳಿಗೆ. ಕೃಷಿ ವಿಚಾರಕ್ಕೆ ಸಂಬಂಧಿಸಿದ್ದ ಕಲ್ಚರ್ ಪದವು ಕಾಲಾಂತರದಲ್ಲಿ ಮಾನವನ ಆಚಾರ. ವಿಚಾರ. ನಡೆನುಡಿಗಳಲ್ಲಿಯ ಸುಧಾರಣೆ. ಹಿರಿಮೆ ಗರಿಮೆಗಳಿಗೆ ಅನ್ವಯವಾಗಿ. ಯೋಗ್ಯ ಹಾಗೂ ಒಳ್ಳೆಯ ಮನುಷ್ಯನನ್ನು ಕಲ್ಚರ್ಡ್ ಅಥವಾ ಸಂಸ್ಕೃತ ಎಂದು ಕರೆಯುವ ಮಟ್ಟ ತಲುಪಿತು. ಅಂತೆಯೇ ಒಳ್ಳೆಯ ಸಂಸ್ಕಾರವಂತ ವ್ಯಕ್ತಿಯೆಂದರೆ ಸುಸಂಸ್ಕೃತ ಎಂದಾಯಿತು. ಸಂಸ್ಕಾರ ಅಥವಾ ಸಂಸ್ಕರಣ - ಸಮ್ಯಕ್ ಕರಣ - ಸಮ್ಯಕ್ ಕೃತಿ - ಸಂಸ್ಕೃತಿ ಹೀಗೆ ಒಳ್ಳೆಯದನ್ನಾಗಿ ಮಾಡುವುದು. ಶುದ್ಧಿ ಮಾಡಿ ಉತ್ತಮ ಪಡಿಸುವುದು ಎಂದರ್ಥ ಬಂತು. ಮನುಷ್ಯ ತನ್ನ ವ್ಯಕ್ತಿತ್ವದ ಉನ್ನತಿಗಾಗಿ. ಉತ್ಕೃಷ್ಟತೆಯ ಪರಿಗ್ರಹಣಕ್ಕಾಗಿ ಮಾಡುವ ಎಲ್ಲ ಪ್ರಯತ್ನಗಳಲ್ಲಿ ಹಾಗೂ ಆ ಮೂಲಕ ವ್ಯಕ್ತವಾಗುವ ಆತನ ನಡತೆಗಳಲ್ಲಿ ಅವನ ಸಂಸ್ಕೃತಿ ಅಡಕಗೊಂಡಿದೆ ಎಂದೆನ್ನಬಹುದು. ಇದನ್ನೇ ಕುವೆಂಪುರವರು. " .....ಮನುಷ್ಯ ಚೇತನದ ಸರ್ವತೋಮುಖವೂ ವಿಕಾಸಮಾನವೂ ಆದ ಆತ್ಮಶ್ರೀಯನ್ನು ಸಂಸ್ಕೃತಿ ಎಂದು ಸಂಕೇತಿಸಬಹುದು..... ಅಸಂಖ್ಯ ಮನಸ್ಸುಗಳ ಸಮಷ್ಟಿಯಲ್ಲಿ ಸಂಭವಿಸಿ. ಪ್ರಕಟವಾಗಿ ಸಿದ್ಧವಾಗುವ ಒಂದು ದೇಶದ ಸಮಷ್ಟಿ ಮನಸ್ಸಿನ ಚಿತ್‌ಶಕ್ತಿಯ ರಸಗಂಗೆಯೆ ಆ ದೇಶದ ಸಂಸ್ಕೃತಿ..... " ಎಂದು ವ್ಯಕ್ತಿ ಹಾಗೂ ದೇಶದ ಸಂಸ್ಕೃತಿಗಳನ್ನು ವ್ಯಾಖ್ಯಾನಿಸಿದ್ದಾರೆ. ಡಿ.ವಿ.ಜಿ.ಯವರು "ಸಂಸ್ಕೃತಿ ಎಂದರೆ ಆತ್ಮಶಿಕ್ಷಣ - ವಿಶ್ವಪ್ರಯುಕ್ತವಾದ ಆತ್ಮಶಿಕ್ಷಣ. ಸಂಸ್ಕೃತಿಯು ಸಂಪೂರ್ಣದಶೆಗೆ ಬಂದಾಗ ಮನುಷ್ಯನು ವಿಶ್ವವಿಶಾಲ ಜೀವಿಯಾಗುತ್ತಾನೆ. ಆಗ ಕಾಲ. ದೇಶ ಪರಿಮಿತಿಗಳು ಅವನನ್ನು ಹಿಡಿಯವು..... " ಎಂಬುದನ್ನು ಈ ಕೆಳಗಿನ ಪದ್ಯದಲ್ಲಿ ವಿಶದಪಡಿಸಿದ್ದಾರೆ :

ಕಲಿತಂ ಕಲ್ತರೊಳಜ್ಞರೊಳ್ ತಿಳಿಯದಂ ವಾಕ್ಯಜ್ಞರೊಳ್ ವಾಗ್ಮಿ ಮ-।
ತ್ತೆಳೆಯಂ ತಾನೆಳೆಯರ್ಕಳೊಳ್ ಬಡವರೊಳ್ ದೀನಂ ಸಖಂ ಸಖ್ಯರೊಳ್ ॥
ನಲಿವಂ ಭೋಗದೆ ಭೋಗಿವೃಂದದಿ ವಿರಾಗಂ ರಾಗ ನಿರ್ಮುಕ್ತರೊಳ್ ।
ಸುಲಭಂ ಸಂಸ್ಕೃತನೆಲ್ಲರೊಳ್ ಸಮರಸಂ ವಿಶ್ವಾತ್ಮ ಸಜ್ಞಾಪನಂ ॥

ಈ ಪ್ರಪಂಚದಲ್ಲಿ ಅವನು ಎಲ್ಲಿದ್ದರೂ ಅಲ್ಲಿ ವಿದೇಶೀಯನಂತಾಗದೇ ಹೊಂದಿಕೊಳ್ಳುತ್ತಾನೆ. ತಾನು ಅಲ್ಲಿಯವನೇ ಎಂಬಂತೆ ನಡೆದುಕೊಳ್ಳುತ್ತಾನೆ ಎಂದು ಸಂಸ್ಕೃತನನ್ನು ವಿವರಿಸಿದ್ದಾರೆ. ಹಾಗಿದ್ದಲ್ಲಿ ಸಂಸ್ಕೃತನೆಂದರೆ ವಿದ್ಯಾವಂತನೇ. ಜ್ಞಾನಿಯೇ. ಸಂಗೀತ ಕಲೆ ಇತ್ಯಾದಿಗಳ ಮೆಚ್ಚುವ ರಸಿಕನೇ. ಉತ್ತಮ ವಾಗ್ಮಿಯೇ. ಹಿತಮಿತಭಾಷಿಯೇ. ಎಲ್ಲರೊಳಗೊಂದಾಗು ಮಂಕುತಿಮ್ಮ ಎಂದು ಡಿವಿಜಿ ಅಂದಂತೆ ಸರ್ವರೊಳು ಸಾಮರಸ್ಯದಿಂದಿರುವವನೇ ? ಹೌದು. ಇಂತಹ ಪ್ರಶ್ನೆಗಳು ಸಹಜ. ಆದರೆ ಸುಸಂಸ್ಕೃತನನ್ನು ಈ ವಿವಿಧ ಗುಣಗಳಲ್ಲಿ ಯಾವುದೊಂದಕ್ಕೇ ಸೀಮಿತಗೊಳಿಸುವುದು ಅಸಮಂಜಸ. ಆತ ಇವೆಲ್ಲವುಗಳು ಸಮ್ಮಿಳಿತಗೊಂಡ ಪರಿಪಾಕವೆನ್ನಬಹುದು. ಇದನ್ನೇ ಈ ಮೇಲಿನ ಪದ್ಯದಲ್ಲಿ ಸೂಚ್ಯವಾಗಿ ಬಿಂಬಿಸಲಾಗಿದೆ. ಕಾಡು ಬೆಟ್ಟಗಳಲ್ಲಿಯ ಪಲವು ಹದಿನಾರು ಮೂಲಿಕೆಗಳ ಸಾರವನ್ನು ವೈದ್ಯನು ಪುಟಪಾಕದಲ್ಲಿರಿಸಿ ಒಂದೇ ಹೊಸ ಸಂಜೀವಿನಿ ರಸವನ್ನಾಗಿಸುವಂತೆಯೆ ಸಂಸ್ಕೃತಿ ಎಂಬುದೂ ಸಂಗೀತ ಸಾಹಿತ್ಯಾದಿ ನಾನಾ ಕಲಾನುಭವಗಳ ಮತ್ತು ನಾನಾ ಶಾಸ್ತ್ರಶಿಕ್ಷಣಗಳ ಫಲಿತಾಂಶಗಳ ಸಾರಸಮ್ಮೇಳನ. ಅದರಲ್ಲಿ ವಿಜ್ಞಾನವೂ ಉಂಟು ವಿವೇಕವೂ ಉಂಟು. ಔದಾರ್ಯವೂ ಉಂಟು ದಾರ್ಢ್ಯವೂ ಉಂಟು. ಬಿಗಿಯೂ ಉಂಟು ಸಡಿಲವೂ ಉಂಟು.[೧] ಮ್ಯಾತ್ಯು ಅರ್ನಾಲ್ಡ್‌ನ ಮಾತನ್ನು ಹೀಗೆ ವಿವರಿಸುತ್ತ ಡಿ.ವಿ.ಜಿ. ಎರಡು ದೃಷ್ಟಾಂತಗಳನ್ನು ಕೊಡುತ್ತಾರೆ.

ಮೊದಲನೆಯದು - ಭವಭೂತಿಯ,

ವಜ್ರಾದಪಿ ಕಠೋರಾಣಿ ಮೃದೂನಿ ಕುಸುಮಾದಪಿ ।
ಲೋಕೋತ್ತರಾಣಾಂ ಚೇತಾಂಸಿ ಕೋ ಹಿ ವಿಜ್ಞಾತುಮರ್ಹತಿ ॥

(ಅಸಾಧಾರಣರಾದವರ ಹೃದಯವನ್ನು ಹೇಗೆ ತಾನೆ ಕಂಡುಕೊಳ್ಳಲಾದೀತು ? ಅದು ವಜ್ರಕ್ಕಿಂತಲೂ ಕಠಿಣವಾಗಿರುವುದುಂಟು. ಹುವ್ವಿಗಿಂತ ಮೃದುವಾಗಿರುವುದುಂಟು)

ಎರಡನೆಯದು - ವಾಲ್ಮೀಕಿಯ.

ವಿಷ್ಣುನಾ ಸದೃಶೋ ವೀರ್ಯೇ ಸೋಮವತ್ ಪ್ರಿಯದರ್ಶನಃ ।
ಕಾಲಾಗ್ನಿ ಸದೃಶಃ ಕ್ರೋಧೇ ಕ್ಷಮಯಾ ಪೃಥವೀ ಸಮಃ ॥

(ಶ್ರೀರಾಮನು ಪರಾಕ್ರಮದಲ್ಲಿ ವಿಷ್ಣುವಿನಂಥವನು. ಆದರೂ ನೋಟಕ್ಕೆ ಚಂದ್ರನಂತೆ. ಕೋಪಗೊಂಡಾಗ ಆತ ಪ್ರಳಯಾಗ್ನಿ. ಆದರೆ ಕ್ಷಮಿಸುವುದರಲ್ಲಿ ಭೂಮಾತೆಯಂತಹವನು).

ಸಂಸ್ಕೃತಿಯ ಬಗ್ಗೆ ಆಳ ಅಧ್ಯಯನ ಮಾಡಿದ ಪ್ರಥಮರಲ್ಲಿ ಅರ್ನಾಲ್ಡ್ ಪ್ರಮುಖನಾಗಿದ್ದಾನೆ. ೧೮೬೯ ರಲ್ಲಿಯೇ ಈತ ತನ್ನ 'ಕಲ್ಚರ್ ಆ್ಯಂಡ್ ಅನಾರ್ಕಿ' – ಸಂಸ್ಕೃತಿ ಮತ್ತು ಅರಾಜಕತೆ ಎಂಬ ಪ್ರಬಂಧದಲ್ಲಿ ಸಂಸ್ಕೃತಿಯ ಬಗ್ಗೆ ತೀವ್ರ ಜಿಜ್ಞಾಸೆ ನಡೆಸಿ ತನ್ನದೇ ಆದ ವ್ಯಾಖ್ಯಾನವನ್ನೂ ಮಾಡಿದ್ದಾನೆ. ಅವನ ಪ್ರಕಾರ "....ಮನುಷ್ಯ ಸ್ವಭಾವಕ್ಕೆ ಸೌಂದರ್ಯವನ್ನೂ ಬೆಲೆಯನ್ನೂ ಕೊಡುವ ಎಲ್ಲ ಶಕ್ತಿಗಳ ಸುಸಂಗತ ವಿಕಾಸವೇ ಸಂಸ್ಕೃತಿ..... ಸಂಸ್ಕೃತಿಯೆಂದರೆ ಸುಗುಣ ಸಾಮರಸ್ಯ. ಸಮರಸ ಸಂಪೂರ್ಣತೆಯಲ್ಲಿ ಎರಡು ಅತೀ ಶ್ರೇಷ್ಠ ಗುಣಗಳು ಸಮ್ಮಿಳಿತವಾಗಿರುತ್ತವೆ. ಅವು ಮಾಧುರ್ಯ ಮತ್ತು ಕಾಂತಿ (ಸ್ವೀಟ್‌ನೆಸ್ ಆ್ಯಂಡ್ ಲೈಟ್)..... ಸಂಸ್ಕೃತಿ ಎಂಬುದು ಕಾವ್ಯಕ್ಕೆ ಸಮಾನವಾದುದು. ಅದು ಕಾವ್ಯ ಅನುಸರಿಸುವ ಧರ್ಮವನ್ನು ಅನುಸರಿಸತಕ್ಕದ್ದು. ಒಂದು ಸುಂದರ ಜೀವನದ ಭಾವನೆ ಮತ್ತು ಅದಕ್ಕನುಸಾರವಾಗಿ ಮನುಷ್ಯ ಸ್ವಭಾವದ ಸರ್ವತೋಮುಖ ಗುಣಸಂಪಾದನೆ –ಇದು ಕಾವ್ಯದ ಪ್ರಧಾನ ತತ್ವ. ಸಂಸ್ಕೃತಿಯದೂ ಅದೇ."

ತನ್ನ ಸಮಾಜ ವಿಜ್ಞಾನಗಳ ವಿಶ್ವಕೋಶ (ಎನ್‌ಸೈಕ್ಲೊಪೆಡಿಯಾ ಆಫ್ ಸೋಶಿಯಲ್ ಸೈನ್ಸಸ್) ದಲ್ಲಿ ಮಾಲಿನೋವ್‌ಸ್ಕಿಯು. ಸಂಸ್ಕೃತಿಯು ಪರಂಪರಾಗತವಾದ ವಿಚಾರ. ಮೌಲ್ಯ. ರೀತಿ ನೀತಿ. ತಾಂತ್ರಿಕ ಆಯಾಮ. ಪರಿಕರ ಪದಾರ್ಥ ಇತ್ಯಾದಿಗಳನ್ನು ಹೊಂದಿರುತ್ತದೆನ್ನುತ್ತಾನೆ. ಅಂದರೆ ಸಂಸ್ಕೃತಿಯು ಭೌತಿಕ ವಸ್ತುಗಳಂತೆಯೇ ಬೌದ್ಧಿಕ ಜ್ಞಾನ ಹಾಗೂ ನೈತಿಕ. ಆರ್ಥಿಕ ಹಾಗೂ ಆಧ್ಯಾತ್ಮಿಕ ಮೌಲ್ಯಗಳನ್ನೂ ಒಳಗೊಳ್ಳುತ್ತದೆ ಎಂದರ್ಥವಾಗುತ್ತದೆ. ಇಂತಹ ಹಲವಾರು ಆಯಾಮಗಳನ್ನು ಹೊಂದಿರುವ ಸಂಸ್ಕೃತಿ ಸದಾ ಕ್ರಿಯಾಶೀಲವಾಗಿರುತ್ತದೆ. ಅದು ಮಲೆತು ನಿಂತ ನೀರಿನಂತೆ ನಿಶ್ಚಲವಾಗಿರುವುದು ಅಸಾಧ್ಯವಾದದ್ದು. ತನ್ನ ಬೆಳವಣಿಗೆಯ ಉದ್ದಕ್ಕೂ ಕಾಲಘಟ್ಟದ ವಿವಿಧ ಹಂತಗಳಲ್ಲಿ ಅದು ಆಯಾ ಕಾಲಮಾನದ ಅತ್ಯುತ್ತಮ ಅಂಶಗಳನ್ನು ಹೀರಿಕೊಳ್ಳುತ್ತ ಸಮೃದ್ಧವಾಗುತ್ತ ಮುನ್ನಡೆಯುತ್ತದೆ. ಹೀಗೆ ಬೆಳೆದು ಬರುವ ಸಂಸ್ಕೃತಿ ವ್ಯಕ್ತಿಭೂಯಿಷ್ಠ ಹಾಗೂ ಸಮಾಜಭೂಯಿಷ್ಠ ಎರಡೂ ತೆರನದ್ದಾಗಿರುತ್ತದೆ. ವ್ಯಕ್ತಿ ತನ್ನ ವ್ಯಕ್ತಿತ್ವದ ವಿಕಾಸಕ್ಕಾಗಿ ಮಾಡುವ ಪ್ರಯತ್ನ. ಶ್ರಮ. ಅನ್ವೇಷಣೆ. ಆತನ ಉತ್ಕೃಷ್ಟತೆಯ ದಾಹ ಮೊದಲನೆಯದರ ಮುಖ್ಯ ಲಕ್ಷಣವಾದರೆ ಒಂದು ನಿರ್ದಿಷ್ಟವಾದ ಸಮುದಾಯ ಸಂಸ್ಕೃತಿಯು ಆ ಸಮಾಜದ ಎಲ್ಲ ವ್ಯಕ್ತಿಗಳ ಪರಸ್ಪರ ಸಂಬಂಧ ಹಾಗೂ ಆಂತರಿಕ ಹೊಂದಾಣಿಕೆಯ ಪರಿಣಾಮವಾಗಿ ಪ್ರಕಟಗೊಳ್ಳುತ್ತದೆ. ಅದಕ್ಕಾಗಿಯೇ ಡಾ. ಎಂ. ಎಂ. ಕಲಬುರ್ಗಿಯವರು. "ಸಂಸ್ಕೃತಿ ಎನ್ನುವುದು ಸಮೂಹಸಮ್ಮತ ಜೀವನ ಪದ್ಧತಿಯಾಗಿದೆ" ಎನ್ನುತ್ತಾರೆ. ಈ ದಿಶೆಯಲ್ಲಿ ವ್ಯಕ್ತಿಯ ಸುತ್ತಲಿನ ಭೌಗೋಲಿಕ ಪರಿಸರ ಹಾಗೂ ಸಮಾಜ ಅನುಸರಿಸಿಕೊಂಡು ಬಂದ ಆವರೆಗಿನ ಆಚರಣೆಗಳು ಕೂಡ ಒಂದು

ಸಂಸ್ಕೃತಿಯು ರೂಪುಗೊಳ್ಳುವಲ್ಲಿ ತುಂಬ ಪ್ರಭಾವ ಬೀರುತ್ತವೆ. ಈ ಕಾರಣಕ್ಕಾಗಿಯೇ ವ್ಯಕ್ತಿಯ ಸಾಂಸ್ಕೃತಿಕ ಬೆಳವಣಿಗೆಗೆ ಮುಕ್ತ ಹಾಗೂ ಸುರಕ್ಷಿತ ಸಾಮಾಜಿಕ ವಾತಾವರಣ ಬಹು ಮುಖ್ಯವೆಂದೆನಿಸುತ್ತದೆ. ಯಾಕೆಂದರೆ ಸ್ವಾತಂತ್ರ್ಯವಿಲ್ಲದೆ ಸಂಸ್ಕೃತಿಯು ಬೆಳೆಯಲಾರದು. ಅಂತೆಯೇ ನಾಗರಿಕತೆಯೂ ಕೂಡ. ಆದುದರಿಂದ ಕ್ರೋಚೆ ಮುಂತಾದ ವಿಚಾರವಂತರು. "ವಿಶ್ವದ ಇತಿಹಾಸವೆಂದರೆ ಸ್ವಾತಂತ್ರ್ಯದ ಇತಿಹಾಸವೇ" ಎಂದು ಅಭಿಪ್ರಾಯ ಪಟ್ಟಿದ್ದಾರೆ (Croce : History as the Story of Liberty). ಭೌತಿಕವಾಗಿ ಸಂಪೂರ್ಣ ಸ್ವಾತಂತ್ರ್ಯ ಅಸಾಧ್ಯವಾದರೂ. ಮಾನವನ ಆತ್ಮಸಾಕ್ಷಾತ್ಕಾರಕ್ಕಾಗಿ ಬೇಕಾಗುವ ಸ್ವಾತಂತ್ರ್ಯವನ್ನು ಪಡೆದುಕೊಳ್ಳುವುದು ಅಸಂಭವವಾದುದೇನಲ್ಲ.

ಭಾರತೀಯ ಸಂಸ್ಕೃತಿ : ಸಂಸ್ಕೃತಿಯು ರೂಪುಗೊಳ್ಳುವಲ್ಲಿ ಹಾಗೂ ಬೆಳವಣಿಗೆ ಹೊಂದುವುದರಲ್ಲಿ ಭೌಗೋಲಿಕ ಅಂಶಗಳು ಮಹತ್ವದ ಪಾತ್ರಗಳನ್ನಾಡುತ್ತವೆ. ಪ್ರಾದೇಶಿಕ ಹವಾಗುಣ. ಭೂಫಲವತ್ತತೆ. ಅರಣ್ಯ ಸಂಪತ್ತು. ನದಿ ಕೆರೆಗಳು ಮುಂತಾದವು ಮಾನವನ ಆರ್ಥಿಕ ಸಂಪನ್ಮೂಲಗಳ ಮೇಲೆ ತುಂಬ ಪ್ರಭಾವ ಬೀರುವುದರಿಂದ ಇವೆಲ್ಲವುಗಳ ಪರಿಣಾಮ ನೇರವಾಗಿ ಸಂಸ್ಕೃತಿಯ ಬೆಳವಣಿಗೆಯ ಮೇಲಾಗುವುದು ಸಹಜವೇ. ಆದ್ದರಿಂದಲೇ ಸಂಸ್ಕೃತಿಗಳನ್ನು ವಿಂಗಡಿಸಿ ಹೆಸರಿಸುವಾಗ ಗಂಗಾತೀರ. ಸಿಂಧೂನದಿ ಕೊಳ್ಳ. ಈಜಿಪ್ಟ್. ಮೆಸಪಟೊಮಿಯಾ. ಚೀನ ಮುಂತಾದ ಪ್ರದೇಶ ಸೂಚಕ ಪ್ರತ್ಯಯಗಳು ಬಂದಿವೆ. ಇದರಂತೆಯೇ ದೇಶದೇಶಗಳಿಗೆ ವಿಭಿನ್ನ ಸಂಸ್ಕೃತಿಗಳು ಇರುವುದನ್ನು ಕಾಣಬಹುದಾಗಿದ್ದು ಅವುಗಳಲ್ಲಿಯೂ ಅತ್ಯಂತ ಪ್ರಾಚೀನ ಸಂಸ್ಕೃತಿಗಳಲ್ಲಿ ಭಾರತೀಯಸಂಸ್ಕೃತಿಯೂ ಒಂದಾಗಿದೆ. ಹಲವಾರು ಪುರಾತನ ಸಂಸ್ಕೃತಿಗಳು ಇಂದು ಕಣ್ಮರೆಯಾಗಿ ಹೋಗಿದ್ದರೂ ಭಾರತೀಯ ಸಂಸ್ಕೃತಿಯು ತನ್ನದೇ ಆದ ವೈಶಿಷ್ಟ್ಯಗಳಿಂದ ಇಂದಿಗೂ ಪ್ರಸ್ತುತವಾಗಿರುವುದು ಅದರ ಅನಂತತೆಗೆ ಸಾಕ್ಷಿಯಾಗಿದೆ. ಇದರಿಂದಾಗಿಯೇ ಭಾರತೀಯಸಂಸ್ಕೃತಿಯನ್ನು ಆದಿ ಹಾಗೂ ಅನಂತವೆಂದು ಗುರುತಿಸಲಾಗುತ್ತದೆ.

ಭಾರತೀಯ ಸಂಸ್ಕೃತಿಯ ವಿಶಿಷ್ಟ ಲಕ್ಷಣಗಳನ್ನು ವರ್ಣಿಸುವಾಗಾಗಲಿ ಅಥವಾ ನಿರಂತರತೆಯನ್ನು ಸಾದರಪಡಿಸುವಾಗಾಗಲಿ ವಿಭಿನ್ನ ದೃಷ್ಟಿಕೋನಗಳನ್ನು ಹೊಂದಲಾಗಿದೆ. ಕೆಲವರಿಗೆ ಅದು ತನ್ನ ಅಧ್ಯಾತ್ಮ ಹಾಗೂ ತತ್ವಜ್ಞಾನಗಳ ಮೇಲೆ ಅವಲಂಬಿಸಿದ್ದಾರೆ. ಮತ್ತೆ ಕೆಲವರಿಗೆ ಅದು ಅಪೂರ್ವ ಶಿಲ್ಪಕಲೆ. ಸಂಗೀತ. ಸಾಹಿತ್ಯ. ನೃತ್ಯ. ಚಿತ್ರಕಲೆ ಮುಂತಾದ ಲಲಿತ ಕಲೆಗಳಲ್ಲಿ ವ್ಯಕ್ತವಾಗಿದೆ. ಇನ್ನುಳಿದ ಹಲವರಿಗೆ ಅದು ಇವೆರಡರ ಸಮ್ಮೇಳನವಾಗಿದೆ. ವೈಚಾರಿಕ ಭಿನ್ನತೆಗಳು ಏನೇ ಇರಲಿ ಆ ಎಲ್ಲ ವಿಚಾರ ಸರಣಿಗಳ ತಳಹದಿಯಲ್ಲಿ ಆಧ್ಯಾತ್ಮಿಕ ನಂಬುಗೆಯ ಒಂದು ಸರ್ವೇಸಾಮಾನ್ಯವಾದ ಧಾರೆ ಪ್ರವಹಿಸುತ್ತಿರುವುದನ್ನು ನಾವು ಕಾಣಬಹುದಾಗಿದೆ. ಆಧ್ಯಾತ್ಮಿಕ ಭಾವನೆ ಎಂದಾಕ್ಷಣವೇ ಧಾರ್ಮಿಕ ಮನೋಧರ್ಮ ಅಥವಾ ನಿರಾಕರಣ ವಾದ ಮಾತ್ರ ಎಂದು ಅರ್ಥೈಸಕೂಡದು. ಸಂಪತ್ತಿನ ಗಳಿಕೆ. ಸಾಂಸಾರಿಕ ಆಚಾರ ವಿಚಾರ. ಭೌತಿಕ ಆಸೆ ಆಕಾಂಕ್ಷೆಗಳ ಪೂರೈಕೆಗಳೂ ಕೂಡ ಈ ಆಧ್ಯಾತ್ಮಿಕತೆಯ ಜೊತೆ ಜೊತೆಯಲ್ಲೇ ಭಾರತೀಯ ಸಾಂಸ್ಕೃತಿಕ ಜೀವನದಲ್ಲಿ ಹಾಸುಹೊಕ್ಕಾಗಿವೆ. ಇದು ಅದರ ವೈಶಿಷ್ಟ್ಯವೂ ಆಗಿದೆ.

ಭಾರತೀಯ ಸಂಸ್ಕೃತಿಯ ಮತ್ತೊಂದು ಪ್ರಮುಖ ಲಕ್ಷಣವೆಂದರೆ ಇಲ್ಲಿ ವ್ಯಕ್ತಿಯ ಸ್ವಾತಂತ್ರ್ಯಕ್ಕೆ ವಿಪುಲವಾದ ಅವಕಾಶವಿರುವುದಾಗಿದೆ. ಭಾರತೀಯ ದರ್ಶನಗಳಲ್ಲಿ ವ್ಯಕ್ತಿಯ ಧ್ಯೇಯ ಸಾಕ್ಷಾತ್ಕಾರಕ್ಕಾಗಿ ವಿಭಿನ್ನ ಮಾರ್ಗ. ಅಭಿಪ್ರಾಯಗಳಿದ್ದರೂ ಬಹುತೇಕ ಎಲ್ಲಿಯೂ ಆತನ ವೈಯಕ್ತಿಕ ಸ್ವಾತಂತ್ರ್ಯಕ್ಕೆ ಧಕ್ಕೆ ಬಂದಿರುವುದನ್ನು ಕಾಣಲಾರೆವು. ಅನೂಚಾನವಾಗಿ ಎಲ್ಲ ಪ್ರಭೇದಗಳಲ್ಲೂ ಅದನ್ನು ರಕ್ಷಿಸಿಕೊಂಡೇ ಬರಲಾಗಿದೆ. ಧರ್ಮ. ಅರ್ಥ. ಕಾಮ.

ಮೋಕ್ಷಗಳೆಂಬ ಚತುರ್ವಿಧ ಪುರುಷಾರ್ಥಗಳಲ್ಲಿಯೂ ಕೂಡ ವ್ಯಕ್ತಿಗೆ ಕರ್ಮವನ್ನು ಮಾಡಲು. ಬಿಡಲು ಅಥವಾ ತನ್ನದೇ ಆದ ಮಾರ್ಗ ಅನುಸರಿಸಲು ಸಾಕಷ್ಟು ಸ್ವಾತಂತ್ರ್ಯವಿರುವುದು.

ಆಧ್ಯಾತ್ಮಿಕತೆ. ಸತ್ಯಾನ್ವೇಷಣೆ. ಮೋಕ್ಷ ಸಾಧನೆಗಳಂತೆಯೇ (ಪರಧರ್ಮ/ಮತ) ಸಹಿಷ್ಣುತೆ. ಸಮಾನತೆ. ಸಮನ್ವಯತೆಗಳು ಕೂಡ ಭಾರತೀಯ ಸಂಸ್ಕೃತಿಯ ವಿಶಿಷ್ಟ ಲಕ್ಷಣಗಳಾಗಿವೆ. ಮುಸ್ಲಿಂ. ಬ್ರಿಟಿಶ್‌ನಂತಹ ಹಲವಾರು ಪರ ಧರ್ಮ. ಸಂಸ್ಕೃತಿಗಳು ಹೊರಗಿನಿಂದ ಬಂದವುಗಳಾಗಿದ್ದರೆ. ಜೈನ. ಬೌದ್ಧ. ಸಿಖ್ ಮುಂತಾದವುಗಳು ಸ್ಥಳೀಯ/ದೇಶೀಯ ಧರ್ಮಗಳಾಗಿವೆ.. ಹೀಗೆ ಅನ್ಯ ಧರ್ಮ ಹಾಗೂ ಸಂಸ್ಕೃತಿಗಳ ಪ್ರಭಾವವೇನೆಯಿದ್ದರೂ. ಅವೆಲ್ಲವುಗಳ ಸಾರವನ್ನು ಹೀರಿ ತನ್ನೊಳು ಅರಗಿಸಿಕೊಂಡು ತನ್ನದೇ ಆದ ಸ್ವಾಂತಿಕೆಯ ಸ್ವರೂಪವನ್ನು ಭಾರತೀಯ ಸಂಸ್ಕೃತಿ ಎಂಬುದು ಕಾಯ್ದುಕೊಂಡು ಬಂದಿದೆ. ಎಂ. ಎಲ್. ವಿದ್ಯಾರ್ಥಿ ಹೇಳುವಂತೆ ಆತ್ಮದ ದಿವ್ಯ ಸಂದೇಶವಾದ ಸಂಸ್ಕೃತಿಯು ಪ್ರಬಲ ವೈರುದ್ಧ್ಯ. ವೈಪರೀತ್ಯಗಳು ಎದುರಾದಾಗ ತುಸು ನೇಪಥ್ಯಕ್ಕೆ ಸರಿದು ಅವೆಲ್ಲವುಗಳು ಶಮನಗೊಳ್ಳಲು ಕಾಯ್ದು. ಕಾಲದ ಛಾಯೆಯಲ್ಲಿ ಅಡಗಿಕೊಂಡು. ಸಾವಧಾನಿಯಾಗಿ ತನ್ನ ಇರುವಿಕೆಯನ್ನು ಕಾಯ್ದುಕೊಂಡು ಬರುತ್ತದೆ.[೨] ಇದನ್ನೆ ಜೆ. ಜೆ. ರುನಿಮನ್‌ನು. " ಸಾಂಸ್ಕೃತಿಕ ಅಧಃಪತನ ಕ್ವಚಿತ್ತಾಗಿ ಆಗುತ್ತದೆ. ಆದರೆ ಒಟ್ಟಾರೆ ಸಂಸ್ಕೃತಿಯು ಎಂದೂ ವಿನಾಶದ ಹಾದಿ ಹಿಡಿಯುವುದಿಲ್ಲವೆಂದೆನ್ನುತ್ತಾನೆ. "[೩] ಇದಕ್ಕೆ ಭಾರತೀಯ ಸಂಸ್ಕೃತಿಯು ಒಂದು ಜೀವಂತ ನಿದರ್ಶನವಾಗಿದೆ.

ಆಧ್ಯಾತ್ಮಿಕತೆಯನ್ನು ತಳಹದಿಯಾಗಿಟ್ಟುಕೊಂಡು ಮೋಕ್ಷ ಸಾಧನೆಯ ಗುರಿ ಹೊಂದಿದ ಭಾರತೀಯ ಸಂಸ್ಕೃತಿಯು ಜಡಜಗತ್ತಿನ ಜೊತೆಗಿನ ತನ್ನ ಸಂಬಂಧವನ್ನೂ ಅಬಾಧಿತವಾಗಿರಿಸಿಕೊಂಡದ್ದು ಮತ್ತೊಂದು ವಿಶೇಷ ಲಕ್ಷಣ ಎನ್ನಬಹುದು. ಜಗತ್ತಿನ ಪಾಶ್ಚಾತ್ಯ ಸಂಸ್ಕೃತಿಗಳಂತಹ ಇನ್ನಿತರ ಕೆಲ ಸಂಸ್ಕೃತಿಗಳು ಕೇವಲ ಐಹಿಕ ಅಥವಾ ಭೌತಿಕ ಸಂತೃಪ್ತಿಯುಳ್ಳ ಆರ್ಥಿಕ ಹಾಗೂ ಸಾಮಾಜಿಕ ಅಂಶಗಳನ್ನೇ ಪ್ರಧಾನವಾಗಿಟ್ಟುಕೊಂಡಿದ್ದರಿಂದ ಕಾಲಾಂತರದಲ್ಲಿ ಅವು ಕಣ್ಮರೆಯಾಗಿ ಹೋಗಿವೆ. ಆದರೆ ಆಧ್ಯಾತ್ಮಿಕ ಅಥವಾ ಆತ್ಮಜ್ಞಾನದ ಗುರಿ ಹೊಂದಿದ ಭಾರತೀಯ ಸಂಸ್ಕೃತಿಯು ಅಬಾಧಿತವಾಗಿ ಉಳಿದುಕೊಂಡು ಬಂದಿದೆ. ಅದನ್ನೇ " ಆತ್ಮಲಾಭಾನ್ನಪರಂವಿದ್ಯತೇ " ಅಂದರೆ ಆತ್ಮಸಾಕ್ಷಾತ್ಕಾರವೇ ಪರಮಶ್ರೇಷ್ಠ ಲಾಭ ಎಂದು ವಿವರಿಸಲಾಗಿದೆ. ಅದಕ್ಕಾಗಿಯೇ ಅಂತರಾತ್ಮನ ಧ್ವನಿಗೆ ಎಲ್ಲಿಲ್ಲದ ಮಹತ್ವವೂ ಬಂದಿದೆ.

ಈ ಆಧ್ಯಾತ್ಮಿಕತೆ ಹಾಗೂ ಮೋಕ್ಷ ಸಾಧನೆಯ ಬಗ್ಗೆ ಪ್ರೊ. ಮ್ಯಾಕ್ಸ್ ಮುಲರ್‌ರವರು ತಮ್ಮ ' ಇಂಡಿಯಾ. ವಾಟ್ ಕ್ಯಾನ್ ಇಟ್ ಟೀಚ್ ಅಸ್ ' (ಭಾರತ ನಮಗೇನು ಕಲಿಸಬಲ್ಲದು) ಎಂಬ ಗ್ರಂಥದಲ್ಲಿ ಯುರೋಪಿಯನ್ನರು ರೋಮನ್. ಜ್ಯೂ ಹಾಗೂ ಗ್ರೀಕ್ ವಿಚಾರಧಾರೆಯಿಂದ ಸಾಕಷ್ಟು ಪ್ರಭಾವಿತರಾಗಿದ್ದರೂ. ಇನ್ನೂ ಹೆಚ್ಚಿನ ಸಾಧನೆಗಾಗಿ ಅಂದರೆ ವಿಶ್ವಮಾನವತ್ವ ಹಾಗೂ ನಿಜವಾದ ಮನುಷ್ಯ ಜೀವನದರ್ಶನವಾಗಬೇಕಾದರೆ. ಕೇವಲ ಇಹಲೋಕದ್ದಲ್ಲದೇ ಪರಲೋಕದ್ದನ್ನೂ ಹಾಗೂ ಅವಿನಾಶಿಯಾದದ್ದನ್ನೂ ಕಂಡುಕೊಳ್ಳಬೇಕೆಂದರೆ ಅವರು ಭಾರತದೆಡೆಗೇ ನೋಡಬೇಕಾಗುತ್ತದೆನ್ನುತ್ತಾರೆ.[೪] ಇದನ್ನೇ ಅಮೆರಿಕದ ಸುಪ್ರಸಿದ್ಧ ಚಿಂತಕ ಇತಿಹಾಸಕಾರನಾದ ವಿಲ್ ಡುರಾಂಟ್ ಒಂದು ಹೆಜ್ಜೆ ಮುಂದೆ ಹೋಗಿ ಭಾರತವು ಎಲ್ಲ ಜನಾಂಗಗಳ. ತತ್ವಜ್ಞಾನಗಳ. ಯುರೋಪಿನ ಭಾಷೆಗಳ ತಾಯಿ ಎಂದು ಹೇಳುತ್ತ ಅದು ಅರಬರ ಮೂಲಕ ಗಣಿತಶಾಸ್ತ್ರದ. ಬುದ್ಧನ ಮೂಲಕ ಬೈಬಲ್‌ನ ಆದರ್ಶಗಳ ತಾಯಿ ಎಂದೂ ಗ್ರಾಮವ್ಯವಸ್ಥೆ ಮೂಲಕ ಸ್ವರಾಜ್ ಹಾಗೂ ಪ್ರಜಾಪ್ರಭುತ್ವದ ತಾಯಿ ಎಂದೆನಿಸುತ್ತದೆ ಎಂದೂ ಹೇಳಿ ಕೊನೆಗೆ ಭಾರತಮಾತೆಯು ಬಹುವಿಧದಲ್ಲಿ ನಮ್ಮೆಲ್ಲರಿಗೂ ತಾಯಿ ಸ್ವರೂಪಿಯಾಗಿದ್ದಾಳೆಂದು ಮುಕ್ತಕಂಠದಿಂದ

ಹೊಗಳಿದ್ದಾನೆ.[7] ಮಹಾತ್ಮಾ ಗಾಂಧಿಯವರೂ ಕೂಡ ತಾವು ಚಿಕ್ಕ ಮಗುವಿನಂತೆ ತಾಯಿ ಭಾರತಿಯ ಎದೆಯನ್ನಪ್ಪಿಕೊಂಡಿದ್ದು ಆಕೆಯ ಆಧ್ಯಾತ್ಮಿಕ ಪೌಷ್ಟಿಕತೆಯನ್ನು ಪಡೆದುಕೊಳ್ಳಲು ಎಂದಿದ್ದಾರೆ.[8]

ಭಾರತೀಯ ಸಂಸ್ಕೃತಿಯ ಮತ್ತೊಂದು ಪ್ರಮುಖ ಲಕ್ಷಣವೆಂದರೆ ಮಾತೃಭೂಮಿಯ ಬಗ್ಗೆ ಇಲ್ಲಿಯ ಜನಾಂಗದ ತೀವ್ರ ಒಲವು. ತನ್ನ ದೇಶವನ್ನು ಪ್ರೀತಿಸುವುದು ಎಲ್ಲ ಕಡೆಗೂ ಸಾಮಾನ್ಯವಾಗಿ ಕಂಡುಬರುವುದೇ ಆದರೂ ಭಾರತೀಯನ ಪ್ರೇಮ ಅತ್ಯುತ್ಕಟವಾಗಿದ್ದು ಈ ಭೂಮಿಯನ್ನು ಪುಣ್ಯಭೂಮಿಯನ್ನಾಗಿಸಿದೆ. ಇಲ್ಲಿಯ ನೆಲಜಲಕ್ಕೆ ಎಲ್ಲಿಲ್ಲದ ಪ್ರೀತಿ ದೊರಕಿದ್ದು ಅದು ಭಕ್ತಿಯ ರೂಪದಲ್ಲಿ ವ್ಯಕ್ತವಾಗಿದೆ. ಆರ್ಯಾವರ್ತ, ಭರತಭೂಮಿ ಪುಣ್ಯಭೂಮಿ ಎಂಬುವು ಇದಕ್ಕೆ ನಿದರ್ಶನಗಳಾಗಿವೆ. ಈ ನೆಲದ ಬಗೆಗಿನ ಪ್ರೀತಿ ಭಕ್ತಿಗಳು ಅನಾದಿ ಕಾಲದಿಂದಲೂ ವ್ಯಕ್ತವಾಗುತ್ತಲೇ ಬಂದಿವೆ. ಋಗ್ವೇದದಲ್ಲಿಯ 'ನದೀಸೂಕ್ತ' ಹಾಗೂ ಅಥರ್ವವೇದದಲ್ಲಿಯ 'ಭೂಮಿಸೂಕ್ತ'ಗಳಲ್ಲಿ ಈ ಬಗ್ಗೆ ಸಾಕಷ್ಟು ತಿಳಿವಳಿಕೆ ನೀಡಲಾಗಿದೆ. ರಾಮಾಯಣದಲ್ಲಂತೂ ಲಕ್ಷ್ಮಣನಿಗೆ,

ಅಪಿ ಸ್ವರ್ಣಮಯೀ ಲಂಕಾ ನ ಮಿ ಲಕ್ಷ್ಮಣ ರೋಚತೇ
ಜನನೀಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸಿ

'ಓ ಲಕ್ಷ್ಮಣನೆ, ಈ ಚಿನ್ನದಂಥ ಲಂಕೆಯು ನನಗಾವ ಆಕರ್ಷಣೆಯನ್ನೂ ನೀಡುತ್ತಿಲ್ಲ. ಯಾಕೆಂದರೆ ಮಾತೆ ಹಾಗೂ ಮಾತೃಭೂಮಿಗಳು ಸ್ವರ್ಗಕ್ಕಿಂತಲೂ ಮಿಗಿಲಾದವುಗಳಾಗಿವೆ'. ಎಂದು ತಿಳಿಸುತ್ತ ಪಚ್ಚದ ನಡುಗಡ್ಡೆಯಾದ ಆ ಸುಂದರ ಲಂಕೆಯಲ್ಲೂ ತನ್ನ ತಾಯಿ ಹಾಗೂ ತಾಯಿ ಸ್ವರೂಪಿ ದೇಶವನ್ನು ನೆನೆಯುತ್ತಾನೆ. ಮಹಾಭಾರತದಲ್ಲಂತೂ

ಅತ್ರಾಪಿ ಭಾರತಂ ಶ್ರೇಷ್ಠಂ
ಜಂಬುದ್ವೀಪೇ ಮಹಾಮುನೇ
ಯಾತೋ ಹಿ ಕರ್ಮ ಭೂಮೇಶ.....

ಎಂದು ಭರತಭೂಮಿಯ ಶ್ರೇಷ್ಠತೆಯನ್ನು ಕೊಂಡಾಡುತ್ತ ಇಲ್ಲಿ ಜನ್ಮ ತಾಳಿ ಬಂದಿರುವುದೆಂದರೇನೆ ಒಂದು ಗೌರವದ ಹಾಗೂ ಪ್ರತಿಷ್ಠೆಯ ಸಂಕೇತ ಹಾಗೂ ಅದಕ್ಕಾಗಿ ಅಗಾಧವಾದ ಪುಣ್ಯ ಮಾಡಿರಬೇಕಾಗುತ್ತದೆಂದು ವರ್ಣಿಸಲಾಗಿದೆ. ಈ ಕೆಲ ಉಲ್ಲೇಖಗಳು ಬ್ರಿಟಿಶರ ಆಡಳಿತದ ಪೂರ್ವದಲ್ಲಿ ಅಂದಿನ ಭಾರತೀಯರಿಗೆ ದೇಶ / ರಾಷ್ಟ್ರದ ಕಲ್ಪನೆಯೇ ಇರಲಿಲ್ಲ ಎಂದು ವಾದ ಮಾಡುವವರಿಗೆ ಸರಿಯಾದ ಉತ್ತರವೆನಿಸುತ್ತವೆ. (ಮನುಸ್ಮೃತಿಯಲ್ಲಿಯೂ ಬ್ರಹ್ಮಾವರ್ತ, ಮಧ್ಯದೇಶ, ಹಾಗೂ ಆರ್ಯಾವರ್ತಗಳ ಗಡಿ ಸೀಮೆಗಳನ್ನು ನಿಖರವಾಗಿ ನಿರ್ಣಯಿಸಲಾಗಿದೆ.) ವಿವೇಕಾನಂದರೂ ಭಾರತಾಂಬೆಯ ಹಿರಿಮೆಯನ್ನು " The soil of India is my highest heaven, the good of India is my good " (ಭಾರತದ ಮಣ್ಣು ನನಗೆ ಅತ್ಯಂತ ಹೆಚ್ಚಿನ ಸ್ವರ್ಗ, ಭಾರತದ ಒಳಿತೇ ನನ್ನ ಒಳಿತು) ಎಂದು ವರ್ಣಿಸಿದ್ದಾರೆ.

ವಿಭಿನ್ನತೆಗಳಲ್ಲಿ ಏಕತೆಯು ಭಾರತೀಯ ಸಂಸ್ಕೃತಿಯ ಮೂಲಮಂತ್ರವಾಗಿದೆ ಎನ್ನಲಡ್ಡಿಯಿಲ್ಲ. ನಾನಾ ನಮೂನೆಯ ಭಾಷೆ, ಧರ್ಮ, ಜಾತಿ, ಉಪಜಾತಿ, ಜನಾಂಗಗಳನ್ನು ಹೊಂದಿದ್ದರೂ ಸ್ಥಾನಿಕದಲ್ಲಿ ಹಾಗೂ ಸೀಮಿತ ವಲಯಗಳಲ್ಲಿ ಬೇರೆ ಬೇರೆ ಮನೋಧರ್ಮದ ನೆಲೆಗಳನ್ನು ಹೊಂದಿದಾಗ್ಯೂ ಇಡೀ ಭಾರತೀಯ ಕ್ಷೇತ್ರಕ್ಕೊಂದು ಸಾಮಾನ್ಯವಾದ ಸಂಸ್ಕೃತಿಯ ಗುಪ್ತಗಾಮಿನಿ ಹರಿಯುತ್ತಿರುವುದನ್ನು ಕಾಣಬಹುದಾಗಿದೆ. ಇದನ್ನೇ ರವೀಂದ್ರನಾಥ ಟ್ಯಾಗೋರರವರು ಸನಾತನ ಧರ್ಮದ ವಿಶಿಷ್ಟ ಲಕ್ಷಣವೆಂದು ಕರೆಯುತ್ತಾರೆ.[9] ಅರವಿಂದರು

ಭಾರತೀಯರಿಗೆ ಧರ್ಮದ ಭಾವವು ಮುಖ್ಯವೇ ಹೊರತು ಪಾಶ್ಚಾತ್ಯರಂತೆ ಧಾರ್ಮಿಕ ಸಿದ್ಧಾಂತವಲ್ಲವೆಂದೆನ್ನುತ್ತಾರೆ.[೮] ಹೀಗೆ ತಮ್ಮದಷ್ಟೇ ಕಟು ಸತ್ಯ ಇನ್ನಿತರರದು ಅಲ್ಲ ಎಂಬ ಧೋರಣೆಗೆ ವಿರುದ್ಧವಾಗಿ ಭಾರತೀಯರು ತಮ್ಮದರಂತೆಯೇ ಬೇರೆಬೇರೆ ಸತ್ಯ ಸಾಧ್ಯತೆಗಳಿರಬಹುದೆಂಬ ನಂಬಿಕೆಯವರಿರುವುದರಿಂದ ಭಾರತದಲ್ಲಿ ಈ ಅಸಂಖ್ಯ ಅನೇಕತೆಗಳಲ್ಲಿಯೂ ಏಕತೆ ಸಾಧ್ಯವಾಗಿದೆ. ಧಾರ್ಮಿಕಸಿದ್ಧಾಂತ ಅಥವಾ ತತ್ವಗಳ ಕಠಿನ ನಿಲುವಿಗಾಗಲಿ ಅಥವಾ ಸಮಾಜದ ನಿರಂಕುಶಾಧಿಕಾರಕ್ಕಾಗಲಿ ಭಾರತದಲ್ಲಿ ಅವಕಾಶವಿಲ್ಲವಾಗಿದೆ. ಭಾರತೀಯ ಸಂಸ್ಕೃತಿಯಲ್ಲಿ ವ್ಯಕ್ತಿಯ ಸ್ವಾತಂತ್ರ್ಯಕ್ಕೆ ಎಲ್ಲಿಲ್ಲದ ಪ್ರಾಧಾನ್ಯ ಇದೆ.

ಕೊನೆಯದಾಗಿ. ಭಾರತೀಯ ಸಂಸ್ಕೃತಿಯ ಅತ್ಯಂತ ಮಿಗಿಲಾದ ವಿಶಿಷ್ಟ ಲಕ್ಷಣವೆಂದರೆ ಅದರಲ್ಲಿ ಕಂಡುಬರುವ ಅದ್ವೈತ ತತ್ವವಾಗಿದೆ. ದ್ವೈತ ಭಾವವನ್ನು ಬಿಂಬಿಸುವ ಯಾವ ಮತ ಅಥವಾ ಸಂಸ್ಕೃತಿಯೇ ಆಗಲಿ ಸುಖ ಶಾಂತಿಯನ್ನು ಉಂಟು ಮಾಡಲಾರದು. ಅಂತೆಯೇ ವಿಶ್ವವ್ಯಾಪಿಯೂ ಆಗಲಾರದು. ದ್ವೈತ ಧೋರಣೆಯು ಭೇದಭಾವಗಳನ್ನು ಬಿಂಬಿಸುವಂತಹುದು. ಈ ಭೇದಭಾವ ಭಯವನ್ನು ಹುಟ್ಟುಹಾಕುವುದು. ಭಯಜನ್ಯವಾದ ಯಾವುದೇ ಸಂಸ್ಕೃತಿ ಸಾರ್ವಕಾಲಿಕವಾಗಲಾರದು. ಅಂತೆಯೇ ವಿಶ್ವಶಾಂತಿಯನ್ನೂ ಉಂಟುಮಾಡಲಾರದು. ಆದ್ದರಿಂದ ಅದ್ವೈತ ಭಾವವು ಭಯನಿವಾರಕನಾಗಿ. ಭೇದಭಾವವನ್ನಳಿಸುವ ದಿವ್ಯ ಸಾಧನೆ ಎಂದೆನಿಸುವುದು. ಇಂತಹ ಅದ್ವೈತ ದೃಷ್ಟಿಯನ್ನು ವಿಶ್ವಕ್ಕೆ ನೀಡಿದ ಹೆಮ್ಮೆ ಭಾರತೀಯ ಸಂಸ್ಕೃತಿಯದು.

ಅಡಿಟಿಪ್ಪಣಿಗಳು :

೧. ಸಂಸ್ಕೃತಿ : ಡಾ. ಡಿ. ವಿ. ಜಿ. (ಮ್ಯಾತ್ಯು ಅರ್ನಾಲ್ಡ್‌ನ ಮಾತು)

೨. Sri Aurobindo : Life Divine

೩. .....Cultural decline is rare and so far culture as a whole has never taken this direction : J. J. Honigmann - Understanding Culture.

೪. " If I were to look over the whole world to find out the country most richly endowed with all the wealth, power, and beauty that nature can bestow, in some parts a very paradise on earth-I should point to India. If I were asked under what sky the human mind has most fully developed some of its choicest gifts, has most deeply pondered on the greatest problems and has found solution of some of them which will deserve the attention even of those who have studied Plato and Kant - I should point to India. And If I were to ask myself from what literature we here in Europe - we who have been nurtured almost exclusively, on the thoughts of the Greeks and the Romans and of one Semitic race, the Jewish - may draw that corrective which is most wanted in order to make our inner life more perfect, more comprehensive, more universal, in fact more truly human a life not for this only but a transfigured and eternal life, again I should point to India... " —**Max Muller,** India - What Can It Teach Us ?

೫. " India was the motherland of our race, and Sanskrit the mother of Europe's languages, she was the mother of our philosophy; mother

through the Arabs, of much of our mathematics; mother, through the Buddha, of the ideals embodied in Christianity; mother, through the village community, of self-government and democracy. Mother India is in many ways the mother of us all. "

—**Will Durant,** the eminent American thinker and historian

೬. I cling to India like a child to its mother's breast, because I feel that she gives me the spiritual nourishment that I need..... —**Mahatma Gandhi**

೭. The realisation of unity in diversity, the establishment of a synthesis amidst variety that is the inherent, the sanatan-dharma of India. —**Rabindranath Tagore**

೮. To the Indian mind, dogma is the least important part of religion, and the religious spirit matters, not the dogma... —**Aurobindo**

ಗ್ರಂಥಋಣ :

Understanding Culture : John J. Honigmann

The Foundations of Indian Culture : Sri Aurobindo

ಭಾರತೀಯ ಸಂಸ್ಕೃತಿ : ಡಾ. ಎಸ್. ಶ್ರೀಕಂಠಶಾಸ್ತ್ರಿ

ಸಂಸ್ಕೃತಿ : ಡಾ. ಡಿ. ವಿ. ಜಿ.

Indian Culture through the Ages : M. L. Vidyarthi

India : Cradle of Cultures : Chaman Lal

ಮನು ಬಳಿಗಾರ್, ಅಪ್ತಕಾರ್ಯದರ್ಶಿ. ಆಹಾರ ಮತ್ತು ನಾಗರಿಕ ಸರಬರಾಜು ಸಚಿವರ ಕಛೇರಿ. ವಿಧಾನಸೌಧ. ೨೬೨. ೨ ನೇ ಮಹಡಿ. ಬೆಂಗಳೂರು - ೫೬೦ ೦೦೧ ✆ : ೦೮೦ - ೨೨೫೪೬೬೨೧

ಸಾಹಿತ್ಯ ಭಾಷೆ

▲ ಭಾಷಾನುಭಾವ

ಡಾ. ತಾಳ್ತಜೆ ವಸಂತಕುಮಾರ

ಅನುಭವವೆನ್ನುವುದು ಎಲ್ಲ ಸೃಷ್ಟಿಶೀಲ ಪ್ರಕಾರಗಳ ಮೂಲದ್ರವ್ಯವಾಗಿದೆ. ಇದು ಯಾವ ಮಾಧ್ಯಮದ ಆಶ್ರಯವೂ ಇಲ್ಲದೆಯೇ ಅಂತರಂಗದೊಳಗೆ ಉತ್ಪನ್ನವಾಗುವ ಭಾವವಿಶೇಷವಾಗಿದೆ. ಸಂವೇದನಾಶೀಲ ಮನಸ್ಸೊಂದನ್ನು ಪ್ರವೇಶಿಸುವ ಅನುಭವವು ಸೂಕ್ತ ಶರೀರ ಧಾರಣೆಗಾಗಿ. ಬಾಹ್ಯ ಪ್ರಪಂಚದ ಸದಸ್ಯತ್ವಕ್ಕಾಗಿ ಕಾದಿರುತ್ತದೆ. ಈ ಆಂತರಿಕ ಒತ್ತಡಗಳನ್ನು ನಿವಾರಿಸಿಕೊಳ್ಳುವ ಪ್ರಯತ್ನಗಳಲ್ಲಿ ತೊಡಗುವ ಕಲಾವಿದನು ಅನ್ಯಾನ್ಯ ಮಾಧ್ಯಮಗಳ ಸಾಧ್ಯತೆಗಳ ಅನ್ವೇಷಣೆಯಲ್ಲಿ ಪ್ರವೃತ್ತನಾಗುತ್ತಾನೆ. ಹೀಗೆ, ಅಮೂರ್ತ ಅನುಭವವೊಂದು ಪಂಚೇಂದ್ರಿಯಗಳ ಮೂಲಕ ಹೊಗಬಹುದಾದ ಕಲಾಭಿವ್ಯಕ್ತಿಗಳ ಲೋಕವೊಂದನ್ನು ನಿರ್ಮಿಸುವ ಬಗೆಯೂ ಚೇತೋಹಾರಿಯಾದುದೇ ಆಗಿದೆ. ಈ ರೀತಿಯಲ್ಲಿ ಮೂರ್ತಸ್ವರೂಪಗಳನ್ನು ಪಡೆಯುವ ಕಲಾಸೃಷ್ಟಿಗಳ ಎಲ್ಲ ವ್ಯವಹಾರಗಳೂ ಭಾವಪ್ರಪಂಚದೊಂದಿಗೇ ನಡೆಯುತ್ತಿರುತ್ತವೆ. ನಿರ್ದಿಷ್ಟ ಭಾವವೊಂದರ ಉದ್ದೀಪನೆ.

ಸಂಗೋಪನೆ. ನಿರ್ವಹಣೆ. ವಿನಿಮಯ. ನಿವಾರಣೆ. ಪರಿವರ್ತನೆಯೇ ಮೊದಲಾದ ಕ್ರಿಯಾ ಸರಪಳಿಗೆ ಚಾಲನೆಯನ್ನು ನೀಡುತ್ತಿರುತ್ತವೆ.

ಈ ಕಲಾಭಿವ್ಯಕ್ತಿಯ ಪರಿಕ್ರಮದಲ್ಲಿ ಮೂಲ ಅನುಭವವು ಅನೇಕ ಒಳ ಹೊರಗಿನ ದಿಗ್ದರ್ಶನಗಳಿಗೆ ಮಣಿಯಬೇಕಾಗುತ್ತದೆ. ಹೊರ ಹರಿವಿನ ದಾರಿಗಳನ್ನು ಹುಡುಕುತ್ತ: ತನ್ನೊಳಗೆ ಸಾಂದ್ರತೆಗೊಳ್ಳುತ್ತಿರುವ ಕಲಾನುಭವದ ಸ್ಪರ್ಶದ ಪುಳಕಗಳನ್ನು ಹೊಂದುವ ಕಲಾವಿದನಿಗೂ ಅದನ್ನು ಪೂರ್ಣ ಪ್ರಮಾಣದಲ್ಲಿ ಗ್ರಹಿಸುವುದು ಕಷ್ಟವಾಗುತ್ತದೆ. ಹಾಗೆ ಗ್ರಹಿಸಿದುದನ್ನು ಪ್ರಜ್ಞೆಯಲ್ಲಿ ಸ್ಥಿರಗೊಳಿಸುವುದು. ಅದನ್ನು ಯಥಾವತ್ತಾಗಿ ಲೋಕಮುಖಕ್ಕೆ ಪ್ರಸ್ತುತ ಪಡಿಸುವುದು ಬೇರೆಯೇ ಸವಾಲಾಗುತ್ತದೆ. ತಾನು ಆಯ್ದುಕೊಳ್ಳುವ ಮಾಧ್ಯಮದ ಸಂವಿಧಾನದಲ್ಲಿರುವ ಮಿತಿಗಳು ಮತ್ತು ಸ್ವಂತದ ಸಾಮರ್ಥ್ಯಗಳ ಪರಿಧಿಗಳನ್ನಾತನು ಕಟ್ಟೆಚ್ಚರದಿಂದ ನಿಭಾಯಿಸಬೇಕಾಗುತ್ತದೆ. ಈ ಎಲ್ಲಾ ಸಂಸ್ಕಾರಕ ಸಾಮಗ್ರಿಗಳು ಅನುಭವಗಳ ಮೇಲೆ ನಿರಂತರ ಪ್ರಭಾವಗಳನ್ನು ಬೀರುತ್ತಾ. ಕಲಾಸೃಷ್ಟಿಯ ಹದವನ್ನು ನಿರ್ಣೈಸುತ್ತವೆ. ಈ ಹಂತದಲ್ಲಿ ಆ ನಿರ್ಮಿತಿಯ ಸಂವಹನ ಸಾಧ್ಯತೆಗಳೂ ಪ್ರಾಮುಖ್ಯವೆನಿಸುತ್ತವೆ. ತಾನು ನೋಡುವ. ಕೇಳುವ. ಮುಟ್ಟುವ. ತಿನ್ನುವ ಪದಾರ್ಥಗಳನ್ನು ಸರಿಯಾದ ಸರಿಯಾದ ಸಂದರ್ಭಗಳಲ್ಲಿಯೇ ಪರಿಗ್ರಹಿಸಲು ಸಹೃದಯನು ಸನ್ನದ್ಧನಾಗಬೇಕಾಗುತ್ತದೆ. ಇಲ್ಲಿಯೂ ಕೂಡಾ ಮಾಧ್ಯಮದ ಸೀಮೆಗಳು ಕಲಾಸೃಷ್ಟಿಯ ಮಿತಿಗಳು. ಸಹೃದಯನ ವೈಯಕ್ತಿಕ ಮೇರೆಗಳೆಲ್ಲವೂ ಸಂವಹನ ಸಾಫಲ್ಯದ ಮೇಲೆ ಹತೋಟಿಯನ್ನು ಸಾಧಿಸುತ್ತವೆ. ಹಾಗೆ. ಕಲೆಯೊಂದನ್ನು ಗ್ರಹಿಸುವ ಆಸಕ್ತ ಚಿತ್ತ. ಅದಕ್ಕೆ ತನ್ನ ಪ್ರತಿಕ್ರಿಯೆಗಳನ್ನು ಸೂಚಿಸುವಾಗಲೂ ಭಿನ್ನ ಭಿನ್ನ ನಿರ್ದೇಶನಗಳನ್ನು ಮಾನ್ಯ ಮಾಡಬೇಕಾಗುತ್ತದೆ.

ತನ್ನ ಪ್ರತಿಭೆಯಿಂದ ಸೃಷ್ಟಿಗೊಂಡ ಕಲಾಪ್ರಕಾರಕ್ಕೆ ದೊರೆತ ಪ್ರತಿಕ್ರಿಯೆಗಳನ್ನೂ ಎದುರಾದ ಸವಾಲುಗಳನ್ನೂ ಅದರಿಂದ ಹುಟ್ಟಿದ ಸಮಸ್ಯೆಗಳನ್ನೂ ಕಲಾವಿದನು ತನ್ನವೇ ನೆಲೆಗಳಲ್ಲಿ ಸ್ವೀಕರಿಸುತ್ತಾನೆ: ಅವುಗಳನ್ನು ಪ್ರಸ್ತಾಪಿಸಲು. ಪರಿಹರಿಸಲು ಪ್ರಯತ್ನಿಸುತ್ತಾನೆ. ಈ ಪೂರ್ವಾನುಭವದ ಪರಂಪರೆಯು ಅವನ ಮೇಲೆ ದೀರ್ಘಕಾಲೀನ ಹಾಗೂ ದಟ್ಟವಾದ ಪರಿಣಾಮಗಳನ್ನು ಬೀರುತ್ತದೆ. ಎಂದರೆ. ಕಲಾವಿದನೊಳಗೆ ನುಸುಳಿದ ಕಲಾನುಭವವು ಅವನ ಸ್ವಂತದ ಸಂಪತ್ತು. ಅದು ನಿರ್ದಿಷ್ಟ ಅಭಿವ್ಯಕ್ತಿಯು ವಿಧಿಸುವ ಸಂಹಿತೆಗಳನ್ನು ಒಪ್ಪಿಕೊಂಡಾಗ. ಒಂದು ಚೌಕಟ್ಟನ್ನು ಸ್ವೀಕರಿಸುತ್ತದೆ. ಆಗ. ಕಲಾವಿದನ ಅನುಭವವಷ್ಟೇ ಬಾಹ್ಯ ಜಗತ್ತಿಗೆ ಆ ಕಲೆಯು ಕೊಡಬಹುದಾದ ಕಲಾನುಭೂತಿಯೂ ಮುಖ್ಯವಾಗುತ್ತದೆ.

ಒಂದು ಕ್ಷಣ. ಈ ಪ್ರಕ್ರಿಯೆಯನ್ನು ಪರಿಭಾವಿಸಿ. ತನ್ನ ಉಗಮ ಸ್ಥಾನದಲ್ಲಿ ತೀರಾ ಸರಳವಾಗಿ. ಪ್ರತಿಭಾ ಪ್ರಪಂಚದೊಳಗಷ್ಟೇ ಸುತ್ತುತ್ತಿದ್ದ ಕಲಾನುಭವ. ಲಕ್ಷ್ಯದತ್ತ ಸಾಗುವ ತನ್ನ ಪ್ರಮಾಣದಲ್ಲಿ ಅನೇಕ ರೂಪಾಂತರಗಳನ್ನು ಹೊಂದುತ್ತ. ಸಂಕೀರ್ಣ ಪದರಗಳೊಳಗೆ ಸೇರಿ ಹೋಗುತ್ತದೆನಿಸುವುದಿಲ್ಲವೇ ? ಇದು ಕಲಾವಿದ - ಕಲೆ - ಕಲಾಸೃಷ್ಟಿ - ಸಹೃದಯ ಮತ್ತೆ ಕಲಾವಿದರನ್ನು ಜೋಡಿಸುವ ಹೃದಯ ಸಂವಾದ ಚಕ್ರವಾಗಿದೆ. ಇದರ ನಡೆಯನ್ನು. ಲಯವನ್ನು ಅರ್ಥ ಮಾಡಿಕೊಂಡಷ್ಟೂ ಕಲಾಸ್ವಾದನೆಯ ಎತ್ತರೆತ್ತರಗಳ ಚಾರಣವೂ ಸುಗಮವಾಗುತ್ತದೆ.

ಭಾಷೆಯನ್ನು ಮಾಧ್ಯಮವಾಗಿ ಬಳಸಿಕೊಳ್ಳುವ ಸಾಹಿತ್ಯವೂ ಈ ಸ್ಥೂಲ ಲಕ್ಷಣಗಳನ್ನು ಅನುಸರಿಸುತ್ತದೆ. ಈ ಭಾಷೆಯು ಏಕಕಾಲಕ್ಕೆ ಜಡ ಜಂಗಮ ಎರಡೂ ಸ್ವರೂಪಗಳನ್ನು ಒಪ್ಪಿಕೊಳ್ಳುತ್ತದೆ. ದ್ರವ ಪ್ರಕಾರದ. ನಿರಂತರ ಬದಲಾಗುತ್ತಲೇ ಇರುವ ಗತಿಯನ್ನು ಒಂದು ಗಳಿಗೆ ಸ್ಥಗಿತಗೊಳಿಸಿಕೊಂಡು. ಸ್ಥಿರ ಪ್ರವೃತ್ತಿಗೆ ಒಲಿದಾಗ ಅದು ತನ್ನ ಶಾಸ್ತ್ರಮುಖವನ್ನು ಅಧ್ಯಯನದ ಬೆಳಕಿಗೊಡ್ಡುತ್ತದೆ. ಈ ಅಂಶವನ್ನು ಸ್ವಲ್ಪ ವಿಸ್ತರಿಸಬೇಕಾಗಬಹುದು.

ಯಾವುದೇ ವಸ್ತು ಅಥವಾ ವಿಚಾರಕ್ಕೆ ಶಾಸ್ತ್ರದ ದೀಕ್ಷೆಯನ್ನು ನೀಡಿ. ಅದನ್ನು ವಿಶ್ಲೇಷಣೆಯ ಕಕ್ಷೆಗೆ ಒಳಪಡಿಸಬೇಕಾದರೆ ಅದು ಕ್ಷಣಿಕವಾಗಿಯಾದರೂ ಜಡತ್ವವನ್ನು ಅಂಗೀಕರಿಸಬೇಕಾಗುತ್ತದೆ. ಇದು. ರೂಪ ಅಥವಾ ಬಂಧದ ಸ್ಥಿತಿಯನ್ನು. ಭೌತಿಕ ಇಲ್ಲವೆ ರಾಸಾಯನಿಕ ಗುಣವಿಶೇಷಗಳನ್ನು. ವೇಗ ಅಥವಾ ಚಲನೆಯ ಕ್ರಮವನ್ನು ಅಳೆಯುವ ವಿಧಾನವೂ ಹೌದು. ಮೇಲ್ನೋಟಕ್ಕೆ ಬದಲಾಗುತ್ತಿದೆ ಎನಿಸುವ. ಚಲಿಸುತ್ತಿರುವ ವಾಹನದ ವೇಗವನ್ನೇ ಗಮನಿಸೋಣ. 'ಈ ವೇಗವು ಇದೇ ಮಟ್ಟದಲ್ಲಿ ನಿಶ್ಚಿತವಾಗಿದ್ದರೆ. ಈ ವಾಹನವು ಒಂದು ಗಂಟೆಯಲ್ಲಿ ಇಷ್ಟು ದೂರವನ್ನು ಕ್ರಮಿಸಬಹುದು' ಎನ್ನುವ ಹೇಳಿಕೆಯ ಅರ್ಥವನ್ನು ಪರೀಕ್ಷಿಸೋಣ. ಈ ವಾಕ್ಯವು 'ಮುಂದಿನ ಒಂದು ಗಂಟೆಯ ವರೆಗೆ ಆ ವಾಹನವು ಅದೇ ನಿಗದಿತ ವೇಗದಲ್ಲಿ ಚಲಿಸುತ್ತಿರುತ್ತದೆ.' ಎನ್ನುವುದನ್ನು ಗೃಹೀತವಾಗಿಟ್ಟುಕೊಂಡಿದೆ. ಈ ಅರ್ಥದಲ್ಲಿ ನಾನು. 'ಭಾಷೆಗೆ ಜಡವಾದ ಒಂದು ಮುಖವಿದೆ' ಎನ್ನುತ್ತಿದ್ದೇನೆ. ಅದು ಶಾಸ್ತ್ರದ ಪ್ರಾಂಗಣ ಅಧ್ಯಯನಾವಧಿಯಲ್ಲಿ. ಅಲ್ಲಿ ಭಾಷೆಯ ಅತ್ಯಂತ ಕಿರಿಯ ಅರ್ಥಪೂರ್ಣ ಘಟಕವಾದ ಶಬ್ದಕ್ಕೆ ನಿಶ್ಚಿತವಾದ ಅರ್ಥವಿನ್ಯಾಸ. ಅರ್ಥಪರಂಪರೆ ಮತ್ತು ಅರ್ಥಾವತಾರಗಳಿರುತ್ತವೆ. ಭಾಷೆಯ ಈ ಘನೀಕೃತ ರೂಪವನ್ನೇ ಭಾಷಾಶಾಸ್ತ್ರವು ಅಭ್ಯಸಿಸುತ್ತದೆ.

ಭಾಷೆಯ ಜಂಗಮವೃತ್ತಿಯು ಅದರ ಕಲಾಸ್ವರೂಪಗಳಿಗೆ ಹೊಣೆಯಾಗುತ್ತದೆ. ಶಾಸ್ತ್ರ ಪ್ರಸಂಗಗಳಲ್ಲಿ ತನ್ನ ಕಿರಿಯ ಸದಸ್ಯನನ್ನು ಅಧ್ಯಯನದ ನಿಕಷಕ್ಕೆ ಒಪ್ಪಿಸುವ ಭಾಷೆ. ಇಲ್ಲಿ ಎಂದರೆ ಕಲಾಲೋಕದಲ್ಲಿ ಅಥವಾ ಸಾಹಿತ್ಯದಲ್ಲಿ ಅದನ್ನು ವಿಸ್ತಾರವಾದ ಸಂದರ್ಭದಲ್ಲಿ ಪರಿಶೀಲಿಸುತ್ತದೆ. ಇಲ್ಲಿ ಭಾಷೆಯನ್ನು ಬೇರೆ ಬೇರೆ ವಿಸ್ತರಣೆ (Extension) ಗಳ ವಾಸ್ತವ್ಯ ಕ್ರಮದಲ್ಲಿಟ್ಟು ಪರೀಕ್ಷಿಸಲು ಅನುವು ಮಾಡಿಕೊಡುತ್ತದೆ. ಇಲ್ಲಿ ಭಾಷೆಯು ತನ್ನ ಮೇಲೆ ಬೀಳುವ ಬೆಳಕಿನ ಹೊನಲಿನ ಬಣ್ಣ. ದಟ್ಟಣೆ. ಏರು - ಇಳಿವು, ದಿಕ್ಕುಗಳಿಗೆ ಸಂವಾದಿಯಾಗಿ ತನ್ನ ಪಾತ್ರಗಳನ್ನೂ ಬದಲಾಯಿಸುತ್ತಾ ಹೋಗುತ್ತದೆ. ಇದು ಒಟ್ಟೂ ಸಂವಹನ ಚಕ್ರದ ಸಾರಥ್ಯವನ್ನೂ. ಸ್ವಾಮಿತ್ವವನ್ನೂ ಒಟ್ಟಾಗಿಯೇ ನಿರ್ವಹಿಸುತ್ತದೆ. ಇದು 'ಕಲೆಯ ಭಾಷೆ' ಯೂ ಹೌದು. 'ಭಾಷೆಯ ಕಲೆ' ಯೂ ಹೌದು.

ಕವಿಸಮಯದ ಛಾಯೆಯೊಂದಿಗೆ ಹೇಳುವುದಾದರೆ. ಕಲೆ - ಶಾಸ್ತ್ರಗಳೆರಡು ಭಾಷೆಯೆನ್ನುವ ಗಂಡಭೇರುಂಡದ ಎರಡು ಮುಖಗಳಾಗಿವೆ. ಒಂದನ್ನುಳಿದು ಇನ್ನೊಂದಕ್ಕೆ ಇರವೂ ಇಲ್ಲ, ಬೆಳವಣಿಗೆಯೂ ಇಲ್ಲ. ಇವೆರಡೂ ಒಂದಕ್ಕೊಂದು ಪೂರಕವಾಗಿ. ಪರಸ್ಪರರ ಕೊರತೆಗಳನ್ನು ತುಂಬಿಕೊಡುವ ರಸದೂರತೆಗಳಾಗಿ. ಭಾಷೆಯನ್ನು ಸ್ವಯಂಪೂರ್ಣತೆಯತ್ತ ಒಯ್ಯುವ ವಾಹಕಗಳಾಗಿ ದುಡಿಯುತ್ತವೆ. ಇವುಗಳನ್ನು– ಅಭ್ಯಾಸದ ದೃಷ್ಟಿಯಿಂದಲೇ ಆದರೂ– ಪ್ರತ್ಯೇಕಿಸಿಡುವ ವಿಚ್ಛೇದನಾಶಕ್ತಿಗಿಂತ. ಈ ಸಮಷ್ಟಿಕಲ್ಪವನ್ನು ಇದ್ದಂತೆಯೇ ಪ್ರವೇಶಿಸುವುದು, ಅದರ ಒಳಾಂಗಣಗಳ ಚೆಲುವನ್ನೂ. ವಾಸ್ತುವೈಭವವನ್ನೂ ಪರಿಚಯ ಮಾಡಿಕೊಳ್ಳುವುದೇ ವಿಹಿತವಲ್ಲವೇ ?

ಭಾಷೆಯನ್ನು ಒಂದು ಕಲಾಮಾಧ್ಯಮವೆಂದು ಕರೆದಾಗಲೇ ಅದರ ಎರಡು ಮುಖ್ಯ ಉದ್ದೇಶಗಳು ಸ್ಪಷ್ಟವಾಗುತ್ತವೆ. ಒಂದು. ಅದಕ್ಕಿರುವ ಸಂವಹನ ಶಕ್ತಿ. ಎರಡನೆಯದು. ಅದರ ಪರಿಣಾಮಕಾರಿತ್ವ. ಈ ಎರಡನ್ನು ಕಲಾವಿದನಾದ ಸಾಹಿತಿ ಮತ್ತು ಕಲಾಸ್ವಾದನೆಯಲ್ಲಿ ನಿರತನಾಗುವ ಸಹೃದಯರಿಬ್ಬರ ಸಂದರ್ಭಗಳಿಗೂ ಅನ್ವಯಿಸಬಹುದು.

'ಹೇಳಿದರೆ ಹಾಳಾಗುವುದೋ ಅನುಭವದ ಸವಿಯು. ಹೇಳದಿರೆ ತಾಳಲಾರನೋ ಕವಿಯು' ಎನ್ನುವ ಕವಿವಾಣಿಯನ್ನು ಗಮನಿಸಿರಿ. ತನ್ನ ಅನುಭವವನ್ನು ಸಮರ್ಥವಾಗಿ. ಸಂಪೂರ್ಣವಾಗಿ ಸಂವಹಿಸಬಲ್ಲ ಭಾಷೆಯ ಹುಡುಕಾಟವೇ ಸಾಹಿತಿಯ ಸೃಜನಶೀಲ

ಚಟುವಟಿಕೆಗಳ ಆದ್ಯತೆಯಾಗಿದೆ. ಇದರೊಂದಿಗೆ. ತಾನು ಆಯ್ದುಕೊಂಡ ಭಾಷೆಯು. ಓದುಗನ ಮೇಲೆ ಬೀರಬಹುದಾದ ಪರಿಣಾಮವನ್ನೂ ಆತ ದೂರದರ್ಶಿತ್ವ ಮತ್ತು ಪರೇಂಗೀತಜ್ಞತೆಗಳ ವಿಶಿಷ್ಟ ಹಿನ್ನೆಲೆಯೊಂದಿಗೆ ಗುರುತಿಸಿಕೊಳ್ಳಬೇಕಾಗುತ್ತದೆ. ಒಂದು ಅರ್ಥದಲ್ಲಿ ಸಾಹಿತಿಯು. ತನ್ನ ರಚನೆಯ ಮೊದಲ ಓದುಗನಾಗುತ್ತಾನೆ ಎನ್ನುವುದನ್ನೂ ಇಲ್ಲಿ ನೆನಪಿಡಬೇಕು. ಆ ಸಂದರ್ಭದಲ್ಲಿ. ತನ್ನ ಸೃಷ್ಟಿಯಂಚುಗಳಿಂದಾಚೆಗೆ ಸರಿದು ನಿಂತು ಅದರ ಅಂದ - ಚಂದ ಹಾಗೂ ಅರೆ - ಕೊರೆಗಳನ್ನು ಸಮಭಾವದಿಂದ ತೂಗಬಲ್ಲವನಾದರೆ ಆತನಿಗದು ಸುಲಭವೂ ಆಗುತ್ತದೆ. ಸಹೃದಯನಾದರೂ ಅಷ್ಟೇ. ಕಲೆಯ ಭಾಷೆಗಿರುವ ಸಂವಹನ ಶಕ್ತಿಯ ತರಂಗಾಂತರಗಳಿಗೆ ತನ್ನ ಸ್ವಂತದ ಭಾಷಾವಾಹಿನಿ (channel) ಯ ಸೂಕ್ಷ್ಮವಲಯಗಳನ್ನು ಹೊಂದಿಸಿಕೊಂಡಾಗ ಮಾತ್ರವೇ ಅವನಿಗೆ ನಿರ್ದಿಷ್ಟ ಕೃತಿಯೊಂದಿಗೆ ಸಂಭಾಷಿಸುವುದು ಸಾಧ್ಯವಾಗುತ್ತದೆ. ಇದರಿಂದಾಗಿ ಭಾಷೆಯು ಇಚ್ಛಿತ ಪರಿಣಾಮವನ್ನೂ ಉಂಟುಮಾಡುತ್ತದೆ. ಈ ಸಂವಹನ ಮತ್ತು ಪರಿಣಾಮಗಳ ಸಂಬಂಧ ಗಾಜಿನ ಗೋಲದಷ್ಟು ನಾಜೂಕು: ಪಾರದರ್ಶಕ. ಅದನ್ನು ಸುರಕ್ಷಿತ ಅಂತರದಿಂದ ನೋಡುವ, ವಿನಿಯೋಗಿಸುವ. ಸಂರಕ್ಷಿಸುವ ಜವಾಬ್ದಾರಿಯು ಸಾಹಿತಿ ಹಾಗೂ ಸಹೃದಯರದಾಗಿದೆ.

ಹಾಗಾದರೆ, ಸಾಹಿತ್ಯದ ಭಾಷೆಯನ್ನು ನಿರ್ಧರಿಸುವ ಶಕ್ತಿಗಳು ಯಾವುವು ಎನ್ನುವ ಪ್ರಶ್ನೆಯೂ ಸಾಮಯಿಕವೇ ಆಗುತ್ತದೆ.

ಮೊದಲನೆಯದಾಗಿ, ಸಾಹಿತ್ಯದ ಪರಿಸರ ಒಂದು ಕಲಾಪ್ರಕಾರವಾಗಿ ಸಾಹಿತ್ಯವನ್ನು ಗುರುತಿಸುವಾಗ, ಅದರ ಪ್ರವೃತ್ತಿ - ಪ್ರವರ್ತನೆಗಳೆರಡೂ ವಸ್ತುಪ್ರಪಂಚಕ್ಕೆ ಮೀರಿದವುಗಳೆಂದು ಒಪ್ಪಿಕೊಳ್ಳುತ್ತೇವೆ. ಹಾಗಾಗಿ. ದಿನನಿತ್ಯದ ವ್ಯವಹಾರದ ಭಾಷೆಗಿಂತ ಬೇರೆಯಾದ ಮಾಧ್ಯಮವೊಂದನ್ನು ಅದು ಆರಿಸಿಕೊಳ್ಳುತ್ತದೆ. ಸೇರ್ಪಡೆ. ಬೇರ್ಪಡೆ. ಮಾರ್ಪಾಡುಗಳೊಂದಿಗೆ ವಾಸ್ತವ ಜಗತ್ತಿನ ಭಾಷೆಯನ್ನು ಕಲೆಯ ಭಾಷೆಯಾಗಿ ತಿದ್ದಿಕೊಳ್ಳುವುದು ಅದಕ್ಕೆ ಅನಿವಾರ್ಯವೂ ಆಗುತ್ತದೆ. ಹಾಗಾಗಿ. ಕಾವ್ಯದಲ್ಲಿ ಬರಿಯ ಸೂರ್ಯ ಹುಟ್ಟುವುದಿಲ್ಲ. ಬದಲಿಗೆ 'ಮೂಡಣ ರಂಗಸ್ಥಳದಲಿ ನೆತ್ತರು ಮಾಡುತ್ತಾನೆ'. ಅದು ಕೇವಲ ಮೂಡು ದಿಕ್ಕಿನಲ್ಲಲ್ಲ. 'ಇಂದ್ರದಿಗಂತದಲ್ಲಿ ಪ್ರಾತಃಕಾಲದ ಸ್ವರ್ಣದ್ವಾರ'ದಲ್ಲಿ 'ಮುತ್ತಿನ ನೀರನ್ನೇ ಎರಕ ಹೊಯ್ಯುವ ಮೂಡಲ ಮನೆ'ಯಲ್ಲಿ !

ಕಲಾವಿದನ ಕುಂಚ ಬಿಡಿಸುವ ಚಿತ್ರಕ್ಕೂ ಛಾಯಾಗ್ರಾಹಕ ತೆಗೆಯುವ ಭಾವಚಿತ್ರಕ್ಕೂ ವ್ಯತ್ಯಾಸಗಳಿದ್ದೇ ಇವೆ. ಹಾಗೆಯೇ ದೈನಂದಿನ ಭಾಷೆಯಲ್ಲೂ ಕಲಾವಂತಿಕೆ – ಛಾಯಾಗ್ರಾಹಕನ ಭಾವಚಿತ್ರ ಹಿಡಿಯುವ ಕೌಶಲ. ಬೆಳಕಿನ ಸಂಯೋಜನೆಗಳಿಗೆ ಸಂವಾದಿಯಾಗಿ – ಇದ್ದೇ ಇದೆ. ಆದರೆ. ಅಲ್ಲಿ ಅದರ ಸ್ಥಾನವು ಸಾಹಿತ್ಯದಲ್ಲಿ ಅದಕ್ಕಿರುವ ಪಾತ್ರಕ್ಕಿಂತ ಪ್ರತ್ಯೇಕವಾಗಿಯೇ ಉಳಿಯುತ್ತದೆ.

ಎರಡನೆಯದು, ಕಲಾವಿದನ ಅನುಭವದ ಸ್ವರೂಪ. ಇಲ್ಲಿ. ಸಾಹಿತಿಯಲ್ಲಿ ಜಾಗೃತಗೊಳ್ಳುವ ಸಂವೇದನೆಗಳೇ ತಮ್ಮ ಅರ್ಥಪೂರ್ಣ ಪ್ರಸ್ತುತಿಗೆ ತಕ್ಕ ಆವರಣಗಳು ಯಾವುವೆಂಬುದನ್ನು ನಿರ್ಣೈಸುತ್ತವೆ. ಅನುಭವವು ವ್ಯೋಮವಿಹಾರಿಯಾದಷ್ಟೂ ಭಾಷೆಯು ನೆಲದ ಕಟ್ಟುಗಳನ್ನು ಬಿಡಿಸಿಕೊಂಡು ಅತೀಂದ್ರಿಯ ಲೋಕಕ್ಕೆ ಉಡ್ಡಯನ ಮಾಡುತ್ತದೆ. ಆಗ ಅದು. 'ಓಂಕಾರಾಳಿ'. 'ತ್ರಿವಿಕ್ರಮ ಪಥ'. 'ಅಮೃತಕ್ಕೊಗೆವ ಗರುಡ'ಗಳಂಥ ರೂಪಕಗಳ ಸೃಷ್ಟಿಕ್ರಿಯೆಯಲ್ಲಿ ಮಗ್ನವಾಗುತ್ತದೆ. ಅದೇ ಆಂತರಿಕ ಸಂಘರ್ಷ. ಉದ್ವೇಗ. ಆಕ್ರೋಶ. ಆವೇಶಗಳ ಉಪಶಮನಕ್ಕೆ ತೊಡಗುವ ಭಾಷೆಯು ಹರಿತವಾಗುತ್ತದೆ: ಉದ್ಘೋಷಕವಾಗುತ್ತದೆ. 'ಇಕ್ಕರ್ಲಾ. ಒದೀರ್ಲಾ' ಎಂದು ನೀಡುವ ಕರೆಯಾಗುತ್ತದೆ. ವರ್ತಮಾನದ ವ್ಯಂಗ್ಯದ ಮೊನೆ ಮನಸ್ಸಿಗೆ ನೆಟ್ಟಾಗ 'ಕುರಿಗಳು ಸಾರ್ ಕುರಿಗಳು' ಎಂದು ಲೇವಡಿ ಮಾಡುತ್ತದೆ. ಇಲ್ಲ. 'ಇವರ ಹಾನುಮದ್ವಿಕಾಸಕ್ಕೆ ಇಲ್ಲ ಎಲ್ಲೆ' ಎಂದು ಬೆರಗಾಗುತ್ತದೆ.

ಸಾಹಿತ್ಯದಲ್ಲಿ ಸಂವಾದ ಸ್ಥಾನದಷ್ಟೇ ಮುಖ್ಯವಾದುದು ಅದರ ಲಕ್ಷ್ಯಕೇಂದ್ರ. ಬಹಳ ವಾಚ್ಯ ಮತ್ತು ಸ್ಥೂಲ ಮಾದರಿಯ ಉದಾಹರಣೆಯನ್ನು ಕೊಡುವುದಾದರೆ. ಶಿಶು ಸಾಹಿತ್ಯದ ಜಿಸಿ ಜೇರೆ ವಿನಾಯಕರ ಕಾವ್ಯಾಭ್ಯಾಸಕ್ಕೆ ತೊಡಗುವ ಭಾಷೆಯ ಗುರುತ್ವವೇ ಬೇರೆಯಾಗುವುದಿಲ್ಲವೇ ? ಇದು. ಓದುಗರ ಭಾಷಾ ನಿರೀಕ್ಷೆಗಳನ್ನು ಗೌರವಿಸುವ ಉಪಕ್ರಮವಾಗಿದೆ. ಪ್ರಜ್ಞಾಪೂರ್ವಕವಾಗಿ ವಿಮರ್ಶಕರ ಉಪಸ್ಥಿತಿಯನ್ನೇ ನಿರಾಕರಿಸುತ್ತೇವೆನ್ನುವ ಸಾಹಿತಿಗಳು ಇಲ್ಲವೇ ಇಲ್ಲವೆಂದು ಇದರರ್ಥವಲ್ಲ. ಒಂದು ದೃಷ್ಟಿಯಿಂದ. ಅಂಥ ಅಭಿಪ್ರಾಯಗಳು ಅಪ್ರಾಮಾಣಿಕವೆನಿಸುತ್ತವೆ. ಯಾರನ್ನೂ ತಲುಪದಿರುವುದೇ ಸಾಹಿತ್ಯದ ಉದ್ದೇಶವೆಂದಾದರೆ. ಅದರ ರಚನೆಗೆ ಅರ್ಥ ಸಾರ್ಥಕ್ಯಗಳು ಎಲ್ಲಿಂದ ಬರಬೇಕು ?

ಸಾಹಿತ್ಯದ ಭಾಷೆಯನ್ನು ನಿರ್ಧರಿಸುವುದರಲ್ಲಿ ರಾಜಕೀಯ. ಸಾಂಸ್ಕೃತಿಕ ಅಥವಾ ಸಾಹಿತ್ಯಿಕ ಬದ್ಧತೆಗಳೂ ಆಸಕ್ತಿಯನ್ನು ವಹಿಸುತ್ತವೆ ನಮ್ಮ ಪ್ರತಿಭಟನಾ ಸಾಹಿತ್ಯ. ಸ್ತ್ರೀವಾದಿ ಬರೆಹಗಳು. ಎಡಪಂಥೀಯ ಧೋರಣೆಯ ಕೃತಿಗಳಲ್ಲಿ ಈ ಹೇಳಿಕೆಗೆ ಸಾಕಷ್ಟು ಉದಾಹರಣೆಗಳು ಸಿಗುತ್ತವೆ. ' ಶೋಷಣೆ '. ' ದಬ್ಬಾಳಿಕೆ '. ' ಪಲ್ಲಟ '. ' ಮನೋದೈಹಿಕ ' ಮುಂತಾದ ಪದಗಳೆಲ್ಲ ಅಂಥಲ್ಲಿ ವಿಶಿಷ್ಟಾರ್ಥಗಳ ಪಾರಿಭಾಷಿಕ ವಲಯವಾಸಿಗಳಾಗುತ್ತವೆ. (ಅಂಥ ಹಂಗುಗಳಿಲ್ಲದೆ ಬರೆಯುವವರು. ಶೋಷಿತ ಬದುಕುಗಳನ್ನು ಚಿತ್ರಿಸುವ. ಶೋಷಣೆಯ ಕ್ರಮಗಳನ್ನು ನಿರ್ಲಿಪ್ತಿಯಿಂದ ನಿರೂಪಿಸುವ ಕಾಯಕದಲ್ಲಿ ನಿರತರಾಗಿರುತ್ತಾರೆ. ಶಿವರಾಮ ಕಾರಂತರಂಥವರು ತಮ್ಮ ಪಾತ್ರಗಳ ಸ್ವಂತಿಕೆಯ ಸ್ವರೂಪಗಳನ್ನು ಶೋಧಿಸುತ್ತಾರೆಯೇ ಹೊರತಾಗಿ. ' ಅಹಂನಿವೃತ್ತಿ ' ' ಅಸ್ತಿತ್ವ ' ದಂಥ ಪ್ರಶ್ನೆಗಳನ್ನು ನೇರವಾಗಿ ಮುಂಚೂಣಿಯಲ್ಲಿ ನಿಲ್ಲಿಸುವುದಿಲ್ಲ.) ಈ ಕಡಿವಾಣಗಳು ನಿರ್ದಿಷ್ಟ ವರ್ಗದ ಸಾಹಿತಿಗಳನ್ನು ಸದಾ ನಿಯಂತ್ರಣದಲ್ಲಿ ಇಟ್ಟುಕೊಳ್ಳುವುದರಿಂದ. ಅವರು ಬಳಸುವ ಭಾಷೆಯೂ ಏಕರೂಪಿಯಾಗಿಯೇ ಆಗುತ್ತದೆ. ಭಾಷೆಯ ಪರಿಣಾಮವನ್ನು ಪೂರ್ವಗೃಹೀತವಾಗಿಟ್ಟುಕೊಂಡೇ ಬರವಣಿಗೆಗೆ ಹೋರಾಡುವ ಅನಿವಾರ್ಯತೆಗೂ ಇದು ಕಾರಣವಾಗುತ್ತದೆ. ಕನ್ನಡದ ನವ್ಯ ಸಾಹಿತ್ಯದ ಸಂದರ್ಭದ ಭಾಷೆಯನ್ನು ಲಕ್ಷಿಸಿ ಈ ಮಾತನ್ನು ಹೇಳುತ್ತಿದ್ದೇನೆ.

ಸಮುದಾಯದ ಅಪೇಕ್ಷೆ - ನಿರೀಕ್ಷೆಗಳು ಕೂಡಾ ಸಾಹಿತ್ಯ ಭಾಷೆಯ ಹದ - ಹಾಳತಗಳನ್ನು ರೂಪಿಸುತ್ತವೆ. ಸಾಮಾಜಿಕ - ಸಾಂಸ್ಕೃತಿಕ ಸಂದರ್ಭಗಳ ಸಾಮೂಹಿಕ ಸಂವೇದನೆಗಳಿಗೆ ಸ್ವರ ನೀಡುವ ಹೊಣೆಯನ್ನು ಹೇರುತ್ತಿರುವ ಸಾಹಿತಿಯು. ಆ ' ಬೇಕು ' ಗಳನ್ನು ಗಮನದಲ್ಲಿಟ್ಟುಕೊಂಡೇ ತನ್ನ ಭಾಷೆಯನ್ನು ಸಂಘಟಿಸುತ್ತಾನೆ. ಹೀಗಾಗಿ. ಸಾಹಿತ್ಯ ಕೃತಿಯೊಂದು ತನ್ನ ಓದುಗ ವರ್ಗವನ್ನು ಹೇಗೆ ಸೃಷ್ಟಿಸಿಕೊಳ್ಳುತ್ತದೋ ಹಾಗೆಯೇ ಓದುಗ ವರ್ಗವೊಂದು ಸಾಹಿತ್ಯದ ಭಾಷೆ. ಸ್ವರೂಪ ಹಾಗೂ ಆಶಯಗಳನ್ನು ನಿಗದಿಗೊಳಿಸುತ್ತದೆ.

ತನ್ನ ಹಾಗೂ ತನಗೆ ಸಂವಾದಿಯಾದ ಸಾಹಿತ್ಯ ಪರಿಸರಗಳಲ್ಲಿ ನಡೆಯುತ್ತಿರುವ (ಕೆಲಮಟ್ಟಿಗೆ ಸಾಹಿತ್ಯೇತರವಾದವುಗಳೂ ಸೇರಿದಂತೆ) ಆಂದೋಲನಗಳು. ಚಟುವಟಿಕೆಗಳು. ಚಳವಳಿಗಳು ಮುಂತಾದವುಗಳಿಗೆ ಪ್ರತಿ ಸಾಹಿತಿಯೂ ಒಂದಲ್ಲ ಒಂದು ರೀತಿಯಲ್ಲಿ ಸ್ಪಂದಿಸುತ್ತಾನೆ. ಮಂಜೇಶ್ವರ ಗೋವಿಂದ ಪೈಯವರು " ಪ್ರಾಸವನೀಗಲೆ ತೊರೆದು ಬಿಡುವುದೆ ನಿಶ್ಚಯಂ " ಎಂದು ತಮ್ಮ ನಿರ್ಧಾರವನ್ನು ಪ್ರಕಟಿಸಿದಾಗ. ಗೋಪಾಲಕೃಷ್ಣ ಅಡಿಗರು ನವ್ಯಕಾವ್ಯಮಾರ್ಗವನ್ನು ಸ್ವೀಕರಿಸಿದಾಗ. ಪ್ರತ್ಯೇಕ ದ್ವೀಪಗಳಾಗಿ ಉಳಿಯಲಿಲ್ಲ. ಬದಲಿಗೆ ಸಮಾನಶೀಲರ ಹೊಸ ಪೀಳಿಗೆಯನ್ನೇ ಸೃಷ್ಟಿಸಿದರು. ಇದು ಹೊರಲೋಕಕ್ಕೆ ಸಾಹಿತ್ಯ ಭಾಷೆಯೂ ಸೃಜನಾತ್ಮಕವಾಗಿ ಪ್ರತಿಕ್ರಿಯೆಯನ್ನು ಸೂಚಿಸುವ ಬಗೆ. ಹಾಗೆ ಮಾಡುತ್ತಲೇ ಅಭಿವ್ಯಕ್ತಿ ಕ್ರಮದ ತಿರುವುಗಳಿಗೆ ಸ್ಪಷ್ಟ ರೂಪವನ್ನು ಕೊಡುವ ವಿಧಾನ. ಸಾಹಿತ್ಯ ಕ್ಷೇತ್ರದ ಅನುಕ್ರಮಣಿಕೆಗೆ ಸ್ವಂತದ ಸಂಪನ್ನತೆಯನ್ನು ಅಳವಡಿಸುವ ಕ್ರಮ.

ಇವಿಷ್ಟು ಅಂಶಗಳನ್ನು ನೇಪಥ್ಯದಲ್ಲಿಟ್ಟುಕೊಂಡು. ಆಧುನಿಕ ಕನ್ನಡದ ಸೃಜನಶೀಲ ಸಾಹಿತ್ಯದ ಭಾಷೆಯನ್ನು ಅವಲೋಕಿಸಬಹುದು. ಈ ಅವಲೋಕನದ ಗಡಿರೇಖೆಗಳನ್ನು ಇಲ್ಲಿಯೇ ಸ್ಪಷ್ಟಪಡಿಸುವುದು ಸೂಕ್ತವೆನಿಸುತ್ತದೆ. ಇಲ್ಲಿ ‘ಆಧುನಿಕ’ ಎನ್ನುವಾಗ ಪಂಜೆ ಮಂಗೇಶರಾಯರೇ ಮುಂತಾದ ೨೦ನೆಯ ಶತಮಾನದ ಮೊದಲ ದಶಕಗಳ ಸಾಹಿತಿಗಳಿಂದೀಚೆಗಿನವರ ರಚನೆಗಳನ್ನು ಲಕ್ಷಿಸಲಾಗಿದೆ. ಈ ಸಮೀಕ್ಷೆಯು ನವೋದಯ. ಪ್ರಗತಿಶೀಲ. ನವ್ಯ. ನವ್ಯೋತ್ತರ ಮುಂತಾದ ವರ್ಗೀಕರಣ ಕ್ರಮವನ್ನು ಸಂಪೂರ್ಣವಾಗಿ ಬದಿಗೆ ಸರಿಸಿದೆ: ಕೇವಲ ಪಠ್ಯವನ್ನು ಕೇಂದ್ರವಾಗಿಟ್ಟುಕೊಂಡಿದೆ. ಇದು ಭಾಷಾಶಾಸ್ತ್ರೀಯ ದೃಷ್ಟಿಕೋನದ ಬದಲಿಗೆ. ಸಾಹಿತ್ಯಾಭ್ಯಾಸದ ಚಿಂತನ ವಿಧಾನವನ್ನು ಅನುಸರಿಸಿದೆ.

ಈ ಪರ್ಯಾವರಣದೊಳಗಿನ ಸಾಹಿತ್ಯದ ಭಾಷೆಯೊಂದಿಗಿನ ಅನುಸಂಧಾನವು ಅದರ ಹಲವು ಮಾದರಿಗಳನ್ನು ನಿರೂಪಿಸುತ್ತದೆ. ಆ ನಿಟ್ಟಿನಲ್ಲಿ ವಿಭಿನ್ನ ಪಠ್ಯಗಳಲ್ಲಿರುವ ೧) ಪೌರಾಣಿಕ ಭಾಷೆ. ೨) ಚಾರಿತ್ರಿಕ ಭಾಷೆ. ೩) ಕನಸಿನ ಭಾಷೆ. ೪) ವ್ಯವಹಾರ ಭಾಷೆ. ೫) ಸಂಕೀರ್ಣ ಭಾಷೆ. ೬) ಆಕ್ರೋಶದ ಭಾಷೆ. ೭) ಪ್ರಾದೇಶಿಕ ಭಾಷೆ. ೮) ಉಪಭಾಷೆ. ೯) ಆಧ್ಯಾತ್ಮಿಕ / ಅತೀಂದ್ರಿಯ / ಅನುಭಾವದ ಭಾಷೆ. ೧೦) ಸಂವಾದದ ಭಾಷೆ –ಮುಂತಾದ ಮಾದರಿಗಳು ಹೊಳೆಯುತ್ತವೆ. ಈ ಭಾಷಾ ಮಾದರಿಗಳ ಸೂಕ್ಷ್ಮವಾದ. ಸೂಕ್ತವಾದ ಅಧ್ಯಯನಗಳು ಅನುವಾದದಂಥ ಸಾಹಿತ್ಯ ಪ್ರಸಾರ ಕಾರ್ಯಗಳ ಸಾಧ್ಯತೆ - ಮಿತಿಗಳ ಮೇಲೂ ಬೆಳಕು ಹಾಯಿಸಬಲ್ಲುವು.

ನಿದರ್ಶನಾರ್ಥವಾಗಿ ಈ ಮಾದರಿಗಳಲ್ಲಿ ಒಂದೆರಡನ್ನು ಸ್ವಲ್ಪ ವಿಸ್ತರಿಸಬಹುದು. ಪೌರಾಣಿಕ ಭಾಷೆಯನ್ನುವಾಗ ನಾನು ಪುರಾಣಾಂತರ್ಗತ ವಸ್ತು ಅಥವಾ ಆಶಯಗಳುಳ್ಳ ಕೃತಿಗಳನ್ನಾಗಲಿ ಅಲ್ಲಿಯ ವಿಚಾರಗಳ ಆಧುನಿಕ ಪುನಾಸೃಷ್ಟಿಕ್ರಮಗಳನ್ನಾಗಲಿ ವಿಶ್ಲೇಷಿಸಲು ಉದ್ದೇಶಿಸುತ್ತಿಲ್ಲ. ಈ ಪ್ರಕಾರದ ಭಾಷೆ. ದೇಶ - ಕಾಲಗಳ ಮಿತಿಗಳನ್ನು ದಾಟಿದ ಅಸಂಭಾವ್ಯ ಸಂಭವಗಳನ್ನು ಮನುಷ್ಯ ಜಗತ್ತಿಗೆ ಜೋಡಿಸುವ ಕೊಂಡಿಯಾಗಿ ವೃತ್ತಿಪರವಾಗುವುದನ್ನು ಅರ್ಥ ಮಾಡಿಕೊಳ್ಳುತ್ತಿದ್ದೇನೆ. ಹೀಗೆ ಲಕ್ಷಿಸಲ್ಪಡುವ ಪುರಾಣದ ಭಾಷೆ ‘ಈಡಿಪಸ್ಸನ ಗೂಢ ಪಾಪಲೇಪಿತ’ ಎನ್ನುವಲ್ಲಿ ಸಮರ್ಥ ಪ್ರತಿಮೆಯಾಗಿ ವ್ಯಕ್ತವಾಗುತ್ತ ಅರ್ಥದ ಅನೇಕ ನೆಲೆಗಳನ್ನು ಕಂಡುಕೊಳ್ಳುತ್ತದೆ. ಅಗೋಚರ ವಿಶ್ವದೊಂದಿಗೆ ಸಂಬಂಧಗಳನ್ನು ಸ್ಥಾಪಿಸಿಕೊಳ್ಳುತ್ತದೆ. ಈ ಪ್ರಜ್ಞೆ. ಶಂಕರ ಮೊಕಾಶಿ. ಪುಣೇಕರರ ‘ಅವಧೇಶ್ವರಿ’ಯ ಒಟ್ಟೂ ಕಟ್ಟಡದ ವಿನ್ಯಾಸವನ್ನು ಕಲ್ಪಿಸುತ್ತದೆ. ಅನ್ಯಾನ್ಯ ರೂಪಕ -ಸಾದೃಶ್ಯಗಳ ಸಹಾಯದಿಂದ ನಮ್ಮ ಸಾಹಿತಿಗಳು ಇಂಥ ವಿಲಕ್ಷಣ ಖಂಡಗಳ ಅನ್ವೇಷಣೆಗಳನ್ನು ನಡೆಸುತ್ತಾರೆ.

‘ಯಯಾತಿ’ಯಂಥ ಕೃತಿಗಳಲ್ಲಿ ಇದು ಪ್ರಾಕೃತಿಕ - ಜೈವಿಕ ನಿಯಮಗಳ ವೈಚಾರಿಕ ಸುಸಂಬದ್ಧತೆಯ ಹುಡುಕಾಟವಾಗುತ್ತದೆ. ಸಾವಿನ ಗೂಢವನ್ನು. ಸಾರ್ಥಕ್ಯವನ್ನು ಸಮಕಾಲೀನ ಚಿಂತನಾಂಶಗಳಿಗೆ ಅಳವಡಿಸುವ ಪ್ರಯತ್ನವಾಗುತ್ತದೆ. ಈ ಪುರಾಣ ಪ್ರಪಂಚ ಪರ್ಯಟನದ ಮೂಲಕ ನಮ್ಮ ಸಾಹಿತಿಗಳು ಭಾಷೆಯ ಮಿತವ್ಯಯವನ್ನು ಅನನ್ಯವಾದ ರೀತಿಯಲ್ಲಿ ಸಾಧಿಸುತ್ತಾರೆ. ಅದು ಪರಿಚಿತ ಜಗತ್ತಿನೊಂದಿಗೆ ಭೇಟಿ ನಡೆಸಿದಾಗ ಸಂವಹನದ ವಿಶಿಷ್ಟ ನೆಲೆಗಳು ಕಾರ್ಯನಿರತವಾಗುತ್ತವೆ. ಅದುವೇ ಆ ನಿರ್ದಿಷ್ಟ ಸಾಂಸ್ಕೃತಿಕ ಲೋಕದಿಂದಾಚೆಯ ಸಹೃದಯರಿಗೆ ಈ ಭಾಷೆಯನ್ನು ದಾಟಿಸುವುದು ಸ್ವಲ್ಪ ಕಷ್ಟವೇ. ಹಾಗಾಗಿಯೇ ಈ ಪ್ರಕಾರದ ಭಾಷೆಯು ಅನುವಾದ. ರೂಪಾಂತರಗಳಿಗೆ ಸರಾಗವಾಗಿ ಬಾಗಲಾರದು.

ಸಾಮಾನ್ಯವಾಗಿ. ಚಾರಿತ್ರಿಕ ಭಾಷೆಯು ವಿಭೂತಿಪೂಜೆ. ವೈಭವೀಕರಣ. ಅತಿರಂಜನೆ. ಅತಿಶಯೋಕ್ತಿಗಳತ್ತ ಒಲವಿರಿಸಿಕೊಳ್ಳುತ್ತದೆ. ಚರಿತ್ರೆಯು ಯಾವಾಗಲೂ ದಾಖಲಿತವಾದ.

ಅತಿಪ್ರಾಚೀನವಲ್ಲದ ವಸ್ತು - ಆಶಯಗಳ ವಿಸ್ತರಣೆಯೇ ಆಗಿರುತ್ತದೆ. ಚಾರಿತ್ರಿಕ ಸಾಹಿತ್ಯ ಕೃತಿಗಳ ಪ್ರಧಾನ ಲಕ್ಷ್ಯಗಳೂ ಸಾಹಿತಿ ವಿಶಿಷ್ಟವಾಗಿರುತ್ತವೆ. ಅಂಥ ಸಾಹಿತ್ಯದ ಉದ್ದೇಶಗಳೂ 'ಸ್ವಭಾವ ಸತ್ವದ ಅನ್ವೇಷಣೆ' 'ಆ ಕಾಲದ ಸಂಸ್ಕೃತಿಯ ಪರಿಚಯಾತ್ಮಕ ನಿರೂಪಣೆ' 'ಸಾಮ್ರಾಜ್ಯಗಳ ಏಳು-ಬೀಳುಗಳ ಚಕ್ರನೇಮಿ ವಿನ್ಯಾಸಗಳ ಸ್ಪಷ್ಟೀಕರಣ' 'ಒಳಿತು - ಕೆಡುಕುಗಳ ಸಂಘರ್ಷ' ಹೀಗೆ ವ್ಯಕ್ತಿಯಿಂದ ವ್ಯಕ್ತಿಗೆ ಬದಲಾಗುತ್ತವೆ. ಹೀಗಾಗಿ. 'ಚರಿತ್ರೆಯ ಭಾಷೆ' ಯೆಂದಾಗ 'ಅದು ಕೇವಲ ಗತಕಾಲಕ್ಕೆ ಸಂಬಂಧಿಸಿದ್ದು' ಎನ್ನುವ ಏಕಪಕ್ಷೀಯವಾದ ತೀರ್ಮಾನಕ್ಕೆ ನಾವು ಬರಬೇಕಾಗಿಲ್ಲ. 'ಚಾರಿತ್ರಿಕ ಕಾಲಘಟ್ಟ' ಎನ್ನುವ ಪರಿಕಲ್ಪನೆಯನ್ನು ಅದರ cultural stereotype ನ ಬಂಧನದಿಂದ ಬಿಡಿಸಿಟ್ಟುಕೊಂಡು. ಈ ನೆಲೆಯನ್ನು ವಿಶೇಷವಾಗಿ ಅಭ್ಯಾಸ ಮಾಡಬೇಕಾಗುತ್ತದೆ. ಆಗ ಈ 'ಚರಿತ್ರೆಯ ಭಾಷೆ' ಮತ್ತು 'ಚಾರಿತ್ರಿಕ ಭಾಷೆ' ಗಳ ಸಿಕ್ಕು ತಾನಾಗಿ ನೇರವಾಗುತ್ತದೆ. ಸರಳವಾಗುತ್ತದೆ.

ಕನಸಿನ ಲೋಕಕ್ಕೆ ಸೇರಿದ ಭಾಷಾ ಮಾದರಿಯನ್ನೂ ಆಧುನಿಕ ಕನ್ನಡ ಸಾಹಿತ್ಯವು ಪರಿಚಯ ಮಾಡಿಕೊಟ್ಟಿದೆ. ಅದು ಕೇವಲ ರಮ್ಯ ಅನುಭವಗಳಿಗಷ್ಟೇ ಪ್ರವೇಶಾನುಮತಿಯನ್ನು ನೀಡುವ ರಕ್ಷಿತ ಪ್ರದೇಶವಾಗಿದೆ. ಈ ಭಾಷೆಯು ಸುಕುಮಾರ ಭಾವಸ್ಪಂದಿಯಾಗುತ್ತ ಬದುಕಿನ ವಾಸ್ತವಗಳ ವಿಸ್ಮರಣೆಯನ್ನೇ ಪ್ರತಿಪಾದಿಸುವ ಸ್ವಭಾವದ್ದು. 'ದೂರದಲಿ ಗಿರಿಯ ಮೇಲೆ ಇಳಿಯುವ ಇರುಳ ಮಾಲೆ' ಯಾಗಿ. 'ಚಂದ್ರಮಂಚವನ್ನೇರುವ ಚಕೋರಿ' ಯಾಗಿ. 'ಭೃಂಗದ ಬೆನ್ನೇರಿ' ಬರುವ ವರ್ಣವೈಭವವನ್ನು ಮೆರೆಯುವುದು ಇದಕ್ಕೆ ಸಹಜವಾದ ನಡೆಯಾಗಿದೆ. ಈ ಭಾಷಾಪ್ರಕಾರದ ಗುರಿಯೇ ಮನಸ್ಸುಗಳನ್ನು ಮೃದು - ಮುದಗೊಳಿಸುವ. ತಿಳಿಗೊಳಿಸುವ ಭಾವನಾವೆಯನ್ನೇರಿಸಿ ತೇಲಿಸುವ. ಬದುಕಿನ ಪ್ರೀತಿ ತತ್ವವನ್ನು ಧಾರಾಳವಾಗಿ ಹಂಚುವುದಾಗಿದೆ. ಅದನ್ನು ಈ ಭಾಷಾವರ್ಗ ತುಂಬ ಶ್ರದ್ಧೆ. ನಿಷ್ಠೆಗಳಿಂದ ಮಾಡುತ್ತದೆ.

ಸಾಹಿತ್ಯಕ್ಕೆ ಒಂದು ಪ್ರತ್ಯೇಕವಾದ ಭಾಷೆಯಿರಬೇಕೆನ್ನುವುದನ್ನೇ ಬುದ್ಧಿಪೂರ್ವಕ ಒತ್ತಟ್ಟಿಗಿರಿಸುವ ಪ್ರವೃತ್ತಿಗೂ ಇಲ್ಲಿ ಎಡೆ ದೊರೆತಿದೆ. 'ನಾನು ಉಸಿರಾಡುತ್ತಿದ್ದೇನೆ' 'ಇದು ನನ್ನ ಕೈ' ಎಂದಷ್ಟೇ ಸರಾಗವಾಗಿ. ಅಧಿಕೃತವಾಗಿ ಈ ಭಾಷೆಯು ಸುರುಳಿ ಬಿಡಿಸಿಕೊಳ್ಳುತ್ತ ಹೋಗುತ್ತದೆ. ಈ ಭಾಷಾ ವಿಧಾನವು ಸ್ವಭಾವೋಕ್ತಿಯೇ ರೂಪಕ. ಪ್ರತಿಮೆ. ಪ್ರತೀಕಗಳಾಗುವ ವೈಚಿತ್ರ್ಯಕ್ಕೆ ಲಕ್ಷ್ಯವಾಗುತ್ತದೆ. ಎಂದರೆ. ಭಾಷೆಯ ಕಲಾತ್ಮಕತೆಯ ಶೋಧಕ್ಕೆ ಹೊರಡದೆಯೂ ಇದು ಇಚ್ಛಿತ ಪರಿಣಾಮವನ್ನುಂಟುಮಾಡುತ್ತದೆ. ಇದು ಕುವೆಂಪು ಅಥವಾ ಭೈರಪ್ಪ ಮತ್ತು ಕಾರಂತರು ಬಳಸುವ ಭಾಷೆಗಳಲ್ಲಿರುವ ಅಂತರ. ನಮ್ಮ ಲಲಿತಪ್ರಬಂಧಕಾರರು ಈ ಎರಡೂ ಪ್ರಕಾರಗಳನ್ನು ಚೆನ್ನಾಗಿ ದುಡಿಸಿಕೊಂಡಿದ್ದಾರೆ. ಕಿಶೋರಿಯೊಬ್ಬಳ ಅಳುವನ್ನು 'ದೊಡ್ಡ ಮುತ್ತಿನ ಹನಿಗಳಂಥ ಕಣ್ಣೀರ ಕೋಡಿ. ಕೆಂಪೇರಿದ ಗಲ್ಲ, ಕಂಪಿಸುತ್ತಿರುವ ತುಟಿಗಳು' ಎಂದೆಲ್ಲ ವರ್ಣಿಸಿದರೂ 'ಅವಳು ಅತ್ತಳು' ಎಂದು ಹೇಳಿ ಮುಗಿಸಿದರೂ ಒಂದೇ ಎನಿಸಬಹುದು. ಆದರೆ ಸಾಂದರ್ಭಿಕವಾಗಿ ಸೂಕ್ಷ್ಮವಾದ. ಕುಸುರಿ ಕೆಲಸದ ಶಬ್ದಚಿತ್ರವೊಂದು ಭಾವಕೋಶದೊಳಗೆ ನೆಟ್ಟು ನಿಲ್ಲುವ ಪರಿಗೂ. ತಾತ್ಕಾಲಿಕವಾದ ಬೋಧೆಯನ್ನು ನೀಡುತ್ತ ಮಾಡುವ ಪರಿಣಾಮ ಸಾಧನೆಗೂ ಒಂದೇ ಮಟ್ಟ ಎನ್ನುವಂತಿಲ್ಲ.

ಸತ್ಯಕಾಮರಂಥ ಸಾಹಿತಿಗಳು ಅವಲಂಬಿಸುವ ಆನುಭಾವಿಕ ನೆಲೆಗಳನ್ನು ಸಂವಹಿಸುವ ಭಾಷೆಯು ಇನ್ನೊಂದು ಮಾದರಿಯನ್ನು ಕಟ್ಟುತ್ತದೆ. ಹೀಗೇ ಪಠ್ಯವೊಂದರ ಒಳಗೆ ಸಂವಾದಕ್ಕೆ ಹೊರಡುವ (ಪ್ರಸಿದ್ಧಾರ್ಥದ ಸಂಭಾಷಣೆಯಲ್ಲ!) ಭಾಷಾಪ್ರಯೋಗವನ್ನೂ ಇಲ್ಲಿ ಗಮನಿಸಬಹುದು. ಇದನ್ನು ಪರ್ಯಾಯವಾಗಿ. 'ಮೌನಭಾಷೆ' ಅಥವಾ 'ಮೂಕಸಂವಾದ'

ವೆಂದೂ ಕರೆಯಬಹುದು. ಇದು –ಪು. ತಿ. ನ. ಅವರ ' ಮಲೆದೇಗುಲ ' ಅಥವಾ ಎಚ್. ಎಸ್. ವೆಂಕಟೇಶಮೂರ್ತಿಯವರ ' ಕಂತರಂಗಬೆಟ್ಟದ ರಂಗನಾಥನ ' ಹಾಗೆ !– ಅನ್ಯಮನಃಪ್ರವೇಶ ಮಾಡಿ, ಅಲ್ಲಿಯ ಸಂವೇದನೆಗಳೊಂದಿಗೆ ಸಂಭಾಷಣೆಗೆ ಇಳಿಯುತ್ತ, ಅವುಗಳಿಗೆ ಸ್ವರಪ್ರಸ್ತಾರ ಕಲ್ಪಿಸುವ ವಿಧಾನವನ್ನು ಅನುಸರಿಸುತ್ತದೆ.

ಇದರ ಇನ್ನೊಂದು ಮಗ್ಗುಲಿನಲ್ಲಿ, ಗಟ್ಟಿ ಕವಚದ ಒಳಗೇ ಹುದುಗಿಕೊಳ್ಳುತ್ತ, ಅರ್ಥಶರೀರವನ್ನು ಸುಲಭದಲ್ಲಿ ಪ್ರದರ್ಶಿಸದ ಸಂಕೀರ್ಣ ಭಾಷಾ ಪ್ರಕಾರವಿದೆ. ತೀರಾ ಪ್ರಾದೇಶಿಕ ಗಂಧವನ್ನು ಹೊತ್ತ ಬರೆಹಗಳಿವೆ. ಕೋಟ, ಹವ್ಯಕ ಮುಂತಾದ ಉಪಸಂಸ್ಕೃತಿಗಳ ಭಾಷೆಗಳನ್ನೂ, ಉಪಭಾಷೆಗಳನ್ನೂ ಆಂಶಿಕವಾಗಿ ಅಥವಾ ಪೂರ್ಣ ಪ್ರಮಾಣದಲ್ಲಿ ಬಳಸಿದ ಸಾಹಿತ್ಯವೂ ಸೃಷ್ಟಿಸೌಖ್ಯವನ್ನು ಅನುಭವಿಸಿದೆ. ದೇವನೂರು ಮಹಾದೇವರಂಥವರು ಈ ಮಾದರಿಯ ಭಾಷೆಯ ಎಲ್ಲ ಪದರಗಳನ್ನೂ ಸೋಸಿದ್ದಾರೆ.

ಭಾಷೆ ಭಾವದ ವಾಹಕವೂ ಹೌದು. ಅದಕ್ಕೆ ಪೋಷಕದ್ರವ್ಯವನ್ನು ಪೂರೈಸುವ ಪೌಷ್ಟಿಕಾಂಶಗಳ ಸಂಗ್ರಹಾಲಯವೂ ಹೌದು. ಅದು ಸೀಮಾಂತವಾಗಿರುವಷ್ಟೇ ಸೀಮಾತೀತವೂ ಆಗಿದೆ. ಭಾಷೆಯ ಈ ನೆಲೆಗಳ ಅಧ್ಯಯನಗಳು ವಿಪುಲವಾದ, ವಿಸ್ತಾರವಾದ ಹೊಸ ಹೊಳಹುಗಳ ಪ್ರಸ್ತುತಿಗಾಗಿ ಕಾಯುತ್ತಿವೆ.

● ▼

ಡಾ. ತಾಳ್ತಜೆ ವಸಂತಕುಮಾರ, ೧೨ / ಸಿ - ೩, ಯುನಿವರ್ಸಿಟಿ ಕ್ವಾರ್ಟರ್ಸ್, ವಿದ್ಯಾನಗರಿ ಮುಂಬಯಿ - ೪೦೦ ೦೯೮ ✆ : ೦೨೨ - ೬೫೨೮೮೪೫೫

ಅನುಪಮಾ ನಿರಂಜನ ಅವರ ' ನೆನಪು : ಸಿಹಿ - ಕಹಿ '

ಶಿವಶಂಕರ ಹಿರೇಮಠ ▲ **ಏಹಂಗಮ ದೃಷ್ಟಿ - ೧**

ನಾನು ಹದಿವಯಸ್ಸಿನಲ್ಲಿ ಹಾಯ್‌ಸ್ಕೂಲು ವಿದ್ಯಾರ್ಥಿಯಾಗಿದ್ದಾಗ, ಭೂಗತ ನಿರಂಜನರು ರಂಗರಾವ ತಲಚೇರಕರ ವಕೀಲರ ಕಡೆಗೆ ಬೆಳಗಾವಿಗೆ ಬರುತ್ತಿದ್ದರು. ಆಗಲೇ ಅವರನ್ನು ನೋಡಿದ್ದೆ, ಮಾತನಾಡಿಸಿದ್ದೆ. ಅವರ ಆಕರ್ಷಣೆ ಪ್ರಭಾವಕ್ಕೆ ಒಳಗಾಗಿದ್ದೆ. ನಿರಂಜನರ ಲೇಖನಗಳನ್ನು, ಕಥೆಗಳನ್ನು ಸಾಧನ ಸಂಚಯದ ಬರಹಗಳನ್ನು ಅಂದಿನಿಂದಲೂ ತಪ್ಪದೆ ಓದುತ್ತಿದ್ದೆ. ಹೀಗಾಗಿ ನಿರಂಜನ + ಅನುಪಮಾ ಬರಹ ಮತ್ತು ಜೋಡಿ ನನಗೆ ಮೆಚ್ಚುಗೆಯದಾಗಿತ್ತು. ಸಾಹಿತ್ಯದ ಭಗ್ನಪ್ರೇಮಿಯಾದ ನನ್ನಲ್ಲಿ ' ನೆನಪು : ಸಿಹಿ - ಕಹಿ ' ಓದು ೫೦, ೬೦, ೭೦, ೮೦ ರ ದಶಕಗಳ ಕನ್ನಡ ಸಾಹಿತ್ಯಲೋಕದ ರೋಚಕ ಸ್ಮರಣೆಗಳನ್ನು ಬಡಿದೆಬ್ಬಿಸಿತು.

ಜನಪ್ರಿಯ ವಾರಪತ್ರಿಕೆಯೊಂದರಲ್ಲಿ ಧಾರಾವಾಹಿಯಾಗಿ ಬಂದ ಅನುಪಮಾ ಅವರ ಆತ್ಮಕಥಾನಕವನ್ನು ಒಮ್ಮೆಲೇ ಓದಿದಾಗ ಕಾದಂಬರಿ, ಕಥೆಗಳನ್ನು ಓದಿದ ರಸಾನುಭವವಾಗುತ್ತದೆ. ೩೫ ಅಧ್ಯಾಯಗಳು ಮತ್ತು ಉಪಸಂಹಾರದ ಕೊನೆಯಂಚಿನಲ್ಲಿಯೂ ಸಹ ಸ್ವಕೃತಿ ರಚನೆಗಾಗಿ ವಿವಿದೆಡೆಗಳಲ್ಲಿ ಕಂಡುಂಡ, ಅನುಭವಿಸಿದ ಅನುಪಮಾರ ಜೀವನ ಶ್ರದ್ಧೆಯ ಲವಲವಿಕೆ ಓದುಗರನ್ನು ಸಮ್ಮೋಹನಗೊಳಿಸುತ್ತದೆ. ವೆಂಕಟಲಕ್ಷ್ಮಿ ' ಸಾಧನಾ ' → ಅನುಪಮಾ ನಿರಂಜನ → ಅನುಪಮಾ ಆಗಿ ಬೆಳೆದು ನಿಂತ ಪರಿ ದಟ್ಟವಾಗಿ ನಮ್ಮನ್ನು

ಅವರಿಸಿಕೊಳ್ಳುತ್ತದೆ. ಕತೆಗಾರ್ತಿ ಅನುಪಮಾ ತಮ್ಮ ಪರಿವಾರದ ಜನರು. ಸುತ್ತುಮುತ್ತಲಿನವರು. ಮಿತ್ರವೃಂದ. ಸಾಹಿತಿಗಳ ಬಳಗ ಹೀಗೆ ವಿವರಿಸುತ್ತ ಹೋಗುತ್ತಲೇ ಅವರವರ ವ್ಯಕ್ತಿ ವಿಶೇಷ ಚಿತ್ರಗಳನ್ನು ಅಚ್ಚಳಿಯದಂತೆ ಓದುಗರಲ್ಲಿ ಮೂಡಿಸುತ್ತಾರೆ. ಬಾಲ್ಯದಲ್ಲಿ ಕಂಡ ಮಾಗಡಿಯ ಜಾತ್ರೆಯ ಅನುಭವ 'ಋಣ' ಕಾದಂಬರಿಯಲ್ಲಿ ರಿಣಗುಡಿಸಿತು. ಸೋದರ ಮಾವನ ನೆನಪು 'ಕಣ್ಮಣಿ'ಗೆ ಕಾರಣವಾಯಿತು. ಮಲಪನಹಳ್ಳಿಯ ಶಾತನ ಹಲ್ಕಾ ಮಾತುಗಳ ರಾಶಿ 'ಕೊಳಚೆಕೊಂಪೆಯ ದಾಸಿ' ಪುಸ್ತಕದಲ್ಲಿ ದಾಂಗುಡಿಯೊಡೆಯಿತು... ಹೀಗೆ ಬಾಲ್ಯದಿಂದ ಮೊದಲುಗೊಂಡು ಬಾಳಿನುದ್ದಕ್ಕೂ ಅನುಪಮಾ ತಾವು ನಡೆದ ದಾರಿಯ ಮಣ್ಣಿನ ವಾಸನೆಯನ್ನು ತಮ್ಮ ಕೃತಿಗಳಲ್ಲಿ ಮಕರಂದವಾಗಿಸಿದ್ದಾರೆ. ತಾಯಿಯ ಕಡೆಯಿಂದ ಕಷ್ಟಸಹಿಷ್ಣುತೆ. ಒರಟುತನ. ತಂದೆಯ ಕಡೆಯಿಂದ ವಿದ್ಯಾಭಿಲಾಷೆ. ಶಿಸ್ತು. ಪ್ರಾಮಾಣಿಕತೆಗಳನ್ನು ಮೈಗೂಡಿಸಿಕೊಂಡುದಾಗಿ ಅನುಪಮಾ ಒಪ್ಪಿಕೊಳ್ಳುತ್ತಾರೆ.

ಬಾಲ್ಯದಲ್ಲಿ ಮಾಗಡಿ. ತುಮಕೂರು. ಬೇಲೂರು. ಹೊಸಕೋಟೆ ಮೊದಲಾದ ಊರುಗಳನ್ನು ತಂದೆ ವರ್ಗವಾದಂತೆಲ್ಲ ಸುತ್ತಿದ ಅನುಪಮಾಳ ಸಾಹಿತ್ಯಾಸಕ್ತಿಯನ್ನು ಸ್ನೇಹಿತರು. ಗುರುಬಳಗ ಪೋಷಿಸುತ್ತಾರೆ. ಗೆಳತಿ ಚೂಡಾರತ್ನಗಳೊಡನೆ ಕಥಾಪತ್ರವ್ಯವಹಾರ ಮಾಡಿದ್ದು: 'ನಯನಾ'. 'ಶುಭಾ' ಹೆಸರಿನ ಕೈಬರಹದ ಕಥಾಸಂಕಲನವನ್ನು ಬರೆದದ್ದು: ಆನಂದಮಠ. ನಟಸಾರ್ವಭೌಮ ಇತ್ಯಾದಿ ಕಾದಂಬರಿಗಳನ್ನು ಓದಿದ್ದು: ಮಾಸ್ತಿ, ಅನಕೃ ಅವರುಗಳನ್ನು ಕಂಡಿದ್ದು, ಕನ್ನಡ ವಿಷಯದಲ್ಲಿ ಮೊದಲಿಗಳಾಗಿ ಉತ್ತೀರ್ಣಳಾಗಿದ್ದು. ಬೆಂಗಳೂರಿನ ಕಥಾಸ್ಪರ್ಧೆಯಲ್ಲಿ ೨ ನೇ ಸ್ಥಾನ ಗಳಿಸಿ ೨೦/- ರೂ. ಬಹುಮಾನ ಪಡೆದದ್ದು ಮುಂತಾದುವು ಬೆಳೆವ ಸಿರಿಯನ್ನು ಮೊಳಕೆಯಲ್ಲಿಯೇ ತೋರ್ಪಡಿಸಿದ ಅನುಪಮ ನಿದರ್ಶನಗಳೇ ಆಗಿವೆ.

ಜಾತಿ ವ್ಯವಸ್ಥೆಯ ಸಮಾಜದಲ್ಲಿ ವೈಚಾರಿಕ ದ್ವಂದ್ವಗಳ ಕುಟುಂಬ ಪರಿಸರದಲ್ಲಿ ಅನುಪಮಾರ ಕಾಲೇಜು ಅಧ್ಯಯನ ಬೆಂಗಳೂರಿನಲ್ಲಿ ಪ್ರಾರಂಭಗೊಳ್ಳುತ್ತದೆ. ಮಾನವೀಯ ಭಾವನೆಗಳನ್ನು ವ್ಯಾಸಂಗದ ಸಮಯದಲ್ಲಿ ಮೈಗೂಡಿಸಿಕೊಳ್ಳುತ್ತಿರುವಾಗಲೆ ಭೂಗತರಾಗಿದ್ದ ಕುಳಕುಂದ ಶಿವರಾಯರ ಪರಿಚಯ ಪ್ರಭಾವವಾಗಿ ಅನುಪಮಾ ವ್ಯಕ್ತಿತ್ವಕ್ಕೆ ಮೆರಗು ತರುತ್ತದೆ. ೧೭ ವರ್ಷದ ಸಾಹಿತ್ಯಪ್ರೇಮಿ ತರುಣಿ ಅನುಪಮಾ. 'ಮದುವೆಯಾದರೆ ಇಂಥವರನ್ನೇ ಆಗಬೇಕು' ಎಂದು 'ಸಾಧನಾ' ಶಿವರಾಯರನ್ನು ಹಂಬಲಿಸುತ್ತಾಳೆ. ಸಾಧನ ಸಂಚಯಕ್ಕೆ ಸ್ಫೂರ್ತಿಯನ್ನೊದಗಿಸುತ್ತಾಳೆ. ಡಾಕ್ಟರಾಗಬೇಕು ಎಂಬ ಛಲ. ಸಾಹಿತ್ಯಾಸಕ್ತಿಯ ಮನೋಬಲದೊಂದಿಗೆ ಮೈಸೂರಿನ ಮೆಡಿಕಲ್ ಕಾಲೇಜ್ ಪ್ರವೇಶವನ್ನೂ ಪಡೆಯುತ್ತಾರೆ. ಮೆಡಿಸಿನ್ ಮತ್ತು ಸಾಹಿತ್ಯ ವ್ಯಾಸಂಗ ಮುಂದುವರಿಯುತ್ತದೆ. ವಾಣಿ ಸಂದರ್ಶನ ಬರಹ. ತ್ರಿವೇಣಿ ಸ್ನೇಹ. ಚದುರಂಗರ ಭೇಟಿ: 'ಕಣ್ಮಣಿ'ಗೆ ಅವರ ಮುನ್ನುಡಿ. ಹೀಗೆ ಮೈಸೂರು ಹಾಸ್ಟೆಲ್ ವಾಸವೂ ಅನುಪಮಾರಿಗೆ ಸಾಹಿತ್ಯ ಪ್ರಪಂಚದ ಪ್ರವೇಶದ್ವಾರವಾಗುತ್ತದೆ. ಹಾಮಾನಾ. ಯು. ಆರ್. ಅನಂತಮೂರ್ತಿ. ಕೆ. ವಿ. ಸುಬ್ಬಣ್ಣ. ಗೋಪಾಲಕೃಷ್ಣರಾವ್. ಪಂಚಾಕ್ಷರಿ. ಎಚ್. ಎಸ್. ಪಾರ್ವತಿ ಮೊದಲಾದ ಯುವ ಸಾಹಿತಿಗಳ ಪರಿಚಯವೂ ಆಗುತ್ತದೆ. ತಮ್ಮ ಪ್ರಥಮ ಕಥಾಸಂಕಲನ 'ಕಣ್ಮಣಿ'ಯ ಗೌರವಧನದಿಂದ ಮೆಡಿಕಲ್ ಕಾಲೇಜು ವಿದ್ಯಾರ್ಥಿನಿ ಅನುಪಮಾ ಕೈಗಡಿಯಾರವನ್ನು ಕೊಳ್ಳುತ್ತಾರೆ. ಮುಂದೆ ಅವರ ಕೈ ಹಿಡಿದ ನಿರಂಜನರೇ ಕಣ್ಮಣಿ ಪ್ರಕಾಶಕರೂ ಹೌದು.

ತಮ್ಮನ ಪತ್ರದಿಂದ ಅನುಪಮಾ + ನಿರಂಜನ ಪ್ರೇಮಪ್ರಕರಣ ಮನೆಯವರಿಗೆ ತಿಳಿಯುತ್ತದೆ. ಎಲ್ಲರದೂ ಪ್ರತಿರೋಧವೇ. ಹೆಣ್ಣುಮಕ್ಕಳನ್ನು ಸಮಾನತೆಯಿಂದ ಬೆಳೆಯಿಸಬೇಕು. ಅವರಿಗೆ ವೈಚಾರಿಕ ಸ್ವಾತಂತ್ರ್ಯ ನೀಡಬೇಕೆಂಬ ಆಲೋಚನೆ ಅನುಪಮಾರ ಮನಸ್ಸಿನಾಳದಲ್ಲಿ

ಆವಾಗಲೇ ಮೂಡುತ್ತದೆ. ನಿರಂಜನರ 'ವಿಮೋಚನೆ' ಅದೇ ತಾನೇ ಪ್ರಕಟವಾಗಿತ್ತು. 'ಸಾಹಿತ್ಯ ಮತ್ತು ಕಾಮಪ್ರಚೋದನೆ'ಯು ವಿವಾದ ನಾಡಿನ ಪತ್ರಿಕೆಯಲ್ಲಿ ಬಿರುಗಾಳಿಯನ್ನೆಬ್ಬಿಸಿತ್ತು. ಆಗ ಅನುಪಮಾ ಮೆಡಿಕಲ್ ೪ನೆಯ ವರ್ಷದ ವಿದ್ಯಾರ್ಥಿನಿ. ಅಷ್ಟರಲ್ಲಿ ನಿರಂಜನರ 'ಚಿರಸ್ಮರಣೆ'. 'ಅಭಯ'. 'ರಂಗಮ್ಮನ ವಠಾರ' ಪುಸ್ತಕಗಳೂ ಹೊರಬಂದಿದ್ದವು. ೧೯೫೬ ಫೆಬ್ರುವರಿ ೨ ರಂದು ಕೆಲವೇ ಕೆಲವು ಆತ್ಮೀಯರ ಸಮ್ಮುಖದಲ್ಲಿ ದೂರದ ಊರಿನಲ್ಲಿ ನಿರಂಜನ ಅನುಪಮಾರ ಮದುವೆಯಾಗುತ್ತದೆ.

೧೯೫೬ ರಿಂದ ೧೯೮೫ ರ ವರೆಗಿನ ಅನುಪಮಾ ನಿರಂಜನ ದಂಪತಿ ಸಾಹಿತಿಗಳ ಕಥೆ ಮುಂದಿನ ೨೭ ಅಧ್ಯಾಯಗಳಲ್ಲಿ ಚೆಲ್ಲುವರಿದಿದೆ. ಇದೊಂದು ಆಧುನಿಕ ಕನ್ನಡ ಸಾಹಿತ್ಯದ ಬರವಣಿಗೆ - ಬೆಳವಣಿಗೆಗಳಲ್ಲಿ ನಿರಂಜನ ಅನುಪಮಾ ಕುಟುಂಬದ ಪಾತ್ರ ಮತ್ತು ಸಾಧನೆಯ ಸಂಚಯ: ತಿಳಿವಳಿಕೆ ಮತ್ತು ಪ್ರೀತಿಯ ನೆಲಗಟ್ಟಿನಲ್ಲಿ ಸಮಾನ ಮನಸ್ಕ ದಂಪತಿಗಳು. ಶಿಸ್ತು ಮತ್ತು ಅಚ್ಚುಕಟ್ಟಾದ ದುಡಿಮೆಯ ತುಡಿತ. 'ಬಹುಶಃ ಮದುವೆಯಾದ ಮೇಲೆಯೇ ನನ್ನ ನಡೆವಳಿಕೆ, ಅಭಿರುಚಿ, ಬರವಣಿಗೆ ಇವೆಲ್ಲ ಹಂತಹಂತವಾಗಿ ಬದಲಾವಣೆಗೊಳ್ಳುತ್ತ ಹೋದವು.' 'ಇಂಥ ಪುಣ್ಯಾತ್ಮನ ಕೈ ಹಿಡಿದದ್ದಕ್ಕೆ ಹಿಗ್ಗು: ಹಿಗ್ಗು.' 'ನಿರಂಜನರ ಮನೋಧಾರ್ಡ್ಯ ಮೇಲ್ಮಟ್ಟದ್ದು ಅವರ ಈ ಮನೋವೃತ್ತಿಯೇ ನನ್ನನ್ನು ಲೇಖಕಿಯಾಗಿ ಉಳಿಯುವಂತೆ ಪ್ರೇರೇಪಿಸಿದ ಶಕ್ತಿ.' 'ನೋವುಂಡು ನಗುವುದನ್ನು ನಿರಂಜನ ನನಗೆ ಕಲಿಸಿಕೊಟ್ಟರು' ಮುಂತಾದ ಅನುಪಮಾ ಉಕ್ತಿಗಳಲ್ಲಿ ನಿರಂಜನ ಶಕ್ತಿಯನ್ನೂ ಅನುಪಮ ಪ್ರೀತಿಯನ್ನೂ ಓದುಗ ಕಂಡುಕೊಳ್ಳುತ್ತಾನೆ. ೩೦ ವರ್ಷಗಳ ಸಾಹಿತ್ಯ ರಸಯಾತ್ರೆಯಲ್ಲಿ ದಂಪತಿಗಳು ಅನೇಕ ಹಿರಿ - ಕಿರಿಯ ಸಾಹಿತಿಗಳ ಒಡನಾಟದಲ್ಲಿ ಆದರ ಆತಿಥ್ಯಗಳಲ್ಲಿ ಒಲುಮೆಯ ಆತ್ಮೀಯತೆಯನ್ನು ಕಂಡಿದ್ದಾರೆ. ಬೆಂಗಳೂರಿನ ಅವರ ಮನೆ 'ಕಥೆ' ಹೊಸ ಹೊಸ ಆಲೋಚನೆಗಳ ಪ್ರಯೋಗಗಳ ಒರತೆಯೂ ಆಗಿದೆ.

'ನೆನಪು : ಸಿಹಿ - ಕಹಿ' ಪುಸ್ತಕಪ್ರೇಮಿಯ ಆತ್ಮಕಥಾನಕವಾಗಿರುವದರಿಂದ ಇಲ್ಲಿಯ ಪುಟ ಪುಟಗಳಲ್ಲಿ ಪುಸ್ತಕಾಲಾಪವೇ ಇರುವದು ಸಹಜ. ಅನುಪಮಾ - ನಿರಂಜನ ಕುಟುಂಬದವರ ಜೀವನಾನುಭವಗಳ ಅದಮ್ಯ ಕ್ಷಣಗಳು ಎಲ್ಲಿ ಯಾವಾಗ ಯಾವ ರೂಪದಲ್ಲಿ ಸಾಹಿತ್ಯಿಕವಾಗಿ ಅನಂತರ ಅಭಿವ್ಯಕ್ತಗೊಂಡವು ಎಂಬ ಸೂಚನೆಗಳೂ ನಮಗೆ ಪುಸ್ತಕದ ತುಂಬ ಅಲ್ಲಲ್ಲಿ ಸಿಗುತ್ತವೆ. ಅನುಪಮಾ ಕುಟುಂಬ ಎದುರಿಸಿದ ಅವಘಡಗಳ ಪರಂಪರೆಗಳ ಮಧ್ಯದಲ್ಲಿಯೂ ನಿರಂಜನರ 'ನಿಮಗೆ ಏನಿದೆಯೋ ಅದರಲ್ಲಿಯೇ ತೃಪ್ತಿ ಪಟ್ಟುಕೊಳ್ಳುವದನ್ನು ಕಲಿಯಿರಿ' 'ಸಾಲ ಮಾಡಿರಿ. ತೀರಿಸಿರಿ' ಸೂತ್ರಗಳು ಕುಟುಂಬಕ್ಕೆ ನೆಮ್ಮದಿ ತರುವ ಅರ್ಥಪೂರ್ಣ ಹಿತವಚನಗಳಾಗುತ್ತವೆ. ಕೈ ಮುರಿದುಕೊಂಡರೂ. ಪೆರಲೆಟಿಕ್ ಸ್ಟ್ರೋಕುಗಳಾದರೂ ನಿರಂಜನರ ಜೀವನೋತ್ಸಾಹ ತಗ್ಗುವದಿಲ್ಲ. ದುಡಿಯುವದರಿಂದಲೇ ನಿರಂಜನರ ಆರೋಗ್ಯ ಸುಧಾರಿಸುತ್ತದೆ. ಅವರ ಬದುಕಿಗೊಂದು ಅರ್ಥ ಬರುತ್ತದೆ. ದುಡಿತದ ಹಿರಿಮೆ ಗರಿಮೆಗಳನ್ನು ಕಾಯಕ ನಿಷ್ಠೆಯ ಅದಮ್ಯ ಆತ್ಮಬಲವನ್ನು 'ನೆನಪು : ಸಿಹಿ - ಕಹಿ'ಯ ಅನೇಕ ಸನ್ನಿವೇಶಗಳ ಸರಣಿಗಳು ನಮಗೆ ಖಾತರಿಗೊಳಿಸುತ್ತವೆ. ಧಾರವಾಡದಲ್ಲಿ ಅನುಪಮಾ ಔಷಧದೋಷದಿಂದಾಗಿ ಅಲರ್ಜಿಯ ಮರಣಾಂತಕ ಪ್ರಸಂಗದಲ್ಲಿಯೂ ಧೃತಿಗೆಡದೆ ಮರುಜೀವ ಪಡೆದದ್ದು. ಎರಡು ಬಾರಿ ಕ್ಯಾನ್ಸರ್‌ದಂತಹ ಭೀಕರ ಕಾಯಿಲೆಯ ಕಠಿಣ ಚಿಕಿತ್ಸಾಕ್ರಮಗಳನ್ನು ಎದುರಿಸಿದರೂ ಎಲ್ಲರೂ ಅಚ್ಚರಿಗೊಳ್ಳುವಂತೆ ಚೇತರಿಸಿಕೊಂಡಿದ್ದು. ಜಿಂಕಿ ಸಾವಿನೊಂದಿಗೆ ಹೋರಾಡುತ್ತಿರುವ ನೆರೆಯವರ ನೆರವಿಗಾಗಿ ಗಡಿಬಿಡಿಯಿಂದ ಹೋಗುವಾಗ ಬಿದ್ದು ಆಸ್ಪತ್ರೆಗೆ ದಾಖಲಾದದ್ದು ಮುಂತಾದ ಹಲವಾರು ಪ್ರಸಂಗಗಳು

ಅನುಪಮಾರ ಆತ್ಮವಿಶ್ವಾಸದ ಮಾದರಿಗಳು. ‘ಕಷ್ಟಗಳನ್ನು ಸಂತೋಷದಿಂದ ಎದುರಿಸಬೇಕೆನ್ನುವ ನನ್ನ ಮನೋಭಾವ ಸಂಕಟಗಳನ್ನು ಕ್ಷಣಮಾತ್ರವಾಗಿರಿಸಿತು. ಮಿತ್ರರ ಸ್ನೇಹದ ಋಣ ಹೊತ್ತು ನಾನು ಹೊಸ ಹುಟ್ಟು ಪಡೆದೆ’ ಎಂದು ಒಂದೆಡೆ ಅನುಪಮಾರವರೇ ತಮ್ಮ ಬಗೆಗೆ ಹೇಳಿಕೊಂಡಿದ್ದಾರೆ. ಖ್ಯಾತ ವೈದ್ಯ ಸಾಹಿತಿ ರಾಶಿ ‘ನೀವು ಕಷ್ಟಗಳನ್ನು ಎದುರಿಸೋ ರೀತಿ ಎಲ್ಲರಿಗೂ ಆದರ್ಶವಾಗುವಂಥಾದ್ದು’ ಎಂದು ದಂಪತಿಗಳನ್ನುದ್ದೇಶಿಸಿ ಉದ್ಗರಿಸುತ್ತಾರೆ !

ನಿರಂಜನ - ಅನುಪಮಾ ಕುಟುಂಬಕ್ಕೆ ಅವರ ಮಿತ್ರವರ್ಗ ನೀಡಿದ ಸ್ನೇಹಳ ಸತ್ಕಾರ ಸಹಾಯಗಳ ಅನುಪಮಾ - ನೆನಪುಗಳು ಓದುಗರಿಗೂ ಮುದ ನೀಡುವ ಮಾತ್ರೆಗಳೇ ಆಗಿವೆ. ನಿರಂಜನರೊಂದಿಗೆ ಅನುಪಮಾ ಮಂಗಳೂರು. ಕಾಸರಗೋಡು. ಉಡುಪಿ. ಮುಂಬಯಿ ಹೀಗೆ ಎಲ್ಲಿಗೆ ಹೋದರೂ ಎಲ್ಲ ಕಡೆಗೂ ಸಾಹಿತ್ತಿಕ ಸಭೆ ಸಮಾರಂಭಗಳು ಮತ್ತು ಸಾಹಿತ್ಯಜ್ಞರ ಒಡನಾಟ. ಅಂದಿನ ಸಾರಸ್ವತ ಪ್ರಪಂಚದ ಒಳತೋಟಿಗಳ ಅರಿವನ್ನು ಈ ಸನ್ನಿವೇಶಗಳು ನಮಗೆ ನೀಡುತ್ತವೆ. ಅನುಪಮಾ ದಂಪತಿಗಳನ್ನು ಕನ್ನಡ ಜನತೆ ಅಂದೆಷ್ಟು ಅಕ್ಕರೆಯಿಂದ ಕಂಡರೆಂಬುದನ್ನು ಲೇಖಿಕಿ ಇಲ್ಲಿ ದಾಖಲಿಸುತ್ತಾರೆ. ಹೆಣ್ಣಿನ ಜೀವನದ ವಿಶಿಷ್ಟ ಪ್ರಸಂಗಗಳಾದ ಮದುವೆ. ಬಸಿರು. ಬಯಕೆ. ಹೆರಿಗೆ. ಬಾಣಂತಿತನ. ಮಕ್ಕಳ ಆರೈಕೆ. ಎಳೆಯರ ಶಾಲೆ. ಕಾಯಿಲೆ ಮೊದಲಾದ ಸಹಜ ಕೌಟುಂಬಿಕ ಪ್ರಸಂಗಗಳನ್ನು ದುಡಿಯುವ ಮಹಿಳೆ ಅನುಪಮಾ ಸ್ನೇಹಮಯ ಸಹಕಾರದಿಂದ ಹೇಗೆ ನಿಭಾಯಿಸಿದರೆಂಬುದರ ನಿರೂಪಣೆ ಹೃದಯಂಗಮವಾಗಿದೆ. ಮಾನವೀಯ ಸ್ಪಂದನ ಮತ್ತು ಆತ್ಮೀಯತೆಯ ಸಂಸ್ಕಾರಗಳು ಮನಸ್ಸುಗಳನ್ನು ಕುಟುಂಬ ಕುಟುಂಬಗಳನ್ನು ಬೆಸೆಯುವ ಅಸದೃಶ ಅನುಭವ. ಖುಶಿಯನ್ನು ನಾವಿಲ್ಲಿ ಕಾಣುತ್ತೇವೆ. ಜೀವನ ಪ್ರೀತಿಯನ್ನು ಮೈತ್ರಿ ವಿಶ್ವಾಸಗಳನ್ನು ತೊಟಕಿಸುವ ಇಂತಹ ಆತ್ಮಕಥಾನಕಗಳು ಕನ್ನಡದಲ್ಲಿ ಹೆಚ್ಚಬೇಕು.

ತಾಯಿ ಮಗು. ಸ್ವಾಸ್ಥ್ಯ. ಶಿಶುವೈದ್ಯದೀಪಿಕೆ. ಹದಿಹರೆಯ. ಯೌವನ. ಆರೋಗ್ಯ ಭಾಗ್ಯಕ್ಕೆ ವ್ಯಾಯಾಮ ಮುಂತಾದ ಅನುಪಮಾರ ಅಂಕಣ ಬರಹಗಳು ಮುಂದೆ ಪುಸ್ತಕ ರೂಪದಲ್ಲಿಯೂ ಬಂದವು. ‘ತಾಯಿ ಮಗು’ ಪುಸ್ತಕ ಇಂದಿಗೂ ಜನಪ್ರಿಯ ಸಾಹಿತ್ಯಕೃತಿ. ‘ಕರ್ತೃವಿನ ನಿರೀಕ್ಷೆಗೂ ಮೀರಿ ಬೆಳೆದು ನಿಂತ ಪುಸ್ತಕ’ ಎಂದು ಅನುಪಮಾ ‘ತಾಯಿ ಮಗು’ವಿನ ಬಗೆಗೆ ಸಂತೋಷಿಸಿದ್ದಾರೆ. ಅವರ ಮತ್ತೊಂದು ಪುಸ್ತಕ ‘ದಾಂಪತ್ಯ ದೀಪಿಕೆ’ ಪ್ರತಿ ವರ್ಷ ಮುದ್ರಣ ಭಾಗ್ಯ ಪಡೆದ ಪುಸ್ತಕ. ಅನುಪಮಾರ ‘ದಿನಕ್ಕೊಂದು ಕತೆ’ಯೂ ಅಚ್ಚುಕಟ್ಟಾದ ಮುದ್ರಣದ ಸುಭದ್ರ ಕೃತಿ. ಅವರ ಕಾದಂಬರಿ ಕಥೆ ಪ್ರವಾಸ ಕಥನಗಳ ಪ್ರಾಸಂಗಿಕ ಪ್ರಸ್ತಾಪವೂ ಇಲ್ಲಿದೆ. ಪ್ರಸ್ತುತ ಪುಸ್ತಕ ಅನುಪಮಾರ ಆತ್ಮಕಥಾನಕ ಎಂದ ಮೇಲೆ ಅನುಪಮಾ ಮತ್ತು ಅವರ ಕುಟುಂಬದ ನಿರಂಜನ - ತೇಜಸ್ವಿನಿ - ಸೀಮಂತಿನಿಯರ ಸಾಧನೆಯ ಪ್ರಸ್ತಾಪ ಇಲ್ಲಿ ಇಣುಕುವದು ಸಹಜ. ಈ ಪ್ರಸ್ತಾವನೆ ವರದಿಯಾಗದೆ ಒಂದು ಸಾಹಿತ್ಯಿಕ ಸಲ್ಲಾಪ ಎಂದೆನಿಸುವದು ಈ ಕೃತಿಯ ವಿಶೇಷತೆ. ಯಾವುದೇ ಜಾತಿ. ಪಂಗಡ. ಗುಂಪು. ಬಳಗಗಳಿಗೆ ಸೇರದ ಪುರೋಗಾಮೀ ವಿಚಾರಧಾರೆಯ ಸಹೃದಯಿ ಅನುಪಮಾರ ಸ್ನೇಹಸಂಕುಲ ಅಪಾರ. ಈ ಕಾರಣಕ್ಕೆಂದೇ ಅವರು ಹೆಸರುಗಳನ್ನು ಇಲ್ಲಿ ಪ್ರಸ್ತಾವಿಸಿ ಈ ಸ್ನೇಹಿಗಳ ನೆನಪಿನೊಂದಿಗೆ ನವಿರಾದ ಅನ್ಯೋನ್ಯ ಪ್ರೇಮಳ ಭಾವನೆಗಳ ತಂಗಾಳಿಯನ್ನು ಪುಸ್ತಕದುದ್ದಕ್ಕೂ ಸುಳಿದಾಡಿಸಿದಂತೆ ಭಾಸವಾಗುತ್ತದೆ.

ಸಾಹಿತ್ಯ ಸಮ್ಮೇಳನಗಳೊಂದಿಗೆ (ಕಾರವಾರ. ಮುಂಬಯಿ. ಚಿಕ್ಕಮಗಳೂರು) ವೈದ್ಯಕೀಯ ಸಾಹಿತ್ಯ ಸಮ್ಮೇಳನ (ಬೆಳಗಾವಿ). ದುಡಿಯುವ ಮಹಿಳೆಯರ ಸಮ್ಮೇಳನ (ಬೆಂಗಳೂರು). ಅಂತರ್‌ರಾಷ್ಟ್ರೀಯ ಮಹಿಳಾ ಸಮ್ಮೇಳನ (ಬರ್ಲಿನ್). ಪ್ರಗತಿ ಪಂಥದ ಸಭೆಗಳು (ದಾವಣಗೆರೆ- ಪುತ್ತೂರು - ಮಹಾಲಿಂಗಪುರ). ಸಾಯಿಬಾಬಾ ಶೋಧನಾ ಸಮಿತಿ.

ಲೇಖಕಿಯರ ಕೂಟಗಳು (ಬೆಂಗಳೂರು). ಬಂಡಾಯ ಸಾಹಿತ್ಯ ಸಮ್ಮೇಳನ. ಅ. ಕ. ಲೇಖಕಿಯರ ಸಮ್ಮೇಳನ. ಯುರೋ ಅಮೆರಿಕಾ ಪ್ರವಾಸಗಳ ದರುಶನವೂ ನಮಗಿಲ್ಲಿ ಆಗುತ್ತದೆ.

' ಅಧ್ಯಯನ ಏಕಾಗ್ರತೆಗಳಿಂದ ಏನನ್ನಾದರೂ ಸಾಧಿಸಬಹುದೆಂದು ತೋರಿಸುತ್ತಿರುವ ಸ್ಫೂರ್ತಿಯ ಸೆಲೆ... ಅನನ್ಯವಾಗಿ ಪ್ರೀತಿಸುವ ಗಂಡ. ಮೇಧಾವಿ ಮಕ್ಕಳು. ಒಳ್ಳೆಯ ವೈದ್ಯಕೀಯ ಪ್ರ್ಯಾಕ್ಟೀಸ್. ಸಾಹಿತ್ಯದಲ್ಲಿಯೂ ಸಾಕಷ್ಟು ಹೆಸರು... ಹೆಂಗುಸೊಬ್ಬಳಿಗೆ ಇನ್ನೇನು ಬೇಕು ? ' ಎಂಬ ಸಂತೃಪ್ತ ಜೀವನ ಬದುಕಿದ ಅನುಪಮಾ ಸ್ಮರಣೆ ಹೃದಯವನ್ನು ಮಿಡಿಯುತ್ತದೆ. ಸಾಗರದ ವಿಶಾಲತೆಯನ್ನು ಅರಸಿ ನೆಲಸಿದ ಧಾರವಾಡವನ್ನು ಬಿಟ್ಟು ನಿರಂಜನ + ಅನುಪಮಾರು ಮಹಾನಗರ ಬೆಂಗಳೂರಿನಲ್ಲಿ ಲೀನವಾದರು. ತೇಜಸ್ವಿನಿ ಧಾರವಾಡದಲ್ಲಿ ಹುಟ್ಟಿದಳು. ಆದರೆ ತೇಜಸ್ವಿನಿ ಲೇಖಕಿ ಅನುಪಮಾ ನಮ್ಮವರು. ಕನ್ನಡದವರು. ಮಾನವೀಯ ಭಾವನೆಗಳನ್ನೇ ಅನುಗಾಲವೂ ಹರಿಸಿದವರು ಎಂದುಕೊಳ್ಳುತ್ತಲೇ ಈ ನೆನಪುಗಳಲ್ಲಿ ಸಿಹಿ ಮಾತ್ರವಿದೆ. (ಮಾಯ್‌ನಸ್ ಕಹಿ ಪುಸ್ತಕ) ಎಂದುಕೊಳ್ಳುತ್ತೇವೆ. ಸ್ನೇಹಿತೆಯೊಬ್ಬರು ಒಂದು ಅಧ್ಯಾಯ ಹೆಂಡತಿ ಒಂದು ಅಧ್ಯಾಯ ಗಂಡ ಹೀಗೆ ದಂಪತಿ ಆತ್ಮಕಥಾಕಥನವನ್ನು ಬರೆಯಲು ಅನುಪಮಾಗೆ ಸೂಚಿಸಿದ್ದರು. ಅದು ಫಲಿಸಿದ್ದರೆ ಅದೊಂದು ಕನ್ನಡದ ಅಪೂರ್ವ ಯುಗಳ ಆತ್ಮಕಥಾಗ್ರಂಥವಾಗುತ್ತಿತ್ತು. ಮತ್ತೊಂದು ಮಧುರ ಮತ್ತು ತಿಳಿವಳಿಕೆಯ ಸಾಧನಾ ಸಂಚಯ - ೨ ಆಗುತ್ತಿತ್ತೇನೊ ?

' ನಾಲ್ಕು ಜನರಿಗೆ ಉಪಯುಕ್ತವಾಗುವ ಹಾಗೆ ಬದುಕಬೇಕು. ಆ ಕೆಲಸವನ್ನು ನನ್ನ ವೈದ್ಯಕೀಯ ಸೇವೆಯಿಂದ ಮಾಡಬಹುದು... ನನ್ನ ಬರಹದಿಂದ ಸಾಧಿಸಬಹುದು ಎಂದು ತೋರಿತು. ' ಎಂದು ವೃತ್ತಿಯಿಂದ ವೈದ್ಯಳಾಗಿ ಪ್ರವೃತ್ತಿಯಿಂದ ಸಾಹಿತಿಯಾಗಿ ಸಾಧನೆಯಿಂದ ಅಸದೃಶ, ಅನುಪಮ ಮಾನವೀಯತೆಯನ್ನು ಮೆರೆದ ಅನುಪಮಾ ಅವರ ನೆನಪು -ಪುಸ್ತಕ ಓದುಗರಿಗೆ ನೆಮ್ಮದಿ ನೀಡುವ ನಿರಂಜನ ಗೀತ.

● ▼

ಶಿವಶಂಕರ ಹಿರೇಮಠ, ವಿಮುಕ್ತ, ೧೩, ಮಂಜುನಾಥ ಕಾಲನಿ. ೨ನೇ ಮುಖ್ಯ ರಸ್ತೆ, ಶಿವಗಿರಿ, ಧಾರವಾಡ - ೫೮೦ ೦೦೭ ✆ : ೦೮೩೬ - ೭೭೮೦೫೨

ಅನುಪಮಾ ನಿರಂಜನ ಅವರ ' ನೆನಪು : ಸಿಹಿ - ಕಹಿ '

ಅಪ್ಪಾಸಾಹೇಬ ಸನದಿ ▲ ವಿಹಂಗಮ ದೃಷ್ಟಿ - ೨

' ನೆನಪು : ಸಿಹಿ - ಕಹಿ ' ಅನುಪಮಾ ನಿರಂಜನ ಅವರ ಆತ್ಮಕಥೆ. ಜೀವನ ಕಥೆಯನ್ನು ಬರೆಯಲು ಹಲವಾರು ಪ್ರೇರಣೆಗಳು. ಲೇಖಕಿಗೆ ಬರೆಯಬೇಕೆನಿಸಿದ್ದು ವಿಶಿಷ್ಟ ಸಂದರ್ಭದಲ್ಲಿ. ಮೂರನೆಯ ಬಾರಿ ಶಸ್ತ್ರಕ್ರಿಯೆಗೊಳಗಾಗಿ. ಮಾನಸಿಕವಾಗಿ ಮತ್ತು ದೈಹಿಕವಾಗಿ ಜರ್ಜರಿತರಾದಾಗ ನಿರಂಜನರ ಮತ್ತು ಮಕ್ಕಳ ಪ್ರೀತಿ - ವಿಶ್ವಾಸಗಳ ಒತ್ತಾಸೆ ಜೀವನ - ಛಲವನ್ನು ಚಿಮ್ಮಿಸುತ್ತದೆ. ಅನಾರೋಗ್ಯದಿಂದ ವೈದ್ಯಕೀಯ ವೃತ್ತಿ ನಿಂತು ಬದುಕು ಖಾಲಿ ಎನಿಸಿದ ಕ್ಷಣಗಳಲ್ಲಿ ಬರವಣಿಗೆ ನಿರಂತರ ಸಂಗಾತಿಯಾಗಿದ್ದು ನೆನಪಾಗಿ. ' ಏನಾದರೂ ಬರೆಯಲಾರಂಭಿಸಬೇಕು. ಬರೆಯದಿದ್ದರೆ ನಾನು ಉಳಿಯುವುದಿಲ್ಲ ' ಎನಿಸಿದಾಗ ಮೂಡಿದ್ದು ಈ ಸ್ವಬದುಕಿನ ದಾಖಲೆ. ತಮ್ಮ ವೃತ್ತಿಯಿಂದ ಮತ್ತು ಬರಹದಿಂದ ಆದಷ್ಟು ಜನಕ್ಕೆ

ನೆರವಾಗಬೇಕು ಆಗಲೇ ತಾನು ಬದುಕಿದ್ದು ಸಾರ್ಥಕ ಎಂದು ನಂಬಿದ್ದ ಲೇಖಕಿ ಈ ಕೃತಿಯ ಉದ್ದೇಶವನ್ನು ಸಂಕೇತಿಸುತ್ತಾರೆ. ಅದಮ್ಯ ಜೀವ-ಛಲವನ್ನು. ಗುರುತರ ಸಂಕಟಗಳನ್ನು ಧೈರ್ಯದಿಂದ ಎದುರಿಸುವ ಎದೆಗಾರಿಕೆಯನ್ನು ಈ ಕೃತಿ ಪ್ರೇರೇಪಿಸುತ್ತದೆ.

ಅನುಪಮಾ + ನಿರಂಜನರದು ಅಪರೂಪದ ದಾಂಪತ್ಯ. ಹಲವು ವಿಧಗಳಲ್ಲಿ ದಾಖಲೆಗಳನ್ನು ನಿರ್ಮಿಸಿದ್ದು. ಈ ದಾಂಪತ್ಯಕ್ಕೆ ಹೋಲಿಕೆ ಇರಲಾರದು. ಅವರದು ಪ್ರೇಮವಿವಾಹ. ಹದಿವಯದಲ್ಲಿ ಆಕಸ್ಮಿಕವಾಗಿ ಹುಟ್ಟಿದ ಪ್ರೇಮಕ್ಕೆ ಕಾರಣವಾದದ್ದು ಇಬ್ಬರ ಸಮಾನ ಆಸಕ್ತಿಯಾದ ಸಾಹಿತ್ಯ. ಅನುಪಮಾಗೆ ಸಾಹಿತ್ಯದ ಹುಚ್ಚಿನೊಂದಿಗೆ ಮೆಡಿಕಲ್ ಮಾಡುವ ಕನಸು. ನಿರಂಜನರದು ಕಾಲೇಜಿಗೂ ಹೋಗದ ಪತ್ರಿಕೋದ್ಯಮ. ಸಾಹಿತ್ಯದ ಬರವಣಿಗೆಯನ್ನೇ ನೆಚ್ಚಿದ. ಖಚಿತ ಆದಾಯ ಮೂಲವಿಲ್ಲದ ಬದುಕು. ಜಾತಿಭೇಧ. ತಂದೆ - ತಾಯಿ. ಬಂಧುಗಳು. ಸಮಾಜದ ವಿರೋಧದ ಹೆದರಿಕೆ ಇದ್ದರೂ ಜೀವನಸಂಗಾತಿಗಳಾಗುವ ನಿರ್ಧಾರ. ನಾಲ್ಕು ವರ್ಷ ಕಾದ ನಿರಂಜನ ಮೆಡಿಕಲ್ ಮಾಡಲು ಸಹಕರಿಸಿದ ನಂತರ ರಹಸ್ಯಮದುವೆ. ನಿರೀಕ್ಷಿಸಿದಂತೆ ಎಲ್ಲರ ಬಹಿಷ್ಕಾರ. ಆತ್ಮೀಯರ ಭೀಮರಕ್ಷೆ.

ಮೆಡಿಕಲ್ ನಂತರ ವೈದ್ಯಕೀಯ ವೃತ್ತಿಗಾಗಿ ಧಾರವಾಡದ ಆಯ್ಕೆ. ಬೆಂಗಳೂರಿನ ಬಹಿಷ್ಕಾರದ ಕಿರುಕಳದಿಂದ ಬಚಾವಾಗಲೂ ಉಪಾಯ. ನಿರಂಜನರಿಗೆ ನಿಶ್ಚಿತ ಆದಾಯವಿಲ್ಲ. ಆರ್ಥಿಕ ನಿರ್ವಹಣೆಯ ಹೆಚ್ಚು ಜವಾಬ್ದಾರಿ ನಿರುಪಮಾಗೆ. ಕಠಿಣ ಹೋರಾಟದ ಬದುಕು. ವಿಚಲಿತರಾಗದ ಲೇಖಕಿಗೆ ಕಠಿಣ ಪರಿಶ್ರಮದಿಂದ ಹೊಸ ಊರಲ್ಲಿ ಒಳ್ಳೆಯ ವೈದ್ಯೆ ಎಂದು ಪ್ರಸಿದ್ಧಿ. ಧಾರವಾಡದ ಜಾತಿ - ನೀತಿಗಳ ಸಂಕೀರ್ಣತೆಯಿಂದ ಉಸಿರುಕಟ್ಟಿ ಮತ್ತೆ ಬೆಂಗಳೂರಿಗೆ. ವಿಜಯನಗರದಲ್ಲಿ ವಾಸ. ಕ್ಲಿನಿಕ್ ಆರಂಭ. ಈಗ ವೈದ್ಯೆಯಾಗಿ ಲೇಖಕಿಯಾಗಿ ಅನುಪಮಾಗೆ ಶೀಘ್ರವೇ ಒಳ್ಳೆಯ ಹೆಸರು. ಒಳ್ಳೆಯ ಪ್ರ್ಯಾಕ್ಟೀಸ್. ಹತ್ತಾರು ಕೃತಿಗಳು. ಧಾರವಾಡದಲ್ಲಿ ಮೌನವಾಗಿದ್ದ ನಿರಂಜನ ಲೇಖಕನಿಗೆ ಮತ್ತೆ ಮಿಂಚಿನ ಗತಿ. ಇಬ್ಬರಿಂದಲೂ ಅಪಾರ ಸಾಹಿತ್ಯಸೃಷ್ಟಿ. ಸಮಾಜಸೇವೆ. ಹತ್ತಾರು ಶ್ರೇಷ್ಠ ಕೃತಿಗಳ ರಚನೆ. ಏಳು ಸಂಪುಟಗಳ ಕಿರಿಯ ವಿಶ್ವಕೋಶ 'ಜ್ಞಾನಗಂಗೋತ್ರಿ'. ಸರಕಾರದಿಂದ ಸಾಲ ಪಡೆದು ಐದೇ ವರ್ಷಗಳಲ್ಲಿ ಯೋಜನೆ ಪೂರೈಸಿ ಹೊತ್ತಿಗೆ ಸಾಲ ಹಿಂದಿರುಗಿಸಿದ ಧೀಮಂತಿಕೆ. ಮೊದಲ ಸಂಪುಟ ಬಂದೊಡನೆ ಪಾರ್ಶ್ವವಾಯುವಿನಂಥ ಕಾಯಿಲೆಗೆ ಬಲಿಯಾದರೂ ಉಳಿದ ಸಂಪುಟಗಳನ್ನು ಅವಿರತ ದುಡಿಮೆಯಿಂದ ಸಕಾಲದಲ್ಲಿ ನಿರಂಜನರು ಪೂರ್ಣಗೊಳಿಸಿದ್ದು ಅಕಲ್ಪನೀಯ. ಇಂಥದ್ದೇ ಇನ್ನೊಂದು ಸಾಧನೆ ಅದಕ್ಕಿಂತ ಕಠಿಣ ಸ್ಥಿತಿಯಲ್ಲಿ ಪತಿಪತ್ನಿಯರಿಬ್ಬರಿಗೂ ಆದ ಗಂಭೀರ ಕಾಯಿಲೆಗಳಲ್ಲೂ ೨೫ ಸಂಪುಟಗಳ ವಿಶ್ವಕಥಾಕೋಶ ಯೋಜನೆಯನ್ನು ಅವಧಿಯಲ್ಲಿಯೇ ಪೂರೈಸಿದ್ದು. ಬೆಂಗಳೂರಿನ ಬದುಕಿನಲ್ಲಿ ಅವರಿಬ್ಬರೂ ಸಾಧಿಸಿದ್ದುದು ಬಹಳ. ಅನುಭವಿಸಿದ ಕಷ್ಟ - ಸಂಕಟ. ನೋವುಗಳು ಸೀಮಾತೀತ. ಈ ಕಾಲು ಶತಮಾನದ ಬದುಕಿನ ಸುಖದುಃಖಗಳ ದಾಖಲೆ ಈ ಮರ್ಮಸ್ಪರ್ಶಿ ಕೃತಿ.

ತೊಂದರೆ. ಸಂಕಟಗಳು ಬದುಕಿಗೆ ಸಹಜ. ಆದರೆ ನಿರಂಜನ + ಅನುಪಮಾ ಅನುಭವಿಸಿದ್ದು ತೊಂದರೆಗಳನ್ನಲ್ಲ. ರಾಶಿ ರಾಶಿ ಸಂಕಟಗಳನ್ನು. ಧಾರವಾಡದಲ್ಲಿ ಸಣ್ಣ ಜ್ವರಕ್ಕೆ ಚುಚ್ಚಿದ್ದ ಪೆನ್ಸಿಲಿನ್ ಅನುಪಮಾರ ಜೀವನವನ್ನೇ ಅಳಿಸಿ ಹಾಕಲಿತ್ತು. ಬೆಂಗಳೂರಿನಲ್ಲಿ ಅನಿರೀಕ್ಷಿತವಾಗಿ ಗರ್ಭಕೋಶದ ಶಸ್ತ್ರಕ್ರಿಯೆ. ಮಧ್ಯ ವಯಸ್ಸಿನಲ್ಲಿಯೇ ನಿರಂಜನರಿಗೆ ಅರ್ಧಾಂಗವಾಯು ಆಘಾತ. ಮದುವೆಯಾದ ೧೨ - ೧೩ ವರ್ಷಗಳಲ್ಲಿ ಇದ್ದಕ್ಕಿದ್ದಂತೆ ಸ್ತನ ಕ್ಯಾನ್ಸರ್. ಗಂಭೀರ ಶಸ್ತ್ರಕ್ರಿಯೆ. ನಂತರ ಮುಂಬಯಿಯಲ್ಲಿ ರೇಡಿಯೇಶನ್ ಚಿಕಿತ್ಸೆ.

ತುಂಬ ಸಂಕಟವನ್ನುಂಟುಮಾಡುವ ಚುಚ್ಚುಮದ್ದುಗಳ ಹಿಂಸೆ. ಉರಿ ಹತ್ತಿದ ಮಹಿಳೆಯನ್ನು ಉಳಿಸಹೋಗಿ ಜಾರಿಬಿದ್ದು ತಿಂಗಳುಗಟ್ಟಲೆ ಒದ್ದಾಟ. ಕೆಲ ದಿನಗಳಲ್ಲಿಯೇ ಹೊಟ್ಟೆಯಲ್ಲಿ ಕ್ಯಾನ್ಸರ್ ಗಡ್ಡೆ. ಮೂರನೆಯ ಬಾರಿ ಶಸ್ತ್ರಚಿಕಿತ್ಸೆ. ಇಂಥ ಹೋರಾಟದಲ್ಲಿಯೇ ನಿರಂಜನರಿಗೆ ಎರಡನೆಯ ಸಲ ಅರ್ಧಾಂಗವಾಯು ಆಘಾತ. ಯಾರನ್ನಾದರೂ ಕೈಚೆಲ್ಲಿಸಿ ಬಿಡುವಂಥ ಸಂಕಟಗಳು. ಡಾ. ಶಿವರಾಂ ಸರಿಯಾಗಿ ಹೇಳುವಂತೆ ಕಾಯಿಲೆಯ ಹೆಸರು ಕೇಳಿಯೇ ಬಹುಜನ ಸಾಯುವಾಗ ಮತ್ತೆ ಮತ್ತೆ ಬದುಕಿನ ಛಲ ಚಿಗುರಿದ ಅಪರೂಪದ ದಂಪತಿಗಳು ನಿರಂಜನ + ಅನುಪಮಾ. ಕಾಯಿಲೆಯೊಂದಿಗೆ ಘೋರಾಡುತ್ತಲೇ ಸಾಹಿತ್ಯಸೇವೆ. ಸಮಾಜಸೇವೆ. ಎಲ್ಲೆಡೆ ಅಪೂರ್ವ ಸಾಧನೆ. ಯಾರಾದರೂ ಬೆರಗುಗೊಳ್ಳಬೇಕು.

ಅವರ ದಾಂಪತ್ಯ ಇನ್ನೂ ಹಲವು ದೃಷ್ಟಿಯಿಂದ ಅನುಪಮ. ಪತಿ ಪತ್ನಿ ಇಬ್ಬರಿಗೂ ಪೂರ್ಣ ವಿಚಾರಸ್ವಾತಂತ್ರ್ಯ. ತಮಗೆ ಸರಿ ಎನಿಸಿದ್ದನ್ನು ಹೇಳುವ. ಮಾಡುವ ಪೂರ್ಣ ಅಧಿಕಾರ. ಇದೇ ಸ್ವಾತಂತ್ರ್ಯ ಮಕ್ಕಳಾದ ತೇಜಸ್ವಿನಿ ಮತ್ತು ಸೀಮಾಗೆ. ವೈಯಕ್ತಿಕ ಬದುಕು. ಅಭಿರುಚಿ. ಆಯ್ಕೆ ಪ್ರತಿಯೊಂದರಲ್ಲಿ ಎಲ್ಲರೂ ಸ್ವತಂತ್ರರು. ಶಿಸ್ತು. ಅಚ್ಚುಕಟ್ಟುತನ. ನಿಯಮಿತತನ. ಪ್ರಾಮಾಣಿಕತೆ. ಪರಿಶ್ರಮ. ಪ್ರೇಮ. ಸರಳತೆ. ನಿರಾಡಂಬರತೆ. ಮಾನವಪ್ರೇಮ ಕುಟುಂಬದ ಎಲ್ಲರ ಸಮಾನ ಗುಣಗಳು. ಬೆಟ್ಟದಂಥ ಸಂಕಟಗಳು ಬಂದರೂ ಇತರರ ಕನಿಕರವನ್ನು ಅಪೇಕ್ಷಿಸದ ಸ್ವಾಭಿಮಾನಿಗಳು. ಸಮಾಜದ ಜನರೊಡನೆ. ಸ್ನೇಹಿತರೊಡನೆ. ಸಂಘಟನೆಗಳೊಡನೆ ಬೆರೆತು ನಿಷ್ಠೆಯಿಂದ. ಪ್ರೀತಿಯಿಂದ ದುಡಿಯುವವರು. ಸಾಹಿತ್ಯ ಎಲ್ಲರ ಸಮಾನ ಆಸಕ್ತಿಯ ಪ್ರೀತಿಯ ವಿಷಯ. ತಾಯಿ - ತಂದೆ. ಬಂಧುಗಳು ದೂರ ಮಾಡಿದರೂ ಹೆಜ್ಜೆ ಹೆಜ್ಜೆಗೆ ಗೆಳೆಯರ ಪ್ರೀತಿಯ ನೆರವು. ಆಸರೆ.

ಅನುಪಮಾರದು ಪರಿವಾರದಲ್ಲಿ ಪತ್ನಿ. ಗೃಹಿಣಿ. ತಾಯಿಯಾಗಿ ಹೆಚ್ಚಿನ ಜವಾಬ್ದಾರಿ. ಇದನ್ನು ಸಮರ್ಥವಾಗಿ ನಿರ್ವಹಿಸಿದ ಬಗೆ ವಿಸ್ಮಯಕಾರಿ. ಬರಹಗಾರರಾದ ನಿರಂಜನರ ಬೇಕು ಬೇಡಗಳ ಕಡೆ ಗಮನ. ಸಹಕಾರ. ವೈದ್ಯವೃತ್ತಿ. ಸಾಹಿತ್ಯಸೇವೆ ಮಾಡುತ್ತಲೇ ಕುಟುಂಬದ ಕಡೆ ಪೂರ್ಣ ಗಮನ. ಮನೆಗೆಲಸ. ಮಕ್ಕಳ ಆರೈಕೆ. ರೋಗಿ ಪತಿಯ ಆರೈಕೆ. ಸ್ವತಃ ರೋಗಿಯಾದ ತಮ್ಮ ಜವಾಬ್ದಾರಿ. ನಿರಂಜನರಂತೆ ಸಾದಾ ಸರಳ ಜೀವನ. ಅವರಿಗಾಗಿ ಹಲವಾರು ಆಸೆ ಅಪೇಕ್ಷೆಗಳ ತ್ಯಾಗ. ವೈದ್ಯ ಜೀವನಕ್ಕೆ ಸಾಮಾನ್ಯವಾದ ಆಡಂಬರದ ಪಾರ್ಟಿಗಳ ಬಹಿಷ್ಕಾರ. ನಿರಂಜನರಿಗೆ ಕಾಯಿಲೆಯಾಗಿ ಓಡಾಡುವುದು ನಿಂತಾಗ ಮನೆಯ ಹೊರಗಿನ ಕೆಲಸಗಳು ಅನುಪಮಾ ಕೊರಳಿಗೆ. ಯಾವುದಕ್ಕೂ ಗೊಣಗದೆ ಬಂದುದೆಲ್ಲವನ್ನೂ ಧೈರ್ಯದಿಂದ ನಗುಮುಖದಿಂದ ಸ್ವೀಕರಿಸಿ. 'ಯಾವ ಹೊತ್ತಿಗೂ ಸೋಲನ್ನು ಒಪ್ಪಿಕೊಳ್ಳಬಾರದು' ಎಂದು ಮತ್ತೆ ಮತ್ತೆ ನಿರಂಜನರು ಹೇಳಿದ ಮಾತನ್ನು ನಿಜಗೊಳಿಸಿದವರು ಅನುಪಮಾ. ತಮ್ಮ ಕಾರ್ಯಸಾಮರ್ಥ್ಯದಿಂದ ಇಬ್ಬರು ಮಕ್ಕಳನ್ನೂ ಶೈಕ್ಷಣಿಕವಾಗಿ ಸಾಹಿತ್ಯಿಕವಾಗಿ ಉನ್ನತ ಸಾಧನೆ ಮಾಡುವಂತೆ ಬೆಳೆಸಿದವರು.

ಸಫಲ ವೈದ್ಯರಾಗಿ. ಜನಪ್ರಿಯ ಲೇಖಕಿಯಾಗಿ ನೆಮ್ಮದಿಯ ಆರ್ಥಿಕ ಸಂಪನ್ನತೆಯ ಬದುಕನ್ನು ಪಡೆದುಕೊಂಡ ಅನುಪಮಾ ಕೊನೆಯ ತನಕ ಎಡಪಂಥೀಯ ಪ್ರಗತಿಶೀಲ ವಿಚಾರಧಾರೆಯನ್ನು. ನಂಬಿಕೆಗಳನ್ನು ಒಪ್ಪಿ ನಡೆದವರು. ಕಾಲಕಾಲಕ್ಕೆ ಆದ ಬದಲಾವಣೆಗಳೊಂದಿಗೆ ಸ್ಪಂದಿಸುತ್ತ ಸಾಮ್ಯವಾದ. ಸಮಾಜವಾದ. ಪ್ರಗತಿವಾದ. ಬಂಡಾಯವಾದ. ದಲಿತವಾದಗಳೆಲ್ಲಕ್ಕೂ ಸ್ಪಂದಿಸುತ್ತ ಅವುಗಳ ಜೀವಪೋಷಕ ತತ್ವಗಳನ್ನು ಗ್ರಹಿಸಿ ಬದುಕಿನಲ್ಲಿ. ಸಾಹಿತ್ಯದಲ್ಲಿ ಅವನ್ನು ಅನುಷ್ಠಾನಗೊಳಿಸಿದವರು. ಹುಟ್ಟು. ಬಾಲ್ಯ.

ಸಂಪ್ರದಾಯಬದ್ಧ ಆಸ್ತಿಕ ಪರಿವಾರದಲ್ಲೂ ನಿರಂಜನರ ಜೊತೆಯಲ್ಲಿದ್ದು ವೈಜ್ಞಾನಿಕ ಮನೋಭಾವವನ್ನು. ನಾಸ್ತಿಕತೆಯನ್ನು. ಜೀವವಿರೋಧಿ ಸಂಪ್ರದಾಯ ವಿರೋಧವನ್ನು ರೂಢಿಸಿಕೊಂಡವರು. ಸಂಪನ್ನ ಸ್ಥಿತಿಯಲ್ಲಿದ್ದರೂ ದಲಿತರ. ಶೋಷಿತರ. ಬಡವರ. ಸಂಘರ್ಷ ನಿರತರ ಕುರಿತು ಅಪಾರ ಅನುಕಂಪವುಳ್ಳವರು. ಇಂಥ ವೈಚಾರಿಕತೆಯ ಮುರ್ಥಾರ ಪ್ರಸಂಗಗಳಲ್ಲಿ ಅವರ ಬದುಕಿಗೆ ಊರುಗೋಲಾಗಿರಬೇಕು. ಪ್ರೀತಿಸಿದ ಸಂಗಾತಿಗೆ ಅನುರೂಪಳಾಗಲು ಅನುಪಮಾ ಪಟ್ಟ ಶ್ರಮ. ಅವರ ಸಕಾರಾತ್ಮಕ ಜೀವನ ಪ್ರೇಮದೃಷ್ಟಿ ಬೆರಗುಗೊಳಿಸುತ್ತವೆ. ಎಡೆಬಿಡದ ವ್ಯಸ್ತತೆಯಲ್ಲಿಯೂ ಬಿಡುವು ಮಾಡಿಕೊಂಡು ಹಲವಾರು ಸಂಘ ಸಂಸ್ಥೆಗಳೊಂದಿಗೆ ಸಂಪರ್ಕವಿಟ್ಟುಕೊಂಡು ಅವಿರತವಾಗಿ ದುಡಿಯುವುದು. ಸಭೆ ಸಮ್ಮೇಳನಗಳಲ್ಲಿ ಭಾಗವಹಿಸುವುದು ನೋಡಿ ಅವರ ಕಾರ್ಯಕ್ಷಮತೆಯ ಬಗ್ಗೆ ಬೆರಗಾಗುತ್ತದೆ. ಸಾರ್ವಜನಿಕ ಕೆಲಸಗಳೇ ಇರಲಿ. ಸಾಹಿತ್ಯದ ಬರವಣಿಗೆಯೇ ಇರಲಿ ತಾವು ನಂಬಿದ ಸಿದ್ಧಾಂತದ ಬದ್ಧತೆಗೆ ಭಂಗ ಬಾರದಂತೆ ಎಚ್ಚರವಿದ್ದವರು.

ಇಂಥ ಭೀಕರ ಸನ್ನಿವೇಶಗಳಲ್ಲಿ ಬದುಕಿ ದುಡಿದ ಅನುಪಮಾ ಅವರ ಸಾಹಿತ್ಯ ಹಲವು ಕಾರಣಗಳಿಂದ ವಿಶಿಷ್ಟ. ಸಾಹಿತ್ಯ ಕ್ಷೇತ್ರದಲ್ಲಿ ಹುಟ್ಟಿದ ಪ್ರಮುಖ ವೈಚಾರಿಕ ಆಂದೋಲನಗಳೆನ್ನೆಲ್ಲ ಗ್ರಹಿಸಿ ಎಡಪಂಥೀಯ. ಪ್ರಗತಿಶೀಲ. ಬಂಡಾಯ ಹಾಗೂ ದಲಿತ ಮನೋಧರ್ಮದ ಸಾಹಿತ್ಯ ರಚನೆ ಮಾಡಿದ ಬಹುಶಃ ಮೊದಲ ಕನ್ನಡ ಲೇಖಿಕೆ ಅವರು. ಲಕ್ಷಾಂತರ ಸಾಮಾನ್ಯರಿಗೆ ಪ್ರಯೋಜನಕಾರಿಯಾದ ಆರೋಗ್ಯ - ಚಿಕಿತ್ಸೆ ಇತ್ಯಾದಿ ವಿಷಯಗಳ ಕುರಿತು ಕನ್ನಡದಲ್ಲಿ ದೊಡ್ಡ ಸಂಖ್ಯೆಯಲ್ಲಿ ಕೃತಿ ರಚಿಸಿ ದಾಖಲೆ ಮಾಡಿದ ಜನಪ್ರಿಯ ಲೇಖಿಕಿ. ಅವರ ಸಾಹಿತ್ಯದ ಗಾತ್ರ. ಗುಣ ಮತ್ತು ವೈಚಾರಿಕತೆ ಎಲ್ಲವೂ ಅನನ್ಯ.

ಕೃತಿಯಲ್ಲಿ ವಿಶಿಷ್ಟವಾಗಿ ಗಮನ ಸೆಳೆಯುವುದು ಅವರ ಜೀವನದರ್ಶನ. ‘ಯಾವ ಹೊತ್ತಿಗೂ ಸೋಲನ್ನೊಪ್ಪಿಕೊಳ್ಳಬಾರದು’ ಎಂಬ ನಿರಂಜನರ ಮಾತು ಅನುಪಮಾ ಜೀವನದ ಉಸಿರು. ಬದುಕಿನ ಪ್ರತಿಯೊಂದು ಹಂತದಲ್ಲಿ ಇದನ್ನು ಅನುಷ್ಠಾನಗೊಳಿಸಿದರು. ‘ಮನುಷ್ಯನ ದೇಹ ಮತ್ತು ಮನಸ್ಸು ಅನಿವಾರ್ಯವಾದಾಗ ಎಂಥ ಸಂದರ್ಭಗಳಿಗೂ ಹೊಂದಿಕೊಂಡು ಬಿಡುತ್ತವೆ. ಸಾಧಿಸುತ್ತೇನೆ ಎಂಬ ಹಠವಿರಬೇಕು ಅಷ್ಟೆ.’ ‘ನನ್ನ ವೃತ್ತಿ ಮತ್ತು ಬರಹದಿಂದ ಜನಕ್ಕೆ ಸಹಾಯವಾದರೆ ಮಾತ್ರ ಬದುಕಿದ್ದು ಸಾರ್ಥಕ.’ ‘ನೋವುಂಡು ನಗುವುದನ್ನು ನಿರಂಜನ ನನಗೆ ಕಲಿಸಿಕೊಟ್ಟಿದ್ದಾರೆ.’ ‘ಶಾಶ್ವತವಾಗಿ ಉಳಿಯುವುದು ಚಳವಳಿಗಳಲ್ಲ. ನಾವು ಬರೆಯುವುದರಲ್ಲಿ ಏನಾದರೂ ಸತ್ವ ಇದ್ದರೆ ಅದು ಉಳಿಯುತ್ತೆ.’ ‘ಒಂದು ಕ್ಷಣವನ್ನೂ ಪೋಲು ಮಾಡದೆ ಸದಾ ಏನಾದರೂ ಕೆಲಸ ಮಾಡುತ್ತಿರುವುದು ನಮ್ಮ ಕುಟುಂಬದ ಸದಸ್ಯರೆಲ್ಲರಿಗೂ ಅಂಟಿದ ಚಟ.’ ‘ಜಂಭ ಪಡಬೇಡಿ. ನಮ್ರತೆಯಿಂದ ಇರೋದನ್ನ ಕಲೀರಿ. ಸಾಧನೆ ಮಾಡುತ್ತ ಹೋಗುವುದು ನಿಮ್ಮ ಗುರಿಯಾಗಬೇಕು.’ ‘ಹೆದರಿಕೊಳ್ಳುವುದು ಏನೂ ಇಲ್ಲ. ಎದುರಿಸಿ ಗೆಲ್ಲಬೇಕು. ಕಷ್ಟವನ್ನು ಸಂತೋಷದಿಂದ ಎದುರಿಸಬೇಕು.’ ‘ಬದುಕನ್ನು ಪ್ರೀತಿಸುವುದು ಎಂದರೆ. ನನಗಾಗಿ ಬಾಳುವುದು ಎಂದರ್ಥವಲ್ಲ. ನಾಲ್ಕು ಜನರಿಗೆ ಉಪಯುಕ್ತವಾಗುವ ಹಾಗೆ ಬದುಕಬೇಕು. ಆ ಕೆಲಸವನ್ನು ನನ್ನ ವೈದ್ಯಕೀಯ ಸೇವೆಯಿಂದ. ನನ್ನ ಬರಹದಿಂದ ಸಾಧಿಸಬಹುದು.’ ‘ಸಾವಿನ ಬಾಗಿಲ ಬಳಿ ಹೋಗಿ ಬಂದಿದ್ದೇನೆ ನಿಜ. ಸಾವನ್ನು ಕಂಡರೆ ಅಂಜಿಕೆಯಿಲ್ಲ.’ ‘ಮನಸ್ಸಿನಲ್ಲಿ ದುಗುಡವಿದ್ದರೂ ಹೊರಗೆ ನಗುನಗುತ್ತಲೇ ಇದ್ದೆವು. ಯಾರೂ ಅಪ್‌ಸೆಟ್ ಆಗಬಾರದು. ಇದು ನಾವು ಪರಸ್ಪರ ಹಾಕಿಕೊಂಡ ಕರಾರು.’

ಇಂಥ ಹಲವಾರು ಮಾತುಗಳು ಕೃತಿಯ ಉದ್ದಕ್ಕೂ ಮತ್ತೆ ಮತ್ತೆ ಜೀವನ ಪ್ರೇಮವನ್ನು ಗಟ್ಟಿಗೊಳಿಸುತ್ತವೆ. ಇಂಥ ಕೃತಿ ಎಷ್ಟೋ ಜನಕ್ಕೆ ಬದುಕಿನ ಪ್ರೇರಣೆ ನೀಡಿ ಸಾರ್ಥಕವಾಗುವಂಥದು. ಉನ್ನತ ಸಾಧನೆಗಳನ್ನು ತಾನು ಮಾಡಿ. ಮಾಡಲು ನಿರಂಜನರಿಗೂ ನೆರವಾಗಿ. ತಮ್ಮಿಬ್ಬರ ಸಾಧನೆಗಳಿಗೆ ಕಳಸವಿಟ್ಟಂತೆ ಇಬ್ಬರೂ ಹೆಣ್ಣುಮಕ್ಕಳನ್ನು ಗಂಡು ಮಕ್ಕಳಿಗಿಂತ ಮಿಗಿಲಾಗಿ ಬೆಳೆಸಿದ ತಾಯಿ ಅನುಪಮಾ. ತೇಜಸ್ವಿನಿ. ಸೀಮಂತಿನಿ ಇಬ್ಬರೂ ಪಿಯುಸಿ. ಬಿವಿ. ಎಂವಿ ಎಲ್ಲವುಗಳಲ್ಲಿಯೂ ರ‍್ಯಾಂಕ್. ಸ್ವರ್ಣಪದಕ ಪಡೆದು ಶೈಕ್ಷಣಿಕ ದಾಖಲೆ ಮಾಡಿದವರು. ಎಂಟು ವರ್ಷಕ್ಕೇ ಇಂಗ್ಲಿಶಿನಲ್ಲಿ ಕವಿತೆ ಬರೆದು. ನಂತರ ಶೀಘ್ರವೇ 'ಸೆಫಾಯರ್' ಎಂಬ ಕವನ ಸಂಕಲನಕ್ಕೆ ಕಾಮನ್‌ವೆಲ್ತ್ ಪ್ರಶಸ್ತಿ ಪಡೆದು ದಂಗುಬಡಿಸಿದವಳು ತೇಜಸ್ವಿನಿ.

ಎಲ್ಲ ಕ್ಷೇತ್ರಗಳಲ್ಲಿ ಮಹತ್ವದ ಸಾಧನೆ ಅನುಪಮಾರದು. ಇಷ್ಟೆಲ್ಲ ವಿಶಿಷ್ಟತೆಗಳಿಂದ ತುಂಬಿದ್ದರೂ ಈ ಕೃತಿಯ ಕೆಲವು ಮಿತಿಗಳು ಗಮನ ಸೆಳೆಯುತ್ತವೆ. ಬದುಕಿನ ಸಂಕೀರ್ಣತೆಯ ದ್ವಂದ್ವಗಳ ತುಮುಲ. ತಳಮಳಗಳ ದಟ್ಟ ನಿರೂಪಣೆ ಇಲ್ಲಿ ಕಾಣುವುದಿಲ್ಲ. ಅನುಭವದ ವೈವಿಧ್ಯತೆಯ ಕೊರತೆ ಎದ್ದುಕಾಣುತ್ತದೆ. ಈ ಕೊರತೆಗೆ ಕಾರಣಗಳೂ ಹೊಳೆಯುತ್ತವೆ. ಲೇಖಕಿಯ ಸಾಧನೆಯ ಜೀವನವೆಲ್ಲ ಕಳೆದದ್ದು ಬೆಂಗಳೂರಿನ ಜಯನಗರದಲ್ಲಿ. ಉಚ್ಚ - ಮಧ್ಯಮ ವರ್ಗದ ಒಂದೇ ಬಗೆಯ ಜೀವನ ಶೈಲಿಯ ಬಡಾವಣೆಯಲ್ಲಿ. ಅಂಥ ಜನರ ನಿರಂತರ ಒಡನಾಟ. ಸಂಪರ್ಕಗಳು ಅನುಭವವನ್ನು ಸೀಮಿತಗೊಳಿಸಿದ್ದು ಸಹಜ. ಇಂಥಲ್ಲಿ ಮಾನವೀಯ ಸಂಬಂಧಗಳು ಹೆಚ್ಚಾಗಿ ಔಪಚಾರಿಕ. ಆಳವಿಲ್ಲದವು. ಕ್ರಮೇಣ ಲೇಖಕಿಯಲ್ಲಿ ಇಂಥ ಮನೋವೃತ್ತಿಯು ರೂಪುಗೊಂಡದ್ದು ಸಹಜವೇನೋ. ಅಲ್ಲಲ್ಲಿ ಕಾಣುವ ವೈವಿಧ್ಯತೆ. ಅವರಿಗೆ ಪರಿಚಿತವಾದ ದಲಿತರ, ಹರಿಜನರ. ಕೊಳಚೆ ನಿವಾಸಿಗಳ ಜೀವನಚಿತ್ರಣ ಹೆಚ್ಚಾಗಿ ಓದಿ. ಕೇಳಿ - ತಿಳಿದು ದಾಖಲಿಸಿದ್ದು. ಅದರೊಡನೆ ತಾದಾತ್ಮ್ಯ ಸಾಧಿಸುವಷ್ಟು ನಿಕಟ ಸಂಪರ್ಕ ಅವರಿಗಿರಲಿಲ್ಲ. ದೇಶ ವಿದೇಶಗಳ ಸುತ್ತಾಟವೂ ಬಹಳ ಸೀಮಿತ. ವ್ಯಸ್ತ ಬದುಕು. ಹೋದಲ್ಲಿ ೩ - ೪ ದಿನ ಕಳೆದರೆ ಹೆಚ್ಚು. ಅದರಲ್ಲಿ ಕಾಣುವುದೇನು. ತಿಳಿಯುವುದೇನು. ಗ್ರಂಥದಲ್ಲಿ ಬದುಕಿನ ಸಕಾರಾತ್ಮಕ ಚಿತ್ರಣ ಮಾತ್ರವಿದೆ. ಗೆಳೆಯರ, ಪರಿಚಿತರ ಲೋಪ - ದೋಷ. ಅವಗುಣಗಳನ್ನು ಎಲ್ಲೂ ಕಾಣಿಸುವುದಿಲ್ಲ. ಹೀಗಾಗಿ ಇಲ್ಲಿರುವುದು ಅರ್ಧ ಸತ್ಯ ಮಾತ್ರವೇನೊ ಎಂಬ ಅನುಮಾನ. ನೇರ ಬರವಣಿಗೆ. ಸ್ಪಷ್ಟ ನಿರೂಪಣೆ ಅವರ ಶೈಲಿಯ ವೈಶಿಷ್ಟ್ಯಗಳು. ಕೆಲವೇ ಶಬ್ದಗಳಲ್ಲಿ ಅವರು ಮೂಡಿಸುವ ವ್ಯಕ್ತಿಚಿತ್ರಣಗಳು ಜೀವಂತವಾಗಿ ನಿಲ್ಲುತ್ತವೆ.

ಅನುಪಮಾಗೆ ತಂದೆಯಂತಿದ್ದ, ಲೇಖಕರೂ ವೈದ್ಯರೂ ಆಗಿದ್ದ ಡಾ. ಶಿವರಾಂ ಅನುಪಮಾರ ಆಸ್ಪತ್ರೆಯನ್ನು ಉದ್ಘಾಟಿಸುತ್ತ, 'ಹುಲ್ಲಾಗು ಬೆಟ್ಟದಡಿ ಮನೆಗೆ ಮಲ್ಲಿಗೆಯಾಗು. ಕಲ್ಲಾಗು ಕಷ್ಟಗಳ ಮಳೆಯ ವಿಧಿ ಸುರಿಯೆ. ಬೆಲ್ಲ ಸಕ್ಕರೆಯಾಗು ದೀನದುರ್ಬಲರಿಂಗೆ ಎಲ್ಲರೊಳಗೊಂದಾಗು – ಮಂಕುತಿಮ್ಮ' ಎಂದು ಡಿ. ವಿ. ಜಿ. ಯವರ ಮಾತಿನಲ್ಲಿ ಹರಸುತ್ತಾರೆ. ಅವರ ಹರಕೆಯನ್ನು ಅಕ್ಷರಶಃ ಈಡೇರಿಸಿದ ಅಪರೂಪದ ಸೋದರಿ ಅನುಪಮಾ. ಈ ದಿಕ್ಕಿನಲ್ಲಿ ಅವರು ಮಾಡಿದ ನಿರಂತರ ಹೋರಾಟದ ಹೆಜ್ಜೆ ಗುರುತುಗಳು ಈ ಕೃತಿಯ ವಸ್ತು.

●

▼

ಅಪ್ಪಾಸಾಹೇಬ ಸನದಿ, ೩೪. ೧ ನೇ ಮೇನ್. ಪ್ರಶಾಂತನಗರ
ಧಾರವಾಡ - ೫೮೦ ೦೦೮ ✆ : ೦೮೩೬ - ೭೪೩೨೦೬

ಪರ್ಯಾಯ ಸಮ್ಮೇಳನ ▲ ಉತ್ಖನನ

ದಿವಸ್ಪತಿ ಹೆಗಡೆ

೧೯೯೦ ರಲ್ಲಿ ೫೯ ನೇ ಕನ್ನಡ ಸಾಹಿತ್ಯ ಸಮ್ಮೇಳನ ಹುಬ್ಬಳ್ಳಿಯಲ್ಲಿ ನಡೆಯಲಿತ್ತು. ಸಮ್ಮೇಳನದ ಅಧ್ಯಕ್ಷರಾಗಿ ಡಾ. ಆರ್. ಸಿ. ಹಿರೇಮಠರು ಆಯ್ಕೆಯಾಗಿದ್ದರು. ಇದು ಸಾಕಷ್ಟು ವಿವಾದಕ್ಕೆ ಕಾರಣವಾಯಿತು. ಸಮ್ಮೇಳನ ಹುಬ್ಬಳ್ಳಿಯಲ್ಲಿ ನಡೆಯಲಿದ್ದುದರಿಂದ ಅಲ್ಲಿನ ಸುತ್ತಲಿನ ಪ್ರದೇಶದ ಹಿರಿಯರೊಬ್ಬರು ಸಮ್ಮೇಳನಾಧ್ಯಕ್ಷರಾಗಬೇಕು. ಡಾ. ಹಿರೇಮಠರು ಸಂಶೋಧನ ಕ್ಷೇತ್ರದಲ್ಲಿ ಸಾಕಷ್ಟು ಕೆಲಸ ಮಾಡಿದ್ದಾರೆ. ಆದ್ದರಿಂದ ಅವರ ಆಯ್ಕೆ ಯೋಗ್ಯವಾಗಿದೆ ಎಂಬ ಸಮರ್ಥನೆಯ ವಾದ ಒಂದೆಡೆಯಾದರೆ ಇಡೀ ಕರ್ನಾಟಕಕ್ಕೆ. ಕನ್ನಡ ಭಾಷೆಗೆ ಒಂದಾದ ಸಾಹಿತ್ಯ ಪರಿಷತ್ತು ನಡೆಸುವ ಈ ಸಮ್ಮೇಳನದ ಅಧ್ಯಕ್ಷತೆಗೆ ಪ್ರಾದೇಶಿಕತೆ. ಜಾತಿ ಮೊದಲಾದವು ಮಾನದಂಡವಾಗಬಾರದು. ಸಾಹಿತ್ಯ ಕ್ಷೇತ್ರದಲ್ಲಿ ದುಡಿದ ಶ್ರೇಷ್ಠರು ಮಾತ್ರ ಈ ಸ್ಥಾನಕ್ಕೆ ಆಯ್ಕೆಯಾಗಬೇಕು. ಶ್ರೇಷ್ಠತೆಯೊಂದೇ ಮಾನದಂಡವಾಗಬೇಕೆಂಬ ವಾದ ಇನ್ನೊಂದೆಡೆ. ಬೆಂಗಳೂರಿನ ಅನೇಕ ಹಿರಿ-ಕಿರಿಯ ಸಾಹಿತಿಗಳು ಶ್ರೇಷ್ಠತೆಯ ವಾದವನ್ನು ಎತ್ತಿದವರು - ಸಮರ್ಥಿಸಿದವರು.

ಜ್ಯೇಷ್ಠತೆ. ಶ್ರೇಷ್ಠತೆ. ಜಾಗ್ರತಿ ಪದಗಳು ಧಾರಾಳವಾಗಿ ಬಳಕೆಯಾಗಿ ವೇದಿಕೆಗಳಲ್ಲಿ. ಪತ್ರಿಕೆಗಳಲ್ಲಿ ಸಾಕಷ್ಟು ವಾದ-ವಿವಾದಗಳು ನಡೆದವು. ಹಾಗೆ ನೋಡಿದರೆ ಇತ್ತೀಚಿನ ವರ್ಷಗಳಲ್ಲಿ ಸಮ್ಮೇಳನಾಧ್ಯಕ್ಷರ ಆಯ್ಕೆ ವಿವಾದರಹಿತವಾದದ್ದು ತೀರ ಕಡಿಮೆ. ೬೧ ನೇ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಡಾ. ಅನಂತಮೂರ್ತಿಯವರ ಆಯ್ಕೆಯಾದಾಗಲೂ ಜಾತಿ. ವರ್ಗಗಳ ಸೂಕ್ಷ್ಮ ಹಿನ್ನೆಲೆಯಲ್ಲಿ ವಿವಾದವೆದ್ದಿತ್ತು. ಆದರೆ ಹುಬ್ಬಳ್ಳಿಯ ಸಮ್ಮೇಳನಾಧ್ಯಕ್ಷರ ಆಯ್ಕೆ ಕುರಿತ ಭಿನ್ನಾಭಿಪ್ರಾಯ ಅತ್ಯಂತ ತೀವ್ರ ಘಟ್ಟಕ್ಕೇರಿ ಬೆಂಗಳೂರಲ್ಲಿ 'ಪರ್ಯಾಯ' ಸಮ್ಮೇಳನವೊಂದನ್ನು ನಡೆಸುವಲ್ಲಿಗೆ ಮುಕ್ತಾಯ ಕಂಡಿತ್ತು. ಈ ಪರ್ಯಾಯ ಸಮ್ಮೇಳನದ ಪೂರ್ವತಯಾರಿಯ ಸಂದರ್ಭದಲ್ಲಿ ನಡೆದ ಘಟನೆಯೊಂದನ್ನು ದಾಖಲಿಸುವದು ಇಲ್ಲಿ ನನ್ನ ಉದ್ದೇಶ.

ಹುಬ್ಬಳ್ಳಿಯಲ್ಲಿ ನಡೆಯಬೇಕಿದ್ದ ಸಮ್ಮೇಳನಕ್ಕೆ ಒಂದು ತಿಂಗಳು ಅಥವಾ ಅದಕ್ಕೂ ಸ್ವಲ್ಪ ಮುಂಚೆ ಇರಬಹುದು. ಬೆಂಗಳೂರಿನ ನೃಪತುಂಗ ರಸ್ತೆಯಲ್ಲಿರುವ 'ಯವನಿಕಾ' ದಲ್ಲಿ ಷೇಕ್ಸ್‌ಪಿಯರನ ಕುರಿತು ವಿಚಾರಸಂಕಿರಣವೊಂದು ಏರ್ಪಾಡಾಗಿತ್ತು. ಬೆಂಗಳೂರಿನ ಹಲವು ಹಿರಿ-ಕಿರಿಯ ಸಾಹಿತಿಗಳು ಅದರಲ್ಲಿ ಭಾಗವಹಿಸಿದ್ದರು. ಮುಂಜಾನೆಯ ಅಧಿವೇಶನದಲ್ಲಿ ಮಾತನಾಡಬೇಕಿದ್ದವರಲ್ಲಿ ಒಬ್ಬರು ಬಾರದೇ ಇದ್ದ ಕಾರಣ ಬೆಳಗಿನ ಕಾರ್ಯಕ್ರಮ ನಿಗದಿತ ವೇಳೆಗಿಂತ ಮುಂಚೆ ಮುಕ್ತಾಯವಾಯಿತು. ಮಧ್ಯಾಹ್ನದ ಅಧಿವೇಶನ ಪ್ರಾರಂಭವಾಗಲು ಸುಮಾರು ಎರಡು ತಾಸು ಕಾಲಾವಧಿ ಇತ್ತು. ಸಭಾಂಗಣದಿಂದ ಹೊರಬಂದು ಎರಡು ತಾಸು ಹೊತ್ತು ಕಳೆಯುವದು ಹೇಗೆಂದು ನಾನು ಯೋಚಿಸುತ್ತಿರುವಾಗ ಯಾರೋ ಬಂದು (ಬಹುಶಃ ಪ್ರೊ. ಜಿ. ಕೆ. ಗೋವಿಂದರಾಯರೆಂದು ನೆನಪು) 'ಕಾರು ತಂದಿದ್ದೀರಾ ?' ಎಂದು ಕೇಳಿದರು. 'ಹೌದು' ಎಂದೆ. 'ಊಟಕ್ಕೆ ಪ್ರೆಸ್ ಕ್ಲಬ್ಬಿಗೆ ಹೋಗೋಣ. ನಿಮ್ಮ ಕಾರಿನಲ್ಲಿ ಇನ್ನೂ ಒಬ್ಬಿಬ್ಬರು ಬರುತ್ತಾರೆ' ಎಂದರು.

ಒಟ್ಟೂ ಮೂರು ಕಾರುಗಳು. ಒಂದು ಲಂಕೇಶರದು. ಇನ್ನೊಂದು ಡಾ. ಬಿ ಸಿ. ರಾಮಚಂದ್ರ ಶರ್ಮರದು. ಮೂರನೆಯದಾದ ನನ್ನ ಕಾರಿನ ಕಾರಣದಿಂದ ನಾನೂ ಅವರೆಲ್ಲರ ಜೊತೆ ಸೇರಿಕೊಂಡೆ! ಪ್ರೆಸ್ ಕ್ಲಬ್ ಹತ್ತಿರದಲ್ಲೇ ಇತ್ತು. ತಲುಪಲು ಐದು ನಿಮಿಷವೂ

ಬೇಕಾಗಿರಲಿಲ್ಲ. ಕ್ಲಬ್ ಹತ್ತಿರ ಕಾರು ಇಳಿಯುತ್ತಿದ್ದಾಗ. ನನ್ನ ಮಕ್ಕಳ ದೆಸೆಯಿಂದ ಕಾರಿಗೆ ಅಂಟಿಸಿದ್ದ 'L' ಬೋರ್ಡ್ ನೋಡಿ ಲಂಕೇಶರು ನನಗೆ ತಮಾಷೆ ಮಾಡಿದ್ದರು.

ಸುಮಾರು ೧೬ - ೧೭ ಜನ ಇದ್ದೆವು. ಮೂರು ಟೇಬಲ್ ಒಟ್ಟಿಗೆ ಸೇರಿಸಿ ಕ್ಲಬ್‌ನ ಅಂಗಳದಲ್ಲಿ ಊಟದ ವ್ಯವಸ್ಥೆ ಮಾಡಲಾಗಿತ್ತು. ಟೇಬಲ್ಲಿನ ಶಿರೋಭಾಗದಲ್ಲಿ ಮಧ್ಯೆ ಡಾ. ರಾಮಚಂದ್ರ ಶರ್ಮ. ಅವರ ಎಡಬಲಗಳಲ್ಲಿ ಡಾ. ಯು.ಆರ್.ಅನಂತಮೂರ್ತಿ ಹಾಗೂ ಲಂಕೇಶ ಕುಳಿತಿದ್ದರು. ಎದುರುಗಡೆ ಎರಡು ಸಾಲಿನಲ್ಲಿ ಉಳಿದವರು. ರಜಾದಿನದಲ್ಲಿ, ಅದೂ ಮಧ್ಯಾಹ್ನದ ಹೊತ್ತು ಅನಿರೀಕ್ಷಿತವಾಗಿ ಬಂದ ಗಿರಾಕಿಗಳಿಗಾಗಿ ಊಟ ತಯಾರಿಸುವದು ತಡವಾಗುವದೆಂಬ ಕಾರಣಕ್ಕೆ ಎಲ್ಲರೂ ತಮತಮಗೆ ಬೇಕಾದ 'ಪಾನೀಯ' ಹೀರತೊಡಗಿದರು. ಈ ಎಲ್ಲದರ ಉಸ್ತುವಾರಿಗೆ ಓಡಾಡುತ್ತಿದ್ದವರು ಶೂದ್ರ ಶ್ರೀನಿವಾಸ ಎಂದು ನೆನಪು.

ಲೋಕಾಭಿರಾಮದ ಪ್ರಾಸ್ತಾವಿಕ ಮಾತುಗಳು ಮುಗಿದಂತೆ ವಿಷಯ ಸಾಹಿತ್ಯ ಸಮ್ಮೇಳನದತ್ತ ಹೊರಳಿತು. ಇದೇ ಸಂದರ್ಭಕ್ಕೆ ಕಾಯುತ್ತಿದ್ದಂತೆ ರಾಮಚಂದ್ರ ಶರ್ಮರು ಪಕ್ಕದಲ್ಲೇ ಕುಳಿತಿದ್ದ ಅನಂತಮೂರ್ತಿಯವರಿಗೆ. "ಅನಂತೂ, ನೀನು ಇಲ್ಲಿಯ ಪರ್ಯಾಯ ಸಮ್ಮೇಳನ ಉದ್ಘಾಟಿಸಬೇಕು" ಎಂದರು. ಬೆಂಗಳೂರಿನ ಸಂಸ ಬಯಲು ರಂಗಮಂದಿರದಲ್ಲಿ ಪರ್ಯಾಯ ಸಾಹಿತ್ಯ ಸಮ್ಮೇಳನ ನಡೆಸುವದೆಂದು ಆಗಲೇ ನಿರ್ಣಯವಾಗಿ ಹೋಗಿತ್ತು. ಮೊದಲಿಗೆ ಶರ್ಮರ ಮಾತು ಕೇಳಿಸದಂತೆ ಅನಂತಮೂರ್ತಿಯವರು ಕುಳಿತಿದ್ದರೂ ಮತ್ತೊಮ್ಮೆ ಶರ್ಮರು ಅದೇ ಮಾತು ಹೇಳಿದಾಗ ಅನಂತಮೂರ್ತಿಯವರು ನಮಗೆ – ಅದರಲ್ಲೂ ನನಗೆ– ತೀವ್ರ ಆಶ್ಚರ್ಯವೆನಿಸುವ ರೀತಿಯಲ್ಲಿ ಪ್ರತಿಕ್ರಿಯಿಸಿದರು. ಅವರ ಮಾತಿನ ಸಾರ ಹೀಗಿತ್ತು :

"ನಿಮ್ಮದು ಶ್ರೇಷ್ಠತಾ ಸಮ್ಮೇಳನ. ಅದರಲ್ಲಿ ನನಗೇನು ಕೆಲಸ ? ಅದಕ್ಕೆ ನಾನು ಯಾಕೆ ಬರಬೇಕು.... ? ನಾನು ಒಬ್ಬ ಬರಹಗಾರನೇ ಅಲ್ಲ ಎಂದಿರುವಾಗ ನನ್ನ ಅಗತ್ಯ ಏನು ?" ಡಾ. ಅನಂತಮೂರ್ತಿಯವರ ಮಾತಿನ ಹಿನ್ನೆಲೆ ಏನು ಎನ್ನುವದು ಅಲ್ಲಿನ ಕೆಲವರಿಗಾದರೂ ಗೊತ್ತಿದ್ದಿರಬೇಕು. ಯಾರೂ ಮಾತಾಡಲಿಲ್ಲ. ರಾಮಚಂದ್ರ ಶರ್ಮರು ಅನಂತಮೂರ್ತಿಯವರನ್ನು ಸಮಾಧಾನಪಡಿಸಲು ಪ್ರಯತ್ನಿಸುತ್ತಿದ್ದರು. ಅನಂತಮೂರ್ತಿ ತಮ್ಮ ಪಟ್ಟು ಬಿಡಲಿಲ್ಲ. "ನೋಡಿ. ಕೈಯಲ್ಲಿ ಒಂದು ಪತ್ರಿಕೆ ಇದೆಯೆಂದು ಯಾರ ಬಗ್ಗಾದರೂ ಏನಾದರೂ ಬರೆಯಬಹುದ ? ನನ್ನ ಕೈಲೂ ಒಂದು ಪತ್ರಿಕೆ ಇದ್ದಿದ್ದರೆ ನಾನೂ ಉತ್ತರಿಸುತ್ತಿದ್ದೆ. "It is an uneven battle." ಎಂದಾಗ ಹಿನ್ನೆಲೆ ಗೊತ್ತಿಲ್ಲದವರಿಗೂ ಅನಂತಮೂರ್ತಿಯವರ ಗುರಿ ಇರುವದು ಲಂಕೇಶರತ್ತ ಎನ್ನುವದು ಅರ್ಥವಾಗಿತ್ತು. ಶರ್ಮರ ಇನ್ನೊಂದು ಪಕ್ಕದಲ್ಲೇ ಕುಳಿತಿದ್ದ ಲಂಕೇಶರು ಮಾತ್ರ ಬಾಯಿ ಬಿಡದೆ ಸುಮ್ಮನೇ ಕುಳಿತಿದ್ದರು. ಅನಂತಮೂರ್ತಿಯವರನ್ನು ಒಪ್ಪಿಸಬೇಕೆಂದೇ ಎಲ್ಲವೂ ಪ್ರಿ-ಪ್ಲ್ಯಾನ್ಡ್ ಆಗಿ ಈ ಊಟದ ವ್ಯವಸ್ಥೆಯಾಗಿತ್ತೇನೋ ಎನ್ನುವಂತಿತ್ತು. ಅನಂತಮೂರ್ತಿಯವರು ಆಗ ಕೇರಳದಲ್ಲಿ ಮಹಾತ್ಮಾ ಗಾಂಧಿ ವಿಶ್ವವಿದ್ಯಾಲಯದ ಕುಲಪತಿಗಳಾಗಿದ್ದರು. ಪರ್ಯಾಯ ಸಮ್ಮೇಳನದ ಹೊತ್ತಿಗೆ ದೆಹಲಿಯಲ್ಲಿ ಕುಲಪತಿಗಳ ಸಭೆಯಲ್ಲಿ ಭಾಗವಹಿಸಬೇಕಾಗಿದೆ. ತನಗೆ ಬರಲಾಗುವದಿಲ್ಲ ಎಂದು ಹೇಳಿದರು. ಆಗ ಮುಕ್ತಾಯ ಸಮಾರಂಭಕ್ಕಾದರೂ ಬನ್ನಿ ಎನ್ನುವ ಒತ್ತಾಯ.

ಡಾ. ಅನಂತಮೂರ್ತಿಯವರು ನಿಧಾನವಾಗಿ ಕರಗಿದರು. ಮುಂದೆ ಪರ್ಯಾಯ ಶ್ರೇಷ್ಠತಾ ಸಮ್ಮೇಳನದಲ್ಲಿ ಭಾಗವಹಿಸಿದ್ದರು ಎನ್ನುವದು ಈಗ ಇತಿಹಾಸ.

●

▼

ಡಾ. ದಿವಸ್ಪತಿ ಹೆಗಡೆ, ೬೯೦ / ಎಸ್. ೧೪ ನೇ ಮುಖ್ಯರಸ್ತೆ. ವಿ.ಇ.ಟಿ. ಪಾಲಿಟೆಕ್ನಿಕ್ ಎದುರು. ಜೆ.ಪಿ.ನಗರ. ೨ ನೇ ಹಂತ. ಬೆಂಗಳೂರು - ೫೬೦ ೦೭೮ ✆ : ೦೮೦ - ೬೫೯೦೪೧೪

▲ ಕವಿತೆ - ೩

ಸ್ನಾನ

ಎಫ್. ಅಸದುಲ್ಲಾ ಬೇಗ್

ಬಾಬನೊಬ್ಬ ಒಂದು ದಿನ
ಮಸೀದಿಯೊಂದರಲ್ಲಿ ತಂಗಿದ್ದ.
ನೀರು ಕಾಯಿಸಲು
ಅಲ್ಲಿದ್ದ ಪುಸ್ತಕ ಒಂದನ್ನು ಸುಟ್ಟ.
ಮೌಲಾನನಿಗೆ ಭಯವಾಯಿತು
ಆಕ್ಷೇಪಿಸಿದ.

ಬಾಬ ಬೂದಿ ಒಟ್ಟುಗೂಡಿಸಿ
ದಫನ್ ಮಾಡಲಣಿಯಾದ.
ಮೌಲಾನ, 'ಇದು ಮೂರ್ಖತನ,
ಪುಸ್ತಕಕ್ಕೆ ರುಹು* ಇರುತ್ತದೆಯೆ ?' ಎಂದ. (*ಆತ್ಮ)

ಅದಕ್ಕೆ ಬಾಬ...
'ಗೆದ್ದಲು ಹಿಡಿದ ಪುಸ್ತಕಗಳೆಲ್ಲಾ ಕೊಡು
ಬಿಸಿ ಬಿಸಿ ನೀರು ಬೇಕಾಗಿದೆ' ಎಂದ.

ಸ್ನಾನ ಮಾಡಿ ಬಂದ ಬಾಬನಿಗೆ
'ಸ್ವಚ್ಛವಾದಿರ ?' ಎಂದ ಮೌಲಾನ.
'ಸ್ವಲ್ಪವಾದೆ, ಇನ್ನೂ ಆಗಬೇಕು
ಗಿರ್‌ಜಾ - ಮಂದಿರಗಳ ಸ್ನಾನ'
ಅಂದ ಬಾಬ.

ಮಂದಿರದ ದಾರಿ ಹಿಡಿದ !

ಎಫ್. ಅಸದುಲ್ಲಾ ಬೇಗ್, ಫರೀದ್ ಮಂಜಿಲ್. ಗಾಂಧಿ ಬಜಾರ್. ಶಿವಮೊಗ್ಗ - ೫೭೭ ೧೦೧

▲ ಕವಿತೆ - ೪

ನಿರಂತರ

ರಾಜು ಹೆಗಡೆ

ಹೊಳೆಯಲ್ಲಿ ಬಾಗಿದ ಮರ
ದ ನೆರಳು. ತೇಲುವ ಎಲೆ, ಕಸ - ಕಡ್ಡಿ ನೊರೆ ಹೊರೆ.
ಒಡೆಯುವ ಗುಳ್ಳೆಯಲ್ಲೂ ಕಾಮನಬಿಲ್ಲ ಕಾಂತಿ.
ಮರಳ ದಡದಲ್ಲಿ ಅಳಿಸಿ ಹೋದ ಹೆಜ್ಜೆ
ನೀರಿನಲ್ಲಿ ಹೋಮವಾಗುವುದು ಹೇಗೆ ?

ದೂರದ ಹಾಯಿದೋಣಿಯ ಮಿಣುಗುಡುವ ದೀಪ.
ಆಳವಿಲ್ಲದಿದ್ದರೂ ಆಳ
ಚಂದ್ರ, ನಕ್ಷತ್ರಗಳ ರ್ಝುರೆಕ್ಸ್.
ಕಪ್ಪಾಗಿ ಕತ್ತಲೆಯಲ್ಲಿ ಬಿಸಿಲಲ್ಲಿ ಬೆಳ್ಳಗಾಗಿ
ಸಾಗುತ್ತಲೇ ಇರುತ್ತದೆ ನಿರಾಳವಾಗಿ ನೀರು
ಸಾಗರದ ಕಡೆಗೆ ಅಂದುಕೊಂಡಿದ್ದೇವೆ.
ತಿಳಿದವರುಂಟೆ ನದಿಯ ಹಾದಿ ಅಳೆದವರುಂಟೆ ?

●

▼

ರಾಜು ಹೆಗಡೆ, ಉಪನ್ಯಾಸಕ, ಎಂ.ಎಂ. ಕಲಾ ಮತ್ತು ವಿಜ್ಞಾನ ಕಾಲೇಜು.
ಶಿರಸಿ - ೫೮೧ ೪೦೧

▲ ಕವಿತೆ - ೫

ಕೊಲ್ಲುವರು ಜೋಕೆ

ಸುಮಿತ್ರಾ ದುಂಡಪ್ಪ ಕುಂಬಾರ

ಎಲೆ ನಾಯಿ,
ಕಂಡವರನ್ನು ಕಚ್ಚಿ ಕಾಡುವ ಹುಚ್ಚೇಕೆ ನಿನಗೆ ?
ಇಂದು ನಿನ್ನೆಯ ತನಕ
ನೀನು ನೀನಾಗಿದ್ದೆ.
ಎಲ್ಲರೊಂದಿಗೆ ಕುಳಿತೆ, ಸುಖದುಃಖದಲಿ ಬೆರೆತೆ.
ಮರೆತು ಹೋಯಿತೆ ? –ನೀನಿದ್ದೆ ಅತಿ ಸಾಧುವಾಗಿ.
ನುಚ್ಚಿನಾಸೆ ಕಳೆದು ಹೆಚ್ಚಿನಾಸೆಗೆ
ಜಿಗಿದು ಎತ್ತರದ ವೇದಿಕೆ ಏರಿ
ಬೊಗಳುತ್ತಿರುವಿ ಅಯ್ಯೋ
ನೀನೀಗ ಹುಚ್ಚು ನಾಯಿ.
ರಕ್ತದಾಸೆ ಹೆಚ್ಚಿ, ಬ್ರೇನ್ ಬ್ರೇಕ್ ಕಳಚಿ
ಸಾಲದಾಯಿತು ನಿನಗೆ ಗಟಾರದ ಕೊಳಚೆ.
ಹಳಿ ತಪ್ಪಿದ ಗಾಡಿ, ನಡೆಯಿಲ್ಲದ ನುಡಿ
ಹೊತ್ತಿಸಿತ್ತು ಅಶಾಂತಿ ಕಿಡಿ.
ಸುತ್ತುತ್ತಿರುವಿಯಲ್ಲ ಬಿಡಾಡಿ ?
ಗೊತ್ತಾಗಿದೆ ನಿನಗೆ ಹುಚ್ಚೆಂದು.
ಬಿಡುವರುಂಟೆ ಹಿಂದಿನಂತೆ
ರಾಜಮಾರ್ಗದಲಿ ಅಲೆಯಲೆಂದು ?
ಕಲ್ಲು ದೊಣ್ಣೆಗಳ ಬೀಸಿ, ನೀ ಹೀರಿದ ರಕ್ತ ಕಕ್ಕಿಸಿ
ಹೊಂಚಿನಿಂದ ಕೊಲ್ಲುವರು ಜೋಕೆ.

●

▼

ಸುಮಿತ್ರಾ ದುಂಡಪ್ಪ ಕುಂಬಾರ. ಚಿಂಚಣಿ. ತಾ. : ಚಿಕ್ಕೋಡಿ. ಜಿ. : ಬೆಳಗಾವಿ

ನಿಷ್ಠಿಯ ಮೂರು ವಚನಗಳು

ನಿಷ್ಠಿ ರುದ್ರಪ್ಪ

೧. ಕೋಮುವಾದ ಬೋಧಿಸುವ ಕತ್ತೆಗಳೇ,
ಜಾತಿವಾದದಿ ಜಗದಿ ಶಾಂತಿಗೆ ಭಂಗ ತರುವ ಜಾರರೇ.
ಸುಳ್ಳು ಕಂತೆ ಪುರಾಣಗಳ ಸೃಷ್ಟಿಸಿ ಮಾನವತೆಯ ಮರೆಸಿ
ಜನತೆಯನು ಮೌಢ್ಯತೆಗೆ ತಳ್ಳುವ ಹುನ್ನಾರ ನಡೆಸಿರುವ ಕಳ್ಳ ಕದೀಮರೇ.
ಧರ್ಮ, ಧರ್ಮವೆಂದು ಬೊಬ್ಬಿರಿದು ನಿಜ ಧರ್ಮ ಮರೆತ ಕುನ್ನಿಗಳೇ,
ಧರ್ಮವೇನೆಂದು ಹೇಳುವೆನು ಕೇಳಿರೋ–
ಸಕಲ ಜೀವಾತ್ಮರಿಗೆ ಲೇಸ ಬಯಸುವುದೇ ಧರ್ಮ,
ದಯವೇ ಧರ್ಮದ ಮೂಲವೆಂದು
ಸಂಗನಬಸವಣ್ಣನ ವಚನವಿರಲಾಗಿ
ನೀವು ಬೋಧಿಸುವ ಕಂತೆ-ಬೊಂತೆಗಳು ನಿಜಧರ್ಮಕೆ ಹೊರಗೆಂದ ಶರಣ ಕಿಂಕರನು.

೨. ಕೋಮುವಾದದ ಕೆನ್ನಾಲಿಗೆಯಲಿ
ಮುಗ್ಧರ ಹತಿಸುವ ಮತಾಂಧರೇ,
ನಿಮ್ಮ ಕೋಮುವೆಂತಿಹುದು
ನಿಮ್ಮ ದೇವನೆಂತಿಹನು
ಅವನ ಕಂಡರೆ ನೀವು ಕೇಳಿರಣ್ಣಾ
ಅಲ್ಲೇನಾದರೂ ನಿಮಗೆ ಸ್ವರ್ಗವಿದೆಯೇ ಎಂದು.
ಇಲ್ಲ ಇಲ್ಲ ಇಲ್ಲ
ಇಲ್ಲಿ ಸಲ್ಲದವನು ಅಲ್ಲಿಯೂ ಸಲ್ಲನೆಂಬ
ಬಸವಣ್ಣನಾ ವಚನ ಜಗದಿ ಸಾರುತಿರಲಾಗಿ
ನೀವು ಕಲ್ಪಿಸಿಕೊಂಡಿರುವ ಸ್ವರ್ಗಕ್ಕೂ ನೀವು ಹೊರಗೆಂದ ಶರಣ ಕಿಂಕರನು.

೩. ಕುಲಕ್ಕೊಂದು ದೈವ ಮತಕ್ಕೊಂದು ದೈವ
ಆ ಕುಲ ಹೆಚ್ಚೊ ಈ ಮತ ಹೆಚ್ಚೊ
ಕುಲಮತಗಳ ಹೆಚ್ಚುಗಾರಿಕೆಯ
ದೈವಗಳ ಹೆಚ್ಚುಗಾರಿಕೆಯ
ಬಡಿವಾರ ಚೇಷ್ಟೆಗಳ ಮಾಡಿ
ಮತಾಂಧರ ಗುಂಪ ಕಟ್ಟಿ
ನಿಜಾಚರಣೆಯ ಹಾದಿ ತೋರದೆ
ಇಲ್ಲದ ಸಗ್ಗದ ಕನಸ ಬಿತ್ತಿ
ನಿಜ ಬದುಕ ನರಕ ಮಾಡುವ
ಆಷಾಢಭೂತಿಗಳ ಮೆಚ್ಚನೆಂದ ನಮ್ಮ ಶರಣ ಕಿಂಕರನು.

▼

●

ನಿಷ್ಠಿ ರುದ್ರಪ್ಪ, ನಿಷ್ಠಿ ಓಣಿ, ಬಳ್ಳಾರಿ - ೫೮೩ ೧೦೧

ವಸಂತ

▲ ಮರಾಠೀ ಲಲಿತ ಕತೆ

ಪಿ. ಜಿ. ಕುಲಕರ್ಣಿ

ಕನ್ನಡಕ್ಕೆ : ಕೃ. ಶಿ. ಹೆಗಡೆ

ವಸಂತ ಋತು ಹತ್ತಿರ ಹತ್ತಿರ ಬಂದಂತೆ, ನನ್ನ ಅಂತರ್ಮನದಲ್ಲಿ, ರೋಮರೋಮಗಳಲ್ಲಿ ಸಾವಕಾಶವಾಗಿ ಬದಲಾವಣೆಯಾಗಹತ್ತಿದೆ ಎಂಬುದರ ಅರಿವು ನನಗಾಗತೊಡಗುತ್ತದೆ. ಈ ಅರಿವು ಯಾವುದೋ ಕೋಗಿಲೆಯ ಸ್ವರದಿಂದ ಉತ್ಕಟವಾಗುತ್ತದೆ ಮತ್ತು ನನ್ನ ಶರೀರವನ್ನೆಲ್ಲ ವ್ಯಾಪಿಸುತ್ತದೆ. ಥಂಡಿಯ ಕೊನೆಕೊನೆಯಲ್ಲಿ ಆದ ಶಾರೀರಿಕ ಜಡ್ಡು ಒಮ್ಮೆಲೇ ದೂರ ಸರಿಯುತ್ತದೆ. ಶರೀರ ಸ್ವಚ್ಛವಾಗಿ ಮುಕ್ತವಾಗುತ್ತದೆ ಮತ್ತು ಮನಸ್ಸು ಹಗುರವಾಗುತ್ತದೆ. ವಿಶೇಷವಾಗಿ ಪಾತರಗಿತ್ತಿಗಳಂತೆ ಮನವು ವಸಂತ ಋತುವಿನಲ್ಲಿ ಹೂಗಳ ಮೇಲೆ, ಎಲೆಗಳ ಕೆಳಗೆ ಮಂಡಿಸಲು ಉತ್ಸುಕವಾಗುತ್ತದೆ. ಸಮುದ್ರಕ್ಕೆ ಉಕ್ಕೇರುವಂತೆ ಮನೋವನದಲ್ಲಿ ಉಲ್ಲಾಸವು ಜೋರಾಗಿ ಹರಿಯಲಾರಂಭಿಸುತ್ತದೆ. ಶರೀರದ ಕಣಕಣಗಳಿಂದ ಒಂದು ರೀತಿಯ ಸಂಗೀತ ನಿರ್ಮಾಣವಾಗಲಾರಂಭಿಸುತ್ತದೆ ಮತ್ತು ನನ್ನ ಅಸ್ತಿತ್ವದಲ್ಲಿರುವ ಸತ್ವಗುಣವು ನನ್ನಲ್ಲಿರುವ ಋಜುತ್ವದ ಮೇಲೆ ಒಂದು ರೀತಿಯ ಬಂಡಾಯವನ್ನು ಎಬ್ಬಿಸುತ್ತದೆ.

ರಸ್ತೆಯ ಮೇಲೆ ಹೋಗುತ್ತಿರುವಾಗಲೆ ಒಮ್ಮೆಲೇ ಗಾಡಿಯನ್ನು ನಿಲ್ಲಿಸಿ ನಾನೂ ನಿಂತುಬಿಡುತ್ತೇನೆ. ಮೂಲೆಯಲ್ಲಿರುವ ಮಾವಿನ ಮರಕ್ಕೆ ಹೂವು ಬಿಟ್ಟಿರುತ್ತದೆ. ಅದನ್ನು ಅವಲೋಕಿಸಿದ ನನ್ನ ಮನ ಕೆರಳುತ್ತದೆ. ಆಗ ನನ್ನ ಅಂತಃಮನದಲ್ಲಿ ಸಂಗೀತ ಆರಂಭವಾಗುತ್ತದೆ. ಹಿಂದಿನಿಂದ ಬರುವ ಗಾಡಿಯ ಹಾರ್ನಿನಿಂದ ಎಚ್ಚರಗೊಳ್ಳುತ್ತೇನೆ. ನನಗೆ ಮುಂದೆ ಹೋಗಲೇಬೇಕಾಗುತ್ತದೆ. ಅನಂತರ ನಾನು ನನ್ನ ಕೆಲಸ, ಕಾಳಜಿಯ ವ್ಯಾಪಿನಲ್ಲಿ ಮುಳುಗುತ್ತೇನೆ. ಹೀಗೆಯೇ ಕೆಲವು ದಿನಗಳು ಸರಿಯುತ್ತವೆ. ವಸಂತ ಒಂದೇ ರೀತಿ ಮುಂದೆ ಸರಿಯುತ್ತಿರುತ್ತದೆ. ಇಷ್ಟೆಲ್ಲ ಸೌಂದರ್ಯದ ಪ್ರತೀಕವಾಗಿರುವ ಈ ವಸುಂಧರೆಯನ್ನು ನಾನೇಕೆ ಇಷ್ಟು ಬೇಗ ಮರೆಯುತ್ತೇನೆ ಎಂಬುದರ ಅರಿವು ನನಗಾಗುವುದಿಲ್ಲ. ಇದೆಲ್ಲಾ ಕೆಲಸದ ವ್ಯಾಪಿನಿಂದಾಗಿಯೇ ? ಏನು ವ್ಯಾಪು ? ದಿನಾಲೂ ಅದೇ ಅದೇ ಕೆಲಸ. ಕೌಟುಂಬಿಕ ಜವಾಬ್ದಾರಿಯಿಂದಲೇ ? ಅದೆಂತಹ ಜವಾಬ್ದಾರಿ ? ನಾವು ಸ್ವತಃ ಬಹಳ ತೊಂದರೆಯಲ್ಲಿದ್ದೇವೆ ಎಂದು ತೋರಿಸುವುದಕ್ಕೆ ಮಾತ್ರ. ಆದರೆ ಇದು ಇಷ್ಟು ಮಾತ್ರ ಸತ್ಯ – ಏನೆಂದರೆ ಕಾಲವು ಪಟಪಟ ಮುಂದೆ ಹಾರಿ ಬಿಡುತ್ತದೆ. ಅದರಂತೆ ವಸಂತವೂ ಎಲ್ಲೆಡೆಗೆ ಹೂವುಗಳನ್ನು ಹರಡಿ ಮುಂದೆ ಮುಂದೆ ಹಾರಿ ಬಿಡುತ್ತದೆ. ನಾವು ಮಾತ್ರ ಮನೆಯಲ್ಲಿ ನಿದ್ರೆ ಹೊಡೆಯುತ್ತೇವೆ. ಇದ್ದಲ್ಲೇ ಇರುತ್ತೇವೆ. ಇದೊಂದು ಅವಸ್ಥೆ. ನನ್ನ ಕುರಿತು ನನಗೇ ಒಂದು ರೀತಿಯ ಕೋಪವುಂಟಾಗುತ್ತದೆ. ಈ ಮಾವಿನ ಚಿಗುರಿನ ಕೆಳಗೆ ಹೋಗಿ ನಾನೇಕೆ ನಿಂತುಕೊಳ್ಳಲಿಲ್ಲ ? ಮಾವಿನ ಎಳೆ ಚಿಗುರನ್ನು ನಾನೇಕೆ ಮೂಸಿ ನೋಡಲಿಲ್ಲ ? ನನ್ನ ರಕ್ತದಲ್ಲಿ ಅದರ ಜೀವಂತಿಕೆಯನ್ನು ನಾನೇಕೆ ಮೈಗೂಡಿಸಿಕೊಳ್ಳಲಿಲ್ಲ ?

ದವಾಖಾನೆಯ ಜವಾಬ್ದಾರಿ ತುಂಬ ಹೆಚ್ಚಿತ್ತು. ರೋಗಿಗಳಿಲ್ಲದಿದ್ದರೆ ಯಾಕೆ ಇಲ್ಲ ಎಂಬುದು ಸ್ಪಷ್ಟವಾಗುತ್ತಿರಲಿಲ್ಲ. ಬಹಳ ಜನ ರೋಗಿಗಳಿದ್ದರೆ ಜವಾಬ್ದಾರಿ ಮತ್ತು ಕೆಲಸದಿಂದ ಮನ ಜಡವಾಗುತ್ತಿತ್ತು. ತಿಂಗಳ ಖರ್ಚು ಹೆಚ್ಚಾಗುತ್ತದೆ. ದವಾಖಾನೆಯ ಲೆಕ್ಕಾಚಾರದ ಹೊಂದಾಣಿಕೆ ಮಾಡುತ್ತ ಕೂಡ್ರುವುದು ಕೆಲವು ಸಲ ಅಪರಿಹಾರ್ಯವಾಗಿ ಬಿಡುತ್ತದೆ. ಮನಸ್ಸಿಗೆ ಅದೊಂದು ತೋರದ ಒತ್ತಡವಾಗಿಬಿಡುತ್ತದೆ. ಹಾಗಾಗಿ ಯಾವಾಗಲಾದರೊಮ್ಮೆ ಸಮಯ ಸಿಕ್ಕಾಗ ಆ ವೇಳೆಯ ಉಪಯೋಗವನ್ನು ಸರಿಯಾಗಿ

ಮಾಡಲಾಗುವುದಿಲ್ಲ. ಆ ಸಮಯವೆಲ್ಲ ವ್ಯವಸಾಯದ ಕಾಳಜಿಯಲ್ಲೇ ವ್ಯಯವಾಗಿ ಬಿಡುತ್ತದೆ. ವ್ಯವಸಾಯದಲ್ಲಿ ಪ್ರಾಪ್ತವಾದ ಸ್ಥಾನವನ್ನು ಕಾಯ್ದುಕೊಳ್ಳುವುದೆಷ್ಟು ಕಠಿಣವೆಂಬುದರ ಅರಿವೂ ಆಗುತ್ತಿತ್ತು. ಕೆಲವೊಮ್ಮೆ ಪಡೆಯುವುದು ಸುಲಭ. ಕಾರಣ ಪಡೆಯುವಾಗ ಹೆಚ್ಚು ಪ್ರಯತ್ನಶೀಲರಾಗಿರುತ್ತೇವೆ. ಆದರೆ ಉಳಿಸಿಕೊಳ್ಳುವುದು ಅದಕ್ಕಿಂತ ಕಠಿಣ. ಏಕೆಂದರೆ ಆಗ ನಾನು ನಿಷ್ಕ್ರಿಯನಾಗಿರುತ್ತೇನೆ. ಇದನ್ನೆಲ್ಲ ಉಳಿಸಿಕೊಳ್ಳುವುದರಲ್ಲಿ ತಲ್ಲೀನನಾಗಿರುವಾಗಲೇ ನನ್ನ ವಸಂತ ಮಾತ್ರ ಸಾವಕಾಶವಾಗಿ ದೂರವಾಗಿ ಬಿಡುತ್ತಿತ್ತು.

ಮಾವಿನ ಚಿಕ್ಕ-ಪುಟ್ಟ ಮಿಡಿಗಳು ಮೂಡಹತ್ತಿದ್ದವು. ಮಾವಿನ ಚಿಗುರು ನಿಂತಿತ್ತು. ಚಿಗುರು ನೋಡುವುದು ಮತ್ತು ಅದರ ಪರಿಮಳ ಹೀರುವುದು ಈಗ ಮುಗಿದಿತ್ತು. ಅದನ್ನು ನೋಡಲು ಇನ್ನೂ ಒಂದು ವರ್ಷ ಕಾಯಬೇಕಾಗಿತ್ತು. ಕಳೆದ ವರ್ಷವೂ ಹೀಗೆಯೇ ಚಿಗುರು ಬಿಟ್ಟು ಮಾವಿನ ಗಿಡವನ್ನು ತುಂಬ ಹೊತ್ತು ನಿರೀಕ್ಷಿಸುವುದಾಗಲಿಲ್ಲ. ಈ ವರ್ಷವೂ ಹಾಗೆಯೇ ನಡೆದಿದೆ. ಹೀಗೆ ಪ್ರತಿವರ್ಷವೂ ಆಗುತ್ತದೆ. ನಾನು ವಸಂತ ಋತುವಿನಲ್ಲಿ ಬಹಳಷ್ಟು ಮಾಡಬೇಕೆಂದು ನಿರ್ಧರಿಸುತ್ತೇನೆ. ಆದರೆ ಪ್ರತ್ಯಕ್ಷವಾಗಿ ಏನನ್ನೂ ನಾನು ಮಾಡುವುದಿಲ್ಲ. ವ್ಯವಹಾರೀ ದೃಷ್ಟಿಯಿಂದ ವಸಂತವನ್ನು ಅನುಭವಿಸುವುದೆಂದರೆ. ಪರಿಪಕ್ವವಾದ ದ್ರಾಕ್ಷಿ ಮತ್ತು ಮಾವಿನ ಹಣ್ಣುಗಳನ್ನು ಆಸ್ವಾದಿಸಿದಂತೆಯೇ. ಆದರೆ ಇದು ಕ್ರಿಮಿ - ಕೀಟ - ಇರುವೆಯ ಜೀವನವಾಗಿರುತ್ತದೆ. ವಸಂತದಲ್ಲಿ ಕಲ್ಲು ಒಗೆದು. ಒಂದಾದರೂ ಅಡ್ಡಿಯಿಲ್ಲ ಮಾವಿನಕಾಯಿ ತೆಗೆಯಬೇಕು ಮತ್ತು ಅದನ್ನು ಕಲ್ಲಿನಿಂದಲೇ ಒಡೆದು ಉಪ್ಪು ಹಚ್ಚಿ ತಿನ್ನಬೇಕು. ಅದರ ಒಂದು ಹೋಳನ್ನು ತಿಂದರೂ ಅಡ್ಡಿಯಿಲ್ಲ. ಅದರಿಂದ ಬರುವ ಉನ್ಮೇಷವೇ ನಿಜವಾದ ವಸಂತ! ಗಿಳಿ. ಗುಬ್ಬಿಗಳು ಮೇಲಿಂದ ಮೇಲೆ ಮಾವಿನಕಾಯಿ ತಿನ್ನುತ್ತವೆ. ವಸಂತದಲ್ಲಿ ತಲ್ಲೀನವಾಗಿ ಬಿಡುತ್ತವೆ.

ಪಕ್ಷಿಗಳು ನಿಜವಾಗಿ ತುಂಬ ಖುಶಿಯಲ್ಲಿ ಬದುಕುತ್ತವೆ. ಗುಬ್ಬಿಗಳ ಚಿಂವ್. ಚಿಂವ್ ನಮ್ಮನ್ನು ಎಷ್ಟು ಪ್ರಫುಲ್ಲಿತಗೊಳಿಸುತ್ತದೆ! ನನ್ನ ಮನೆಯ ಕಿಡಕಿಯಿಂದ ಕಾಣುವ ಕಡುಲಿಂಬೆಗೆ ಮೂಡಿದ ಎಳೆ ಕೊಂಬೆಯು ನನ್ನ ಮನಃಪಟಲದಿಂದ ಎಂದೂ ಮಾಯವಾಗಲಾರದು. ಅದರ ಮೇಲ್ಗಡೆ ಬಂದ ಚಿಗುರು. ಅದರ ಸುತ್ತೆಲ್ಲ ಅರಳುವ ಬಿಳೇ ಹೂಗಳು. ಅವುಗಳ ಮೇಲೆಲ್ಲ ಕುಣಿಯುವ ಭ್ರಮರಗಳು ತಮ್ಮ ತಮ್ಮ ಕೆಲಸದಲ್ಲಿ ಮಗ್ನವಾಗಿರುತ್ತವೆ. ಅವು ನಿಜವಾಗಿ ವಸಂತವನ್ನು ಆಸ್ವಾದಿಸುತ್ತವೆ. ಬೇರಿಗೆ ಅಂಟಿಕೊಳ್ಳುವ ಕ್ರಿಮಿ - ಕೀಟಗಳು ವಸಂತನನ್ನು ನಿಃಶೇಷಗೊಳಿಸುತ್ತವೆ.

ದವಾಖಾನೆಯ ವ್ಯವಸ್ಥಾಪನೆಯೊಂದು ದೊಡ್ಡ ತಲೆಹರಟೆ. ಒಮ್ಮೆ ಹಿರಿಯ ನರ್ಸ್ ಬರದಿದ್ದರೆ ಮತ್ತೊಮ್ಮೆ ಎಕ್ಸ್‌ರೇ ಕೆಲಸಗಾರನೇ ಬಂದಿರುವುದಿಲ್ಲ. ಕೆಲವೊಮ್ಮೆ ನಿಗದಿತ ಸಮಯದಲ್ಲಿ ರೋಗಿಗಳೇ ಬರುವುದಿಲ್ಲ. ಆಪರೇಶನ್‌ಗಾಗಿ ಮಾಡಿದ ಎಲ್ಲ ಸಿದ್ಧತೆ ಹಾಳಾಗುತ್ತದೆ.. ಕೆಲವೊಮ್ಮೆ ಲಾಯಿಟ್ ಹೋದರೆ ಇಡೀ ದಿವಸಗಟ್ಟಲೆ ಬರುವುದೇ ಇಲ್ಲ. ಕೆಲವೊಮ್ಮೆ ಬೋಅರಿಂಗ್ ಮೋಟರ್ ಬರದಿದ್ದರೆ. ಕೆಲವೊಮ್ಮೆ ನಳವೇ ಬಂದಾಗುವುದಿಲ್ಲ. ಕೆಲವೊಮ್ಮೆ ಮಾಳಿ ಕೆಲವೊಮ್ಮೆ ಇಲೆಕ್ಟ್ರಿಶಿಯನ್ ವೇಳೆ ಪಾಲಿಸುವುದಿಲ್ಲ. ಕೆಲವೊಮ್ಮೆ ಮಶಿನ್ ಖರೀದಿಸಿದ ಅಂಗಡಿಯವ ಫೋನಿನ ಮೇಲೆ ಫೋನು ಹೊಡೆಯುತ್ತಿರುತ್ತಾನೆ. ಈ ಎಲ್ಲ ವ್ಯವಸ್ಥೆಗೆ ಬೇಸರಗೊಂಡ ನಾನು ಕೆಲವೊಮ್ಮೆ ಸಿಗರೇಟು ಸೇದುತ್ತ ಇವನ್ನೆಲ್ಲ ಮರೆಯುವ ಪ್ರಯತ್ನ ಮಾಡುತ್ತೇನೆ. ಅಷ್ಟರಲ್ಲೇ ರೋಗಿಗಳ ಪ್ರಶ್ನೆ ಆರಂಭವಾಗುತ್ತದೆ. ಆಪರೇಶನ್ನಿನ ಬವಣೆ ಆರಂಭವಾಗುತ್ತದೆ. ದಿವಸದ ಹಿಂದೆ ದಿವಸಗಳು ಹಾರಿದ್ದೇ ತಿಳಿಯುವುದಿಲ್ಲ. ರಾತ್ರಿ ಬೇಸರ ಬರುತ್ತದೆ. ನಾನು ಹಿಂದಿರುಗುವಾಗ ಹೆಚ್ಚು

ಸಲ ಹೊರಗಿನದೇನೂ ಕಾಣುವುದೇ ಇಲ್ಲ. ಕೇವಲ ಬೆಳಕು. ಹೂಗಳು ಕಮರಿರುತ್ತವೆ. ಇಡೀ ದಿನದ ಅಬ್ಬರ - ಇಳಿತಗಳಿಂದ ಮನಸ್ಸು ಖಿನ್ನವಾಗಿರುತ್ತದೆ. ನಾನು ಮನೆಗೆ ಬರುವಾಗ ಹೆಂಡತಿಯಾಗಲಿ. ಮಕ್ಕಳಾಗಲಿ ಸ್ವಾಗತಿಸಲು ಉತ್ಸುಕರಾಗಿರುವುದಿಲ್ಲ. ಅವರನ್ನೆಲ್ಲ ನಾನೆಲ್ಲೂ ತಿರುಗಾಡಲು ಕರೆದುಕೊಂಡು ಹೋಗಿರುವುದಿಲ್ಲವಲ್ಲ ! ಅವಳೂ ಸುಮ್ಮನಿರುತ್ತಾಳೆ. ಹಾಗಾಗಿ ನಾನೇ ಫ್ರಿಜ್ ತೆರೆಯುತ್ತೇನೆ. ಅದರಲ್ಲಿ ತಣ್ಣಗಾದ ನೀರು ಮುಗಿದಿರುತ್ತದೆ. ತಣ್ಣೀರು ಸಿಗದಿದ್ದಲ್ಲಿ ಆ ದಿನದ ಎಲ್ಲಾ ಕಾವು ನೆತ್ತಿಗೇರುತ್ತದೆ. ಮಸ್ತಕಕ್ಕೆ ಈಗಾಗಲೇ ಕಾವೇರಿಕೊಂಡಿರುತ್ತದೆ. ನಾನು ಉಗುರು ಬೆಚ್ಚಗಿನ ನೀರನ್ನೇ ಹೀರುತ್ತೇನೆ. ನಿರ್ದಿಷ್ಟ ಕಿಡಕಿಯ ಹತ್ತಿರ ಒಬ್ಬನೇ ಖಿನ್ನನಾಗಿ ಕುಳಿತಿರುತ್ತೇನೆ. ಕಾರಣ ನನ್ನ ಜೊತೆಗೆ ಯಾರೂ ಇರುವುದಿಲ್ಲ. ವಸಂತವೂ ಇಲ್ಲ. ಮಕ್ಕಳೂ ಇಲ್ಲ. ಹೆಂಡತಿಯೂ ಇಲ್ಲ. ಹವೆ ಕೂಡ ಮುಂದಿರುವ ಕಡುಲಿಂಬೆಯನ್ನಷ್ಟೇ ಅಲುಗಾಡಿಸುತ್ತದೆ ವಿನಃ ನನ್ನ ಕಡೆ ನೋಡುವುದಿಲ್ಲ. ಆಗ ನನ್ನ ಖಿನ್ನತೆಗೆ ಸೀಮೆಯೇ ಇರುವುದಿಲ್ಲ. ಕೋಗಿಲೆಯೂ ಹಾಡುವುದನ್ನು ನಿಲ್ಲಿಸಿರುತ್ತದೆ. ವಸಂತದಲ್ಲಿ ಈ ಕಾವು ಹೇಗೆ ಮತ್ತು ಎಲ್ಲಿಂದ ಬರುತ್ತದೆಂಬ ರಹಸ್ಯವೇ ಬಗೆಹರಿಯುವುದಿಲ್ಲ.

ನಾನು ಬೆಳಿಗ್ಗೆ ಒಮ್ಮೆಲೇ ಏಳುತ್ತೇನೆ. ಸ್ನಾನ ಮಾಡಿ ಒಬ್ಬನೇ ತಿರುಗಾಡಲು ಹೋಗುತ್ತೇನೆ. ರಸ್ತೆಯ ಬದಿಗಿರುವ ಮಾವಿನಮರದಲ್ಲಿ ಬಂಗಾರದ ಅರಕದಂತೆ ಮೆರೆವ ಹಣ್ಣುಗಳನ್ನು ನೋಡುತ್ತೇನೆ. ರಸ್ತೆಯ ಮೇಲೆ ಮೂರು ನಾಲ್ಕು ಮಕ್ಕಳು ಕಲ್ಲಿನಿಂದ ಹಣ್ಣನ್ನು ಕೆಡವುತ್ತಿರುತ್ತಾರೆ. ಇದರಿಂದ ನಾನು ಖುಶಿಪಡುತ್ತೇನೆ. ನಾನೇ ಮುಂದಾಗುತ್ತೇನೆ. ನನ್ನ ಕೈ ಥಳಥಳಿಸುತ್ತದೆ. ಕಲ್ಲು ಹಿಡಿದು ಮಾವಿನ ಹಣ್ಣು ಉದುರಿಸಬೇಕೆನಿಸುತ್ತದೆ. ಆದರೆ ಪುನಃ ನಾನು ಶಕ್ತಿಹೀನನಾಗುತ್ತೇನೆ. ಯಾವ ಯಾವ ಬಂಧನಗಳನ್ನು ಹೊತ್ತು ಇಲ್ಲಿ ನಾನು ತಿರುಗಾಡುತ್ತೇನೆಂಬುದು ದೇವರಿಗೇ ಗೋಚರ ! ಆಗ ಗಡಿಯಾರದ ಕಡೆಗೆ ನನ್ನ ಲಕ್ಷ್ಯ ಹೋಗುತ್ತದೆ. ನಿಂತಲ್ಲಿಯೇ ನಿಂತು ಬಿಡುತ್ತೇನೆ. ಅಲ್ಲಿಂದಲೇ ಹಿಂದಿರುಗುತ್ತೇನೆ. ಪರೇಡು ಮಾಡಿದಂತೆ ಒಂದು ಎರಡು, ಒಂದು ಎರಡು ಮಾಡುತ್ತ ಮನೆಗೆ ಹಿಂದಿರುಗುತ್ತೇನೆ. ಆಗ ಕೋಗಿಲೆ ನನ್ನನ್ನು ಆಹ್ವಾನಿಸುತ್ತದೆ. ಪೇಟೆಯಿಂದ ತೆಗೆದುಕೊಂಡು ಬಂದ ಕಚ್ಚಾ ಮಾವಿಗೆ ಉಪ್ಪು ಹಚ್ಚುವಂತೆ ಸ್ವಲ್ಪ ಜೋರಾಗಿ ಅವಳಿಗೆ ಹೇಳುತ್ತೇನೆ.

ಮಕ್ಕಳ ಪರೀಕ್ಷೆ ತುಂಬ ಹತ್ತಿರ ಬಂದು ಬಿಟ್ಟಿದೆ. ನಾನು ಅಭ್ಯಾಸ ತೆಗೆದುಕೊಳ್ಳುವುದಿಲ್ಲವೆಂದು ಅವಳು ಯಾವಾಗಲೂ ಒದರುತ್ತಿರುತ್ತಾಳೆ. ನಾನೇನು ಅಭ್ಯಾಸ ತೆಗೆದುಕೊಳ್ಳಲಿ ? ಅವರವರು ತಮ್ಮತಮ್ಮ ಕೆಲಸವನ್ನು ಮಾಡಬೇಡವೆ ? ನಾನು ಚಿಕ್ಕವನಿರುವಾಗ ನನ್ನ ಅಭ್ಯಾಸವನ್ನು ಯಾರು ತೆಗೆದುಕೊಂಡಿದ್ದರು ? ಚಿಮಣಿ ಬುರುಡೆಯ ಸುತ್ತಲೂ ನಾವು ಮೂವರು ಅಣ್ಣ - ತಮ್ಮಂದಿರು ಕುಳಿತುಕೊಳ್ಳಬೇಕು. ದೊಡ್ಡದಾಗಿ ಓದುವ ರೂಢಿಯೂ ಇರಲಿಲ್ಲ. ನಮಗೆ ಕಲಿಸಲು ಬೇಕಾಗುವಷ್ಟು ಶಿಕ್ಷಣವೂ ಆಯಿಗೆ ಆಗಿರಲಿಲ್ಲ. ತಂದೆಯಂತೂ ಯಾವಾಗಲೂ ತಿರುಗಾಟದಲ್ಲೇ ಇರುವುದು. ಆದರೆ ಅಭ್ಯಾಸ ಮಾಡುವಾಗ ಆಯಿ ನಮ್ಮ ಹತ್ತಿರ ಕೂಡ್ರುತ್ತಿದ್ದಳು. ಅವಳು ಅಡಿಗೆ ಮಾಡಿಟ್ಟಿರುತ್ತಿದ್ದಳು. ಅವಳ ಕೈ ನಮ್ಮ ಹಿಂದೆಯೇ ಇರುತ್ತಿತ್ತು. ಮಧ್ಯದಲ್ಲೇ ಅವಳು ಕುಡಿಯಲು ನೀರು ತಂದುಕೊಡುತ್ತಿದ್ದಳು. ನಮ್ಮ ಸಲುವಾಗಿ ತುಂಬ ಹೊತ್ತಿನ ವರೆಗೆ ಎಚ್ಚರವಾಗಿರುತ್ತಿದ್ದಳು. ಅವಳ ಕೆಲಸ ಕೇವಲ ನಮ್ಮ ಹತ್ತಿರ ಕುಳಿತುಕೊಂಡು ಪ್ರೀತಿಯ ಕಣ್ಣಿನಿಂದ ನೋಡುವುದು. ಉಗಮಿಸುವ ಸೂರ್ಯನ ಕಡೆ ನೋಡುವಂತೆ ಅವಳು ನಮ್ಮನ್ನು ನೋಡುತ್ತಿದ್ದಳು !

ನನ್ನ ಬಾಲ್ಯದ ದಿನಗಳ ವಸಂತ ನನ್ನ ಲಕ್ಷ್ಯದಲ್ಲಿ ಇನ್ನೂ ಇದೆ. ಮಾವಿನಮರದ ಹಿಂಡುಗಳಲ್ಲೆಲ್ಲ ನಾವು ಸುತ್ತಾಡುತ್ತಿದ್ದೆವು. ಮಾವಿನಕಾಯಿ ತಿನ್ನುತ್ತಿದ್ದೆವು. ಯಾವುದಾದರೂ

ಕೆರೆಯಲ್ಲಿ ಮನಬಂದಂತೆ ಮುಳುಗುತ್ತಿದ್ದೆವು. ಬಟ್ಟೆಯನ್ನು ಶರೀರದ ಮೇಲೆ ಒಣಗಿಸುತ್ತಿದ್ದೆವು. ಆಯಿಯ ಅನುಮತಿ ತೆಗೆದುಕೊಂಡಿರುತ್ತಿರಲಿಲ್ಲ. ಮನೆಗೆ ಹಿಂದಿರುಗಿದ ಕೂಡಲೇ ಹೊಡೆತ ತಿನ್ನುವುದು ಮತ್ತು ಪುನಃ ಊಟ ಮಾಡಿ ಹೊರಗೆ ಹಾರುವುದು. ವಸಂತನ ಅಂಗಾಂಗಗಳ ಮೇಲೆ ಮುಕ್ತವಾಗಿ ಕುಣಿಯುವುದು. ಅಂದು ಮನಕ್ಕಿದ್ದ ಈ ಮುಕ್ತತೆ ಇಂದೆಲ್ಲಿಗೆ ಹೋಯಿತು ? ಒಮ್ಮೊಮ್ಮೆ ಮನಸ್ಸಿನ ಮೇಲೆಯೇ ಶಸ್ತ್ರಕ್ರಿಯೆ ಮಾಡೋಣವೆನಿಸುತ್ತದೆ. ಚಾಕು ಹಾಕಿ ದಪ್ಪ ಚರ್ಮವನ್ನು ಚೂರು ಚೂರು ಮಾಡಬೇಕು. ಒಳಗೆ ಸೇರಿದ ಹೊರಳೆಯನ್ನು ಗೀಚಿ ಹೊರಗೆಳೆಯಬೇಕು. ಅದನ್ನೆಲ್ಲ ಸ್ವಚ್ಛವಾಗಿ ತೊಳೆದುಹಾಕಬೇಕು. ಆಗ ನೋಡಬೇಕು. ಪುನಃ ಅದು ಮುಕ್ತತೆ ಪಡೆಯುತ್ತದೋ ಇಲ್ಲವೋ ಎಂಬುದನ್ನು.

ಇಂದಿನ ದಿನವೆಲ್ಲ ಬಹಳ ಕೆಲಸದಲ್ಲೇ ಕಳೆದಿತ್ತು. ರಜೆ ಶುರುವಾಗಿತ್ತು. ಹಾಗಾಗಿ ಮಕ್ಕಳ ಓಡಾಟ ಹೆಚ್ಚಿತ್ತು. ರಜೆಯಲ್ಲಿ ನಿರ್ದಿಷ್ಟ ಪೋಲಿಯೋಗ್ರಸ್ತ ಮಕ್ಕಳ ಆಪರೇಶನ್ ಒಮ್ಮೆಲೇ ಬಂದುಬಿಡುತ್ತದೆ. ರುಗ್ಣರ ಒತ್ತಡವೂ ಕಡಿಮೆಯಿರುವುದಿಲ್ಲ. ಹಾಸ್ಪಿಟಲ್ ತುಂಬಿರುತ್ತಾರೆ. ಎಲ್ಲವನ್ನೂ ಮುಗಿಸಿ ಹಾಸ್ಪಿಟಲಿನಲ್ಲಿ ಒಂದು ' ರೌಂಡ್ ' ಹಾಕುವಷ್ಟರಲ್ಲಿ ರಾತ್ರಿಯಾಗಿರುತ್ತದೆ. ನಾನು ಹಿಂದಿರುಗಿ ಬರುವಾಗ ಮಕ್ಕಳೆಲ್ಲ ಮಲಗಿರುತ್ತವೆ. ಅವಳೂ ನಿದ್ರಿಸಿಬಿಡುತ್ತಾಳೆ. ನಾನು ಕಿಡಕಿಯ ಹತ್ತಿರ ಕೂಡ್ರುತ್ತೇನೆ. ಸಾವಕಾಶವಾಗಿ ಶಾಂತವಾಗಲು ಪ್ರಯತ್ನಿಸುತ್ತೇನೆ. ಊಟ ಮಾಡಿ ಮಲಗಿಬಿಡುತ್ತೇನೆ.

ವಸಂತ ಮತ್ತು ನನ್ನ ಮೂಕ ಸಂವಾದ ಸತತವಾಗಿ ನಡೆದೇ ಇರುತ್ತದೆ. ನಾನು ಅದರ ಸಂಪರ್ಕಕ್ಕಾಗಿ. ಸಹವಾಸಕ್ಕಾಗಿ ಸಿದ್ಧನಾಗುತ್ತೇನೆ. ಹಾಸ್ಪಿಟಲ್ಲಿನ ಕೆಲಸ ಇಲ್ಲದಾಗ ಕೌಟುಂಬಿಕ ವ್ಯಾಪವಷ್ಟೇ ನಮ್ಮ ಮಧ್ಯೆ ಬರುತ್ತದೆಂದೇನೂ ಅರ್ಥವಲ್ಲ. ಇನ್ನೂ ಒಂದು ವಿಚಾರ ನಮ್ಮ ನಡುವೆ ಬರುತ್ತದೆ. ಅದೆಂದರೆ ಸ್ವಂತದಲ್ಲಿ ನಡೆಯುವ ಮಾನಸಿಕ ಸಂಘರ್ಷ.

ಇದು ಇನ್ಯಾವ ಸಂಘರ್ಷ ? ಈ ರೀತಿ ಬೇರೆ ರೂಪ ಹೊಂದಿ ಬರುವ. ಮನೆ ಮಂದಿಗಿಂತ ಮತ್ತು ಸಮಾಜಕ್ಕಿಂತ ಬೇರೆ ಅಸ್ತಿತ್ವ ಹೊಂದಿರುವ ಈ ಸಂಘರ್ಷ ಯಾವುದು ? ಇದು ಮನದ ಸಂಘರ್ಷ. ಇದು ಮನಮನಗಳಲ್ಲಿ ಹರಿಯುವಂತಹದ್ದು. ಇದು ಸ್ವಂತವನ್ನೇ ನುಂಗಿಹಾಕುವ. ಬಲಿಕೊಡುವ. ಗೆದ್ದಲು ಹತ್ತಿದಂತೆ ಎಲ್ಲವನ್ನೂ ಮುಗಿಸಿಬಿಡುವಂತಹದ್ದು ! ಈ ಸಂಘರ್ಷ ಮಾನವೀ ಜೀವನಕ್ಕೆ ಶಾಪವೋ. ವರದಾನವೋ ಎಂಬುದು ಅರಿಯಲು ಅಸಾಧ್ಯವಾದಂತಹುದು. ಈ ಸಂಘರ್ಷ ಸ್ವಂತಕ್ಕೆ ಉತ್ತಮವಾದಂತೆ. ಕೆಡಕನ್ನೂ ಬಗೆಯುವಂತಹದ್ದು ! ಈ ಸಂಘರ್ಷ ಸತ್ವದ್ದು ಮತ್ತು ರಜೋಗುಣದ್ದು. ಇದು ಪ್ರತಿಯೊಬ್ಬ ಮಾನವನಲ್ಲಿ ಎಷ್ಟಿರುತ್ತದೆ ? ಇರುತ್ತದೋ ಇಲ್ಲವೋ ? ಎಷ್ಟಿರಬೇಕು ? ಇರಬೇಕೋ ಬೇಡವೋ ? ಇಂತಹ ಹಲವು ಪ್ರಶ್ನೆಗಳು ಉದ್ಭವಿಸುತ್ತವೆ. ಆದರೆ ನನ್ನಲ್ಲಿಯ ಈ ಸಂಘರ್ಷ ತುಂಬ ದೊಡ್ಡದಾಗಿದೆ. ಸತತವಾಗಿ ಕುರುಕ್ಷೇತ್ರದ ಅವಸ್ಥೆಯನ್ನೇ ನನ್ನ ಮನದಲ್ಲಿ ನಿರ್ಮಿಸಿದ ಈ ಸಂಘರ್ಷವು ವಸಂತದಲ್ಲಿ ಮಾತ್ರ ಚೆನ್ನಾಗಿಯೇ ತಲೆ ಎತ್ತುತ್ತದೆ. ನನ್ನಲ್ಲಿರುವ ಒಳ್ಳೆಯ ಹಾಗೂ ಕೆಟ್ಟವುಗಳೆಲ್ಲ ಎದುರುಬದುರಾಗಿ ಯುದ್ಧಕ್ಕೆ ತೊಡಗುತ್ತವೆ. ಅರ್ಜುನನ ಅವಸ್ಥೆ ನನ್ನದಾಗುತ್ತದೆ. ಏನನ್ನು ಹೊಡೆಯಬೇಕು ? ಏನನ್ನು ಬಿಡಬೇಕು ? ಹೊಡೆಯುವುದೂ ಸಹ ನನ್ನಲ್ಲಿರದಂತೆ ಆಗುತ್ತದೆ. ಹೊಡೆಯುವ ಸಾಮರ್ಥ್ಯವನ್ನೂ ನಿಸರ್ಗ ನನ್ನಲ್ಲಿ ಕೊಟ್ಟಿರುವುದಿಲ್ಲ. ನಾನು ಕೆಟ್ಟದ್ದನ್ನಾಗಲೀ. ಒಳ್ಳೆಯದನ್ನಾಗಲೀ ಹೊಡೆಯಲು ಸಮರ್ಥ ನಾಗುವುದಿಲ್ಲ. ಈ ಯುದ್ಧದಲ್ಲಿ ಕೆಟ್ಟದ್ದರ ಪ್ರಭಾವವಾಗಿ ಅದರ ಮೇಲಾಟವಾಗುತ್ತದೆ. ಆಗ ನಾನು ಅಸ್ವಸ್ಥನಾಗುತ್ತೇನೆ. " ಸಂಘರ್ಷ ಹೆಚ್ಚಿತು. ಸಂಘರ್ಷ ಹೆಚ್ಚಿತೆಂದು " ನಾನು ಡಂಗುರ ಹೊಡೆಯುತ್ತೇನೆ. ಒಳ್ಳೆಯದಕ್ಕೆ ಯಶ ಬರುವಷ್ಟರಲ್ಲೇ ನಾನು ಶಾಂತವಾಗುವ

ಪ್ರಯತ್ನಮಾಡುತ್ತೇನೆ. ಆದರೆ ಇವೆಲ್ಲ ಕ್ಷಣಭಂಗುರವೇ ? ಯಶ ಅಥವಾ ಗೆಲುವು ಯಾರೊಂದಿಗೂ ಶಾಶ್ವತವಾಗಿ ನಿಲ್ಲುವುದಿಲ್ಲ. ನಾನು ಮಾತ್ರ ರಕ್ತಮಯವಾಗುತ್ತಿರುತ್ತೇನೆ. ಈ ಸಂಘರ್ಷದಿಂದಾಗಿ ತಲೆಯನ್ನು ಮೇಲೆತ್ತಲೂ ಸಾಧ್ಯವಾಗುವುದಿಲ್ಲ. ಎಷ್ಟೋ ದಿನಗಳು ಹೀಗೇ ಸಾಗುತ್ತವೆ. ಆದರೆ ವಸಂತದ ಕೇವಲ ಸರಳ ಸ್ಮರಣೆಯೂ ಆಗುವುದಿಲ್ಲ ಎಂದು ನನಗನಿಸುತ್ತದೆ. ಈ ಸಂಘರ್ಷ ಕಡಿಮೆಯಾದಷ್ಟೇ ಮನುಷ್ಯ ಸುಖಿಯಾಗಿರುತ್ತಾನೆ. ನನಗೆ ತಿಳಿದ ಮಟ್ಟಿಗೆ ಇದು ಪ್ರತಿಯೊಬ್ಬ ವ್ಯಕ್ತಿಯಲ್ಲೂ ಕಡಿಮೆ ಹೆಚ್ಚು ಪ್ರಮಾಣದಲ್ಲಿ ನಡೆದೇ ಇರುತ್ತದೆ. ಸಂಘರ್ಷವೇ ಜೀವನದ ನೈಜ ಸ್ವರೂಪವಾಗಿ ಹೊರಗಿನ ಸಂಘರ್ಷಕ್ಕಿಂತ ಎಷ್ಟೋ ಪಟ್ಟು ನಮ್ಮನ್ನು ಅಸ್ಪಷ್ಟಗೊಳಿಸುತ್ತದೆ. ಬಂಗಾರವು ಬೆಂಕಿ ಹೊತ್ತಿಕೊಂಡಾಗ ಆತ್ಮಸ್ವರೂಪವನ್ನು ತೋರಿಸಿದಂತೆ ಈ ಸಂಘರ್ಷವು ಮನುಷ್ಯನನ್ನು ಹೊತ್ತಿಸಿ ಅವನ ಆತ್ಮಸ್ವರೂಪವನ್ನು ತೋರಿಸುತ್ತದೆ. ಅದಕ್ಕೆ ವೇಳೆಯಾಗಲೀ ಕಾಲವಾಗಲೀ ಇಲ್ಲ. ಅದು ಸತತವಾಗಿ ನಮ್ಮೊಂದಿಗೆ ಹೊಂದಿಕೊಂಡಿರುತ್ತದೆ. ಅದು ನಮ್ಮನ್ನು ಎಂದೂ ಬಿಡುವುದಿಲ್ಲ. ಪರೋಪಜೀವಿಯಂತೆ ನಮ್ಮನ್ನು ಅವಲಂಬಿಸಿಯೇ ಬದುಕುತ್ತದೆ. ಆದರೆ ನಮ್ಮನ್ನು ಶೋಷಿಸಿಯೇ ಅದು ಬದುಕುತ್ತದೆ. ಸ್ವಂತ ಅಸ್ತಿತ್ವದೊಂದಿಗೆ ಸಂಧಾನ ಮಾಡಿಕೊಂಡು ವಿಷಾರಿ ನಾಗರಹಾವಿನಂತೆ ಅದು ಹೆಡೆಯೆತ್ತಿರುತ್ತದೆ. ಆದರೆ ಆತ್ಮತತ್ವದ ಸಂರಕ್ಷಣೆಯನ್ನು ಮಾತ್ರ ಅದು ಮಾಡುತ್ತಿರುತ್ತದೆ. ಅದು ನಮಗೆ ಸಂಪೂರ್ಣವಾಗಿ ಮರಣ ಹೊಂದಲು ಬಿಡುವುದಿಲ್ಲ. ಅದು ಭಯಾನಕ ಸಂಕಟದಿಂದ ರಕ್ಷಿಸುತ್ತದೆ. ಮತ್ತು ಅಷ್ಟೇ ಶಕ್ತಿಯಿಂದ ಪುನಃ ಧ್ವಂಸಗೊಳಿಸುತ್ತದೆ. ವಜ್ರವು ಮಾಣಿಕವನ್ನು ರಕ್ಷಿಸಿದಂತೆ ಅದು ನಮ್ಮ ಜೀವನವನ್ನು ರಕ್ಷಿಸುತ್ತದೆ. ಸಮಾಜದಲ್ಲಿ ಸತ್ಯ ಮತ್ತು ಅಸತ್ಯಗಳಲ್ಲಿ ಯುಗಯುಗಗಳಿಂದ ಯಾವಾಗಲೂ ಸಂಧಾನ ನಡೆದಂತೆ ಮನುಷ್ಯನ ಮನದಲ್ಲೂ ಉತ್ತಮ ಹಾಗೂ ಕೆಟ್ಟದ್ದರ ಸಂಘರ್ಷ ನಡೆದಿರುತ್ತದೆ. ಮನುಷ್ಯನ ಮನದಲ್ಲೂ ಉತ್ತಮ ಹಾಗೂ ಕೆಟ್ಟದ್ದರ ಸಂಘರ್ಷ ನಡೆದಿರುತ್ತದೆ. ಮನುಷ್ಯನ ಮನಸ್ಸೇ ಈ ಸಂಘರ್ಷದ ಕರ್ಮಭೂಮಿಯಾಗಿದೆ. ಈ ಸಂಘರ್ಷ. ಮನೆಯ ವಿರೋಧ ಮತ್ತು ವ್ಯವಸಾಯದಲ್ಲಿಯ ಅಸಮತೋಲಗಳೆಲ್ಲ ನನ್ನನ್ನು ಅಭಿಮನ್ಯುವಿನಂತೆ ವ್ಯೂಹದಲ್ಲಿ ಸಿಲುಕಿಸಿರುವಾಗ ನಾನಾದರೂ ವಸಂತದ ಕಡೆಗೆ ಹೇಗೆ ಹೋಗಲಿ ? ವಸಂತ ನನಗೆ ಯಾವಾಗಲೂ ಸನ್ನೆ ಮಾಡುತ್ತಿರುತ್ತದೆ. ಕರೆಯುತ್ತಿರುತ್ತದೆ. ಕೋಗಿಲೆಯೂ ಜೊತೆ ಕೊಡುತ್ತದೆ. ಆದರೆ ನಾನು ಮಾತ್ರ ಈ ಚಕ್ರವ್ಯೂಹದಲ್ಲಿ ಸಿಲುಕಿರುತ್ತೇನೆ. ಅಭಿಮನ್ಯುವಿನಂತೆ ಅಳುತ್ತಿರುತ್ತೇನೆ. ವಿಫಲ ನಾಗಿರುತ್ತೇನೆ. ನಾನು ಹೊರಗೆ ಬಂದು ವಸಂತನನ್ನು ಆಲಿಂಗಿಸಲಾರೆ. ಪ್ರತಿ ವರ್ಷವೂ ಹೀಗಾಗುತ್ತದೆ. ಪ್ರತಿ ವರ್ಷ ಈ ಚಕ್ರವ್ಯೂಹವನ್ನು ನಾನೇ ಭೇದಿಸಬೇಕೆಂದು ನಿರ್ಧರಿಸುತ್ತೇನೆ. ವಸಂತದೊಂದಿಗೆ ತಾದಾತ್ಮ್ಯ ಹೊಂದಲು ಯತ್ನಿಸುತ್ತೇನೆ. ಆದರೆ ಪ್ರತಿವರ್ಷ ವಸಂತ ಹೀಗೆಯೇ ನುಸುಳಿಕೊಂಡುಬಿಡುತ್ತಾನೆ. ನಾನು ಜೀವಂತ ಇರುವ ವರೆಗೂ ಹೀಗೆಯೇ ಆಗುವುದು ! ವಸಂತದೊಂದಿಗೆ ಮುಕ್ತ ಆಲಿಂಗನವಾಗುವುದಾದರೂ ಎಂದು ?

ಬಹಳಷ್ಟು ಕೆಲಸ ಮಾಡಿ ನಾನು ಸಂಜೆ ಮನೆಗೆ ಹಿಂದಿರುಗುತ್ತೇನೆ: ಕೇವಲ ಹೆಂಡತಿಗಾಗಿ. ಮಕ್ಕಳಿಗಾಗಿ. ಇಂದು ಮಾತ್ರ ಅವಳು ಎಚ್ಚತ್ತಿರುತ್ತಾಳೆ. ನನ್ನ ಹತ್ತಿರ ಬರುತ್ತಾಳೆ. ಅಪ್ಪನ ಅಂತರಂಗದ ಕಳವಳ ಮಕ್ಕಳಿಗೆ ತಿಳಿದಿರುತ್ತದೋ ಹೇಗೆ ? ಯಾರಿಗೆ ಗೊತ್ತು ? ಪತ್ನಿಯೂ ಸ್ವಲ್ಪ ಶಾಂತವಾಗಿರುತ್ತಾಳೆ. ಫ್ರಿಜ್‌ನಲ್ಲಿ ತಂಪು ನೀರು ಇರುತ್ತದೆ. ಕಿಡಕಿಯ ಹತ್ತಿರ ನಾಲ್ಕು ಖುರ್ಚಿಗಳಿರುತ್ತವೆ. ಕಹಿಲಿಂಬೆಯ ಗಿಡವನ್ನು ಅಲುಗಾಡಿಸುವಂತೆ ತಂಪು ಹವೆ ಕಿಡಕಿಯಿಂದ ಬರುತ್ತಿರುತ್ತದೆ. ಮಗಳು ಕವಿತೆಯನ್ನು ರಚಿಸುತ್ತಿರುತ್ತಾಳೆ. ಅದನ್ನು ನನಗೆ ಓದಿ ತೋರಿಸಲು ಉತ್ಸುಕಳಾಗಿರುತ್ತಾಳೆ. ಚಿಕ್ಕವಳು ತನ್ನ ಗದ್ದಕ್ಕೆ ಆಧಾರ ಕೊಟ್ಟಿರುತ್ತಾಳೆ. ದೊಡ್ಡವಳಂತೆ ಹಾವಭಾವ ಮಾಡುತ್ತಾಳೆ. ಅವಳು ನನ್ನೆದುರು ಬಂದು ನಿಂತು ಹೇಳಲಾರಂಭಿಸುತ್ತಾಳೆ:

ಚೈತ್ರ ಬಂತು. ಚೈತ್ರ ಬಂತು
ಮನಕೆಲ್ಲ ಚೈತನ್ಯ ತಂತು
ಹಾಡುತ್ತ ಕುಣಿಯುತ್ತ ಬಂತು
ಪಕ್ಷಿಸಂಕುಲಕೆಲ್ಲ ಹರುಷ ತಂತು.

ಸುತ್ತಮುತ್ತ ಹಸಿರು ಹೊನ್ನು
ಬಾಳು ತುಂಬ ಬೆಳಕು ಚೆನ್ನು
ಋತುಗಳ ರಾಜ ವಸಂತನು
ಚೆಲುವು ಹಿಡಿದು ನಿಂತನು !

ಕವಿತೆ ಮುಗಿಯುತ್ತದೆ. ನನಗೆ ಅಶ್ರುತರ್ಪಣ ಅನಿವಾರ್ಯವಾಗುತ್ತದೆ. ಅವಳನ್ನು ಹತ್ತಿರ ಬರಮಾಡಿಕೊಂಡು ಆಲಿಂಗಿಸುತ್ತೇನೆ. ಆಗ ವಸಂತನನ್ನು ಆಲಿಂಗಿಸಿದ ಅನುಭವವಾಗುತ್ತದೆ.

ಅಷ್ಟರಲ್ಲಿ ಟಿ. ವಿ. ಯಲ್ಲಿ ಸುದ್ದಿ ಆರಂಭವಾಗುತ್ತದೆ. ಕೇರಳದಲ್ಲಿ ಮಾನ್ಸೂನ್ ಆಗಮನ ಎಂಬ ಸುದ್ದಿ ನನಗೆ ಸುಸ್ಪಷ್ಟವಾಗಿ ಕೇಳಿ ಬರುತ್ತದೆ.

● ▼

ಡಾ. ಪಿ. ಜಿ. ಕುಲಕರ್ಣಿ, ೩೦೧. ಸುಪ್ರಿಯಾ ಅಪಾರ್ಟ್‌ಮೆಂಟ್. ಶಿವಾಜಿಪಾರ್ಕ್. ಕೊಲ್ಲಾಪುರ - ೪೧೬ ೦೦೭ ✆ : ೦೨೩೧ - ೬೫೩೦೫೬

ಕೃ. ಶಿ. ಹೆಗಡೆ, ೬೦೪. ಕೆಪಿ ಟಾವರ್ ೧. ಫಾತಿಮಾನಗರ. ಸೊಲ್ಲಾಪುರಮಾರ್ಗ. ಪುಣೆ - ೪೧೧ ೦೧೩
✆ : ೦೨೦ - ೫೬೫೯೪೬೫

▲ **ಕವಿತೆ - ೭**

ಹನಿ ಹನಿ ಹನಿ

ಮ. ಕೃ. ಮೇಗಾಡಿ

೧ : ವಿಪರ್ಯಾಸ :
ಅಂದಿನ ರಾಜಕಾರಣಿ ಬಸವಣ್ಣ
ಹಗರಣ ಪಂಕ್ತಿ ಮಧ್ಯೆ ಕುಳಿತಿದ್ದನಯ್ಯ
ಇಂದಿನ ರಾಜಕಾರಣಿ ಹಗರಣ
ಗಳನ್ನೇ ಹಾಸಿ ಹೊದ್ದು ಮಲಗಿದ್ದಾನಯ್ಯ.

೩ : ಚುಕ್ಕಿ - ಚಾಕು :
ನಲ್ಲೆ,
ಪ್ರೇಮ ತುಂಬಿದ ನಿನ್ನ ಮಾತು
ರಾತ್ರಿ ಹೊಳೆವ ಚುಕ್ಕಿಗಳು.
ಮಾತಲ್ಲೆ ಬೇಡಿಕೆಗಳು
ಮೈವತ್ತು ಬಂದೊಡನೆ
ಅವು ನನ್ನ ಕಿಸೆ
ಕತ್ತರಿಸೋ ಚಾಕುಗಳು.

೨ : ಕಣ್ಣು :
ಅಧಿಕಾರಕೆ ಮುನ್ನ
ಇವರವು ಮುದ್ದಿನ ಕಣ್ಣು
ಅಧಿಕಾರ ಸಿಕ್ಕಾಗ
ಹದ್ದಿನ ಕಣ್ಣು

೪ : ಕವಿ :
ಹೊಂಗನಸುಗಳ,
ಹೊತ್ತಿ ಉರಿಯುವ ನೋವು
ನಿರಾಶೆಗಳ
ಬಂಡೆಯನು
ಶಬ್ದಗಳ ಉಳಿಯಿಂದ ಕಟೆದು
ರೂಪ ಕೊಡುವ ಶಿಲ್ಪಿ.

● ▼

ಮ. ಕೃ. ಮೇಗಾಡಿ, ಪತ್ರಿಕಾ ವರದಿಗಾರರು. ತೇರದಾಳ - ೫೮೭ ೩೧೫. ತಾ. : ಜಮಖಂಡಿ

ಪುಸ್ತಕ ಪರಿಶೀಲನೆ

೧. ಮಾಸ್ಟರ್ ಬಿಲ್ಡರ್

▲ ಅನು. : ಶ್ರೀನಿವಾಸ ಸುತ್ರಾವೆ

ಹೆನ್ರಿಕ್ ಇಬ್ಸನ್ (೧೮೨೮ - ೧೯೦೬) ನಾರ್ವೆಯ ನಾಟಕಕಾರ. ಆ ಕಾಲದ ಶ್ರೇಷ್ಠ ಲೇಖಕರಾದ ಫಯ್‌ದರ್ ಡಾಸ್ಟವಸ್ಕಿ, ಲಿಯೋ ಟಾಲ್‌ಸ್ಟಾಯ್, ಆ್ಯಂಟನ್ ಚೆಕಾವ್ ಮೊದಲಾದವರ ಸಮಕಾಲೀನ. ಆದರೆ ನಾರ್ವೆ ದೇಶದ ಅಂತರ್‌ರಾಷ್ಟ್ರೀಯ ಖ್ಯಾತಿಯ ಲೇಖಕ ಇಬ್ಸನ್ ಒಬ್ಬನೇ. ಇಪ್ಪತ್ತನೆಯ ಶತಮಾನದಲ್ಲೂ ಇಬ್ಸನ್‌ನನ್ನು ಹಿಂದೆ ಹಾಕಿದ ಲೇಖಕರು ಆ ದೇಶದಿಂದ ಬಂದಿಲ್ಲ.

ಖ್ಯಾತ ಇಂಗ್ಲಿಷ್ ವಿಮರ್ಶಕ ಮ್ಯಾಲ್ಕಂ ಬ್ರಾಡ್‌ಬರಿ ಇಬ್ಸನ್‌ನನ್ನು ಹತ್ತು ಶ್ರೇಷ್ಠ ಆಧುನಿಕ ಲೇಖಕರ ಸಾಲಿಗೆ ಸೇರಿಸುತ್ತಾನೆ. ಬ್ರಾಡ್‌ಬರಿ ಶ್ರೇಷ್ಠ ಆಧುನಿಕ ನಾಟಕಕಾರರೆಂದು ಗುರುತಿಸುವ ಇಬ್ಬರ ಪೈಕಿ ಒಬ್ಬ ಇಬ್ಸನ್; ಇನ್ನೊಬ್ಬ ಇಟೆಲಿಯ ಲೂಜಿ ಪಿರಾಂಡೆಲೋ (ನೋಡಿ : The Modern World, ಪೆಂಗ್ವಿನ್ ಬುಕ್ಸ್, ೧೯೮೯). ಈ ಆಯ್ಕೆ ಬಗ್ಗೆ ಭಿನ್ನಾಭಿಪ್ರಾಯ ಇರಬಹುದು. ಆದರೆ, ಇಬ್ಸನ್ ಸುಮಾರು ಐವತ್ತು ವರ್ಷಗಳ ಕಾಲ ಯುರೋಪಿನ ಸಾಹಿತ್ಯ - ಸಮಾಜಗಳ ಮೇಲೆ ಪ್ರಭಾವ ಬೀರಿದ ಎಂಬುದು ನಿರ್ವಿವಾದ. ಅವನ ಎಲ್ಲಾ ಮುಖ್ಯ ನಾಟಕಗಳು ಜೀವನದ ಬಗ್ಗೆ ಸಾಹಿತ್ಯದ ಬಗ್ಗೆ ಹೊಸ ಚರ್ಚೆ ಪ್ರಾರಂಭಿಸುತ್ತಿದ್ದವು. ಇಪ್ಪತ್ತನೆಯ ಶತಮಾನದ ಅನೇಕ ಸಾಹಿತ್ಯಿಕ, ಸಾಮಾಜಿಕ ಆಂದೋಲನಗಳನ್ನು ಅವನು ಮೊದಲಾಗಿ ಕಂಡ. ಜೊತೆಗೆ, ಬೇರೆ ಬೇರೆ ಶೈಲಿಗಳಲ್ಲಿ ಬರೆಯುತ್ತಾ ಆಗಿನ ಕಾಲದ ಅತ್ಯಂತ ಪ್ರಯೋಗಶೀಲ ನಾಟಕಕಾರನೂ ಆಗಿದ್ದ.

ಅವನ ನಾಟಕ ಮಾಸ್ಟರ್ ಬಿಲ್ಡರ್ (೧೮೯೨) ಸಾಂಕೇತಿಕತೆ ರೂಢಿಸಿಕೊಳ್ಳಲು ಮಾಡಿದ ಪ್ರಯತ್ನಗಳಲ್ಲೊಂದು. ಕೊನೆಯಲ್ಲಿ ಹಾಲ್‌ವರ್ಡ್ ಸಾಲ್ನೆಸ್ ಎತ್ತರಕ್ಕೆ ಹತ್ತುವುದು, ಕೆಳಗೆ ಬೀಳುವುದು ಬಲಾತ್ಕಾರವಾಗಿ ನಾಟಕದ ಮೇಲೆ ಹೇರಿದ ಸಾಂಕೇತಿಕತೆ ಎನ್ನುವವರಿದ್ದಾರೆ. ಆದರೆ, ಈ ಘಟನೆಗಿಂತ ಹಿಂದೆ ಹಿಲ್ಡಾ ಅವನು ಹಿಂದೊಮ್ಮೆ ಎತ್ತರಕ್ಕೆ ಏರಿದ್ದನ್ನು ನೆನಪಿಸುತ್ತಾಳೆ, ಪುನಃ ಹಾಗೆ ಎತ್ತರಕ್ಕೆ ಏರುವಂತೆ ಹುರಿದುಂಬಿಸುತ್ತಾಳೆ. ಸಾಲ್ನೆಸ್ ಅವಳನ್ನು ಮೆಚ್ಚಿಸುವುದಕ್ಕಾಗಿಯೇ ಫೋರ್‌ಮನ್ ಬದಲು ತಾನೇ ಎತ್ತರಕ್ಕೆ ಏರುವ ಸಾಹಸ ಮಾಡಿರಬಹುದು. ಹೀಗೆ ಯೋಚಿಸಿದಾಗ ಸಾಲ್ನೆಸ್‌ನ ಹತ್ತುವಿಕೆ ಬಲಾತ್ಕಾರದ ಸಾಂಕೇತಿಕತೆ ಎನ್ನಿಸದೆ ಹಿಲ್ಡಾಳ ಹುರಿದುಂಬಿಸುವಿಕೆಗೆ ಮನಶ್ಶಾಸ್ತ್ರೀಯವಾಗಿ ಸಹಜವಾದ ಪ್ರತಿಕ್ರಿಯೆ ಎನ್ನಿಸುತ್ತದೆ. ಜೊತೆಗೆ, ಇದು ಜೀವನದಲ್ಲಿಯೇ ಮೊದಲ ಸಲ ಅವನು ಇನ್ನೊಬ್ಬರನ್ನು ಮೆಚ್ಚಿಸಲು ಮಾಡುವ ಕ್ರಿಯೆಯೂ ಆಗುತ್ತದೆ. ಇದುವರೆಗೆ ಪ್ರತಿಯೊಂದನ್ನೂ ಉಪಯುಕ್ತತೆಯ ದೃಷ್ಟಿಯಿಂದ ಮಾತ್ರ ಮಾಡುತ್ತಿದ್ದ ಅವನ ವ್ಯಕ್ತಿತ್ವದ ಹೊಸ ಮಗ್ಗುಲೊಂದನ್ನು ಇಬ್ಸನ್ ಈ ಮೂಲಕ ತೋರಿಸುತ್ತಿದ್ದಾನೆ.

ಎಲಿಜಾಬೆಥನ್ ದುರಂತನಾಟಕಗಳಿಗೂ ಈ ನಾಟಕಕ್ಕೂ ಇರುವ ಸಾಮ್ಯ ಕುತೂಹಲಕರವಾದದ್ದು. ಎಲಿಜಾಬೆಥನ್ ದುರಂತನಾಟಕಗಳ ನಾಯಕನಂತೆ ಸಾಲ್ನೆಸ್‌ನೂ ತನಗಿಂತ ಮೇಲಿನವರನ್ನು ತುಳಿದು ಎತ್ತರದ ಸ್ಥಾನ ಪಡೆಯುತ್ತಾನೆ. ಅವರಂತೆ ಇವನಿಗೂ ಸರಿ - ತಪ್ಪುಗಳ ಪರಿವೆಯಿಲ್ಲ. ಅವರಂತೆ ಇವನೂ ಮಾನಸಿಕ ಮತ್ತು ಕೌಟುಂಬಿಕ ಶಾಂತಿ ಕಳೆದುಕೊಂಡಿದ್ದಾನೆ; ಹೊಸ ಜನಾಂಗ ಯಾವಾಗಲಾದರೂ ತನ್ನನ್ನು ಒತ್ತರಿಸಬಹುದೆಂಬ ಭಯದಿಂದ ಭೀತನಾಗಿದ್ದಾನೆ. ಕೊನೆಗೆ ಸಾರ್ವಜನಿಕವಾಗಿ ಎತ್ತರದ ಸ್ಥಾನಕ್ಕೆ ಏರಿದ್ದಾಗ ಪತನ ಹೊಂದುತ್ತಾನೆ. ಆದರೆ ಎಲಿಜಾಬೆಥನ್ ದುರಂತನಾಟಕಗಳಿಗೂ ಇಬ್ಸನ್‌ನ ನಾಟಕಗಳಿಗೂ ಇರುವ ವ್ಯತ್ಯಾಸವೆಂದರೆ, ಇಬ್ಸನ್ ಬದಲಾದ ಯುಗಧರ್ಮವನ್ನು ತನ್ನ ಕೃತಿಗಳಲ್ಲಿ ತರುತ್ತಿದ್ದ. ಹೀಗಾಗಿ ವಿವರಗಳು ಬೇರೆಯಾಗಿದ್ದವು.

ಶ್ರೀನಿವಾಸ್ ಸುತ್ರಾವೆಯವರ ಅನುವಾದ ಇಬ್ಸನ್ನನ ಕೃತಿಯ ಸೂಕ್ಷ್ಮಗಳನ್ನು ಪರಿಣಾಮಕಾರಿಯಾಗಿ ಹಿಡಿದಿಡುತ್ತದೆ. ಇಪ್ಪತ್ತು ವರ್ಷಗಳ ಹಿಂದೆ ಚೆಕಾಫ್‌ನ ಚೆರ್ರಿ ಹಣ್ಣಿನ ತೋಟ ಅನುವಾದಿಸಿದಾಗ ಭಾಷೆ ಹೀಗೆ

ಅವರ ಹಿಡಿತಕ್ಕೆ ಸಿಕ್ಕಿರಲಿಲ್ಲ. ಇಲ್ಲಿ ಪಾತ್ರಗಳ ಭಾವನೆಗಳಿಗೆ ಹೊಂದುವಂತೆ ಭಾಷೆ ಏರಿಳಿತಗಳನ್ನು ಸಾಧಿಸುತ್ತಾ ಪರಿಣಾಮಕಾರಿಯಾಗಿ ಕೆಲಸ ಮಾಡಿದೆ. ಇದು ಕನ್ನಡ ನಾಟಕ ಸಾಹಿತ್ಯಕ್ಕೆ ಒಂದು ಒಳ್ಳೆಯ ಕೊಡುಗೆ.

ಕನ್ನಡದಲ್ಲಿ ಇಷ್ಟೊಂದು ನಾಟಕಸಂಸ್ಥೆಗಳು, ನಿರ್ದೇಶಕರು, ಪ್ರೇಕ್ಷಕರು ಇದ್ದರೂ ಮಾಸ್ಟರ್ ಬಿಲ್ಡರ್‌ನಂತಹ ಶ್ರೇಷ್ಠ ಕೃತಿಯ ೫೦೦ ಪ್ರತಿಗಳು ಮಾತ್ರ ಸಾಕಾಗುತ್ತಿರುವುದು ಶೋಚನೀಯ. ಪುಟವಿನ್ಯಾಸ ಬದಲಾಯಿಸಿದ್ದರೆ ಈ ನಾಟಕ ಮುದ್ರಿಸಲು ಕನಿಷ್ಠ ಇಪ್ಪತ್ತೈದು ಪುಟಗಳಷ್ಟು ಕಮ್ಮಿ ಸಾಕಾಗುತ್ತಿತ್ತು; ಅಷ್ಟು ಮಟ್ಟಿಗೆ ಬೆಲೆ ಕಮ್ಮಿ ಇಡಬಹುದಿತ್ತು. ಪುಟ ಉಳಿಸುವಂತೆ ನಾಟಕಗಳನ್ನು ಹೇಗೆ ಮುದ್ರಿಸಬಹುದು ಎನ್ನುವುದಕ್ಕೆ ಕನ್ನಡ ವಿಶ್ವವಿದ್ಯಾಲಯ ಪ್ರಕಟಿಸಿದ ಶ್ರೀರಂಗ ನಾಟಕ ಸಂಪುಟ ಒಳ್ಳೆಯ ಉದಾಹರಣೆ.

ಇಬ್ಸೆನ್‌ನ ಮುಖ್ಯ ನಾಟಕಗಳ ಒಂದು ಸಂಪುಟವೇ ಪಾಂಡಿತ್ಯಪೂರ್ಣ ಮುನ್ನುಡಿಯೊಂದಿಗೆ ಕನ್ನಡದಲ್ಲಿ ಪ್ರಕಟವಾಗಬೇಕಿದೆ.

— ಡಾ. ರಾಮಚಂದ್ರ ದೇವ

ಕಲ್ಮಡ್ಕ - ೫೭೪ ೨೫೭ (ದ. ಕ.)

೨. ನಮ್ಮ ಹೆಮ್ಮೆಯ ಸಾಹಿತಿ ಯು. ಆರ್. ಅನಂತಮೂರ್ತಿ ▲ ಮಾನಸ

ತುಮಕೂರಿನಲ್ಲಿ ನಡೆದ ೬೯ ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದ, ೬೯ ವಯಸ್ಸಿನ ಯು. ಆರ್. ಅನಂತಮೂರ್ತಿ ಅವರನ್ನು ಕುರಿತಂತೆ ತುಂಬ ಅಭಿಮಾನದಿಂದ ಬರೆದ ಪುಸ್ತಿಕೆ ಇದು. ಸಮ್ಮೇಳನದ ಸಂದರ್ಭದಲ್ಲಿ ಅಧ್ಯಕ್ಷರಾದವರ ಪರಿಚಯ ಮಾಡಿಕೊಡುವ ಉದ್ದೇಶದಿಂದ ಇದನ್ನು ಬರೆದಿರಬಹುದೆಂದು ಊಹಿಸಬಹುದಾದರೂ, ಅದಕ್ಕಿಂತ ಮಿಗಿಲಾಗಿ ಆ ಸಂದರ್ಭದಲ್ಲಿ ಸಾಕಷ್ಟು ಜನ ಇಂಥ ಪುಸ್ತಿಕೆಯನ್ನು ಕೊಂಡು ಓದುತ್ತಾರೆಂಬ ಉದ್ದೇಶವಿರುವುದು ಸ್ಪಷ್ಟ. "ಈ ಕೃತಿಯನ್ನು(ಕೊಂಡುಓದುವ)ಅನಂತಮೂರ್ತಿಯವರ ಸಕಲ ಅಭಿಮಾನಿಗಳಿಗೆ ಗೌರವಪೂರ್ವಕವಾಗಿ" ಅರ್ಪಿಸಿರುವುದರ ಹಿಂದೆ ಈ ಉದ್ದೇಶವೇ ಪ್ರಧಾನವಾಗಿರುವುದು ಸ್ಪಷ್ಟ.

ಅನಂತಮೂರ್ತಿಯವರ ಪೂರ್ವಿಕರು, ಅವರ ಹುಟ್ಟು, ಅವರು ಬೆಳೆದ ಪರಿಸರ, ಶಿಕ್ಷಣ, ಅವರ ಮೇಲೆ ಆದ ವಿವಿಧ ವ್ಯಕ್ತಿಗಳ ಪ್ರಭಾವ, ಅವರ ಹವ್ಯಾಸಗಳು, ಪ್ರೇಮದ ಸುಳಿ, ಮದುವೆ, ಅಧ್ಯಯನ, ವಿದೇಶ ಪ್ರವಾಸ, ಮಾನಸಗಂಗೋತ್ರಿ ಅಧ್ಯಾಪನ, ಕುಲಪತಿ ವೃತ್ತಿ, ಸಾಹಿತ್ಯ ನಿರ್ಮಿತಿ, ವಿವಿಧ ಉನ್ನತ ಹುದ್ದೆಗಳಿಗೇರಿದ್ದು, ಪಡೆದ ಪ್ರಶಸ್ತಿ ಪುರಸ್ಕಾರಗಳು, ವಾದವಿವಾದಗಳಿಗೆ ಬಿದ್ದದ್ದು, ವಿವಿಧ ಸ್ಥಳಗಳಲ್ಲಿ ನೀಡಿದ ವಿಶೇಷ ಉಪನ್ಯಾಸಗಳು, ಅವರನ್ನು ಕುರಿತು ಬಂದಿರುವ ಪುಸ್ತಕಗಳು, ಜೀವನದ ಮೆಟ್ಟಿಲುಗಳು –ಹೀಗೆ ಹತ್ತಾರು ವಿಷಯಗಳನ್ನು ಇಲ್ಲಿ ವಿವಿಧ ಮೂಲಗಳಿಂದ ಸಂಗ್ರಹಿಸಿ ಕೊಡಲಾಗಿದೆ. "ನಮ್ಮ ಹೆಮ್ಮೆಯ ಸಾಹಿತಿ" ಎಂದು ಶೀರ್ಷಿಕೆಯಲ್ಲೇ ಸೂಚಿಸಿರುವ ಲೇಖಕರು, ಎಲ್ಲೂ ಕಮ್ಮಿಯಾಗದ ಹೆಮ್ಮೆ ಮತ್ತು ಅಭಿಮಾನದಿಂದಲೇ ಈ ಪುಸ್ತಿಕೆಯನ್ನು ಬರೆದಿದ್ದಾರೆ. ಇದರ ಸಹಜ ಪರಿಣಾಮವೆಂಬಂತೆ ಕೃತಿ ಕೇವಲ 'ಪರಿಚಯ'ದ ಮಟ್ಟದಲ್ಲೇ ಉಳಿಯುತ್ತದೆ. ಜೊತೆಗೆ ಅನಂತಮೂರ್ತಿಯವರ ಗುಣಗಾನ ಮಾಡುವ ಉದ್ದೇಶವೇ ಪ್ರಧಾನವಾಗಿ, ಅವರ ಸಮಗ್ರ ವ್ಯಕ್ತಿತ್ವದ ಎಲ್ಲ ಮುಖಗಳು ಇಲ್ಲಿ ಕಾಣುವುದೇ ಇಲ್ಲ. ಅಭಿಮಾನ ಮತ್ತು ಹೆಮ್ಮೆಗಳೂ ಸ್ವಕೀಯ-ಪರಕೀಯ ಭಾವನೆಗಳಿಂದ ಮುಕ್ತವಾಗಿ, ಒಂದು ಬಗೆಯ ಸಾಧಾರಣೀಕೃತ ವಿಮರ್ಶೆಯ ಒರೆಗಲ್ಲಿಗೆ ತೆಯ್ದುಕೊಂಡು ಬಂದರೆ, ವ್ಯಕ್ತವಾದ ವಿಚಾರಗಳಿಗೆ ಬೆಲೆ ಬರುವುದು ಸಹಜ. ಆ ಕೆಲಸ ಇಲ್ಲಿ ಆಗಿಲ್ಲ. ಅವಸರಕ್ಕೆ ಅಲ್ಲಿಂದಿಷ್ಟು ಇಲ್ಲಿಂದಿಷ್ಟು ಆಯ್ದು ನೆಯ್ದಂತಾಗಿದೆ ಈ ಪುಸ್ತಿಕೆ. ಆದರೂ ಅನಂತಮೂರ್ತಿಯವರ ಬಗ್ಗೆ ಮೊಟ್ಟಮೊದಲನೆಯದಾಗಿ ತಿಳಿದುಕೊಳ್ಳಬೇಕೆಂಬ ಬಯಕೆಯ ಹೊಸಬರಿಗೆ ಅವರು ಯಾರು ? ಅವರ ಸಾಧನೆ ಏನು ? ಹಿರಿಮೆ ಏನು ? ಎಂಬುದನ್ನು ಸಂಕ್ಷಿಪ್ತವಾಗಿಯಾದರೂ ಇದು ತಿಳಿಸುವಂತಿದೆ.

— ಸಾಬ

C/o ಸಂಕಲನ, ಹೂಮನೆ, ಧಾರವಾಡ - ೫೮೦ ೦೦೪

೩. ನೆನೆದದ್ದು ಹೆಚ್ಚಾಗಿ ▲ ಹರಿಯಪ್ಪ ಪೇಜಾವರ

ಹರಿಯಪ್ಪ ಪೇಜಾವರ ಅವರನ್ನು ಕಂಸಕವಿ ! ಎಂದು ಪ್ರೀತಿ ಮತ್ತು ತಮಾಷೆಯಿಂದ ಕರೆದರೆ ಅವರು ಬೇಸರಿಸಲಿಕ್ಕಿಲ್ಲ. ಅವರ ಇತ್ತೀಚಿನ ಕವನ ಸಂಕಲನ 'ನೆನೆದದ್ದು ಹೆಚ್ಚಾಗಿ' ಓದಿದಾಗ ಇದು ಥಟ್ಟನೆ ಮನಸ್ಸಿಗೆ ಗೋಚರಿಸುವುದು. ಕೆಲವು ಸಲ ವ್ಯಂಗ್ಯಾರ್ಥಕ್ಕೆ, ಕೆಲವೊಮ್ಮೆ ಸಮರ್ಥನೆಗೆ, ಕೆಲವು ಸಲ ಕಾವ್ಯಶಕ್ತಿಯ ಕುರಿತ ನಂಬಿಕೆಯ ಅಭಾವದಿಂದ, ಮತ್ತೆ ಕೆಲವೊಮ್ಮೆ ಓದುಗರ ಸಾಮರ್ಥ್ಯದ ಕುರಿತ ಅಪನಂಬುಗೆಯಿಂದ ಹೀಗೆ ಹಲವಾರು ಕಾರಣಗಳಿಂದಾಗಿ ತಮ್ಮ ಬಹುತೇಕ ಕವಿತೆಗಳಲ್ಲಿ ಒಂದಲ್ಲಾ ಒಂದು ಸಾಲನ್ನು ಕಂಸದೊಳಗಿಟ್ಟು ಕೊಡುತ್ತಾರೆ. ಉದಾಹರಣೆಗಾಗಿ ನೋಡಿ :

ಆಮೇಲೆ ನಾನೂ ಒಂದು ಸಣ್ಣ ಸುಳ್ಳು
(ನಂಬಿ, ನೂರಲ್ಲ ಒಂದೇ ಒಂದು ಸಣ್ಣ ಸುಳ್ಳು)

* * *

ಮೊನ್ನೆ ಬಂದವರ ಟ್ಯಾಲಂಟ್ ಕೂಡ ದೊಡ್ಡದು ಅಲ್ಲವೇ ಎಂದು
(ಹೊರಗಲ್ಲವಾದರೂ)
ಒಳಗೊಳಗೇ ಅನಿಸಿ

* * *

ಆಗುವಿರಿ ಆಗ ಏನಾದರೂ ನೀವು
(ಕೊನೇಪಕ್ಷ) ಶತ್ರುಗಳಲ್ಲವಾದರೂ

* * *

ಕೋಮು ಸಾಮರಸ್ಯ ಸಾಧಿಸಿ ಎಂದು ವಿನಾಕಾರಣ
ಮೇಜು ಕುಟ್ಟಿ ಅಬ್ಬರಿಸಿದ
(ಆಮೇಲೆ ಅಲ್ಲಿ ಕೋಮು ಗಲಭೆ ಶುರುವಾಯ್ತು)

ಕಾವ್ಯದ ಧ್ವನಿ ಮತ್ತು ಸೂಚ್ಯತೆಯ ಸಾಮರ್ಥ್ಯವನ್ನು ಇವು ಕುಗ್ಗಿಸಿವೆ ಎಂದು ಹೇಳದೇ ವಿಧಿಯಿಲ್ಲ. ಮುನ್ನುಡಿ ಬರೆದಿರುವ ಬಿ. ಜನಾರ್ದನ ಭಟ್ ಸರಿಯಾಗಿ ಗುರುತಿಸಿರುವಂತೆ ಪೇಜಾವರರ ಕವನಗಳ ಕೇಂದ್ರ ದುರ್ಬಲ ಮನುಷ್ಯ. ಅವನ ಒಳತೋಟಿ, ಸೂಕ್ಷ್ಮತೆ, ಹೇಡಿತನ, ಅನಾಥಪ್ರಜ್ಞೆ, ಹುಂಬತನ, ಅಸ್ತವ್ಯಸ್ತತೆ ಎಲ್ಲವೂ ಇಲ್ಲಿ ಕಾವ್ಯರೂಪ ಪಡೆದಿವೆ. ಬೊದಿಲೇರ್, ವ್ಯಾನ್‌ಗೋನಂಥವರು ಇದಕ್ಕೆ ಪೂರಕವಾಗಿ ಕವಿಗೆ ನೆನಪಾಗುತ್ತಾರೆ. ಇದಕ್ಕೆ ನೆರವು ನೀಡುವಂತೆ ನವ್ಯ ಸಂವೇದನೆಗಳು ದುಡಿಯುತ್ತವೆ. ಅಡಿಗರ 'ಪ್ರಾರ್ಥನೆ'ಯ ಪ್ರಭಾವದಲ್ಲಿ ಮೂಡಿದ ಇಲ್ಲಿಯ ಪ್ರಾರ್ಥನೆ ವಾಸ್ತವದ ನರಕದರ್ಶನ ಮಾಡಿಸುವ ಉತ್ಸಾಹದಲ್ಲಿ ಹೆಚ್ಚು ನಿಷೇಧಾತ್ಮಕವಾಗಿದೆ.

ಬದುಕಿನ ಅಸ್ತವ್ಯಸ್ತತೆಯನ್ನು ವಾಸ್ತವವಾದಿ ನೆಲೆಯಲ್ಲಿ ನೋಡುವ ಕವಿ ಹರಿಯಪ್ಪ ಪೇಜಾವರ ಅದಕ್ಕಾಗಿ ತರ್ಕದ ಮೊರೆ ಹೋಗುತ್ತಾರೆ. ಇದು ಕಾವ್ಯಕ್ಕೆ ಜಿಜ್ಞಾಸೆಯ ಸ್ವರೂಪ ನೀಡಿದೆ. ಬದುಕಿನ ವಿವಿಧ ಮಗ್ಗಲುಗಳನ್ನು ದ್ವಂದ್ವಾತ್ಮಕ ಗ್ರಹಿಕೆಗಳ ಮೂಲಕ ತೋರಿಸುತ್ತ ಅದರಲ್ಲಿ ಯಶ ಪಡೆದಿದ್ದಾರೆ.

ಹೆಸರು ಅಳಿಸುವ ಮೂಲಕವೇ
ಈಗ ನನ್ನ ಹೆಸರು ಉಳಿಸಬೇಕಾಗಿದೆ

* * *

ಬೆಳಕು ಬೇಕಾದರೆ ಅದನಟ್ಟಿ ಬರುವ
ಕತ್ತಲೆಯನಿದಿರಿಸಲೂ ಸಿದ್ಧವಾಗಬೇಕು

ಭಿನ್ನ ನೆಲೆ ಮತ್ತು ವಿಧ ವಿಧ ಆವರಣಗಳಲ್ಲಿ ಆತ್ಮಶೋಧನೆ ನಡೆಸುವ ಮೂಲಕ ಪೇಜಾವರರು ವ್ಯಕ್ತಿ ಕೇಂದ್ರದಲ್ಲಿಯೂ ಸಮಷ್ಟಿಯ ತಾತ್ವಿಕ ಪಾತಳಿಯೊಂದನ್ನು ಕಾಣುವ ಹಂಬಲ ಮತ್ತು ಸಾಮರ್ಥ್ಯ ಉಳ್ಳವರು.

ಆದರೆ ಅವರ ಮೂಲ ಸಮಸ್ಯೆಯಿರುವುದು ಕಾವ್ಯದ ಗದ್ಯಾತ್ಮಕ ಕಸುಬಿನಲ್ಲಿ. ಇದು ಎಷ್ಟೋ ಸಲ ಕಥೆ ಹೇಳಿದಂತೆ, ಭಾಷಣ ಮಾಡಿದಂತೆ, ಹರಟೆ ಹೊಡೆದಂತೆ ಭಾಸವಾಗಿ ಓದುತ್ತಿರುವುದು ಕವಿತೆಯೆಂಬುದೂ ಮರೆತು ಹೋಗುವಂತೆ ಮಾಡುತ್ತದೆ.

ಈ ವಿಗ್ರಹ ಬುದ್ಧನ ಹಾಗೆ ಕಾಣುವುದೇ ಇಲ್ಲವಲ್ಲ
ಅಂದಳು ಆಕೆ ನವವಿವಾಹಿತೆ
ಹೌದಲ್ಲ ಮತ್ತೆ !
ಬುದ್ಧ ಬುದ್ಧನ ಹಾಗೆ ಎಲ್ಲರಿಗೂ ಕಂಡಿದ್ದರೆ
ಆತನನ್ನು ಬುದ್ಧನೆಂದಾದರೂ ಯಾಕನ್ನುತ್ತಿದ್ದರು ?
ಮತ್ತೆ ಈ ಚಳಿ ಮಳೆ ಬಿಸಿಲಿಗೆ
ಒಬ್ಬನನ್ನೇ ಏಕಾಕಿ ಬಿಟ್ಟು ಹೋಗುತ್ತಿದ್ದರು ?

ಇಷ್ಟು ಚೆಂದ ಮತ್ತು ತೀವ್ರವಾಗಿ ಬರೆಯುವ ಸಾಮರ್ಥ್ಯವಿರುವ ಕವಿ ತಮ್ಮ ಕಾವ್ಯಕ್ರಮದ ಹಠದಿಂದ ಹೊರಬಂದರೆ ಕಾವ್ಯಸುಖ ನೀಡಬಲ್ಲರು. ಕಾವ್ಯದೊಳಗಿನ ಮೌನ ಅವರನ್ನು ಕಾಡಬೇಕಿದೆ. ಹಾಗಾದಾಗ ಓದುವವನಿಗೂ ಒಂದು ' ಅವಕಾಶ ' ನೀಡಿದಂತಾಗುತ್ತದೆ.

– ಜಿ. ಕೆ. ರವೀಂದ್ರಕುಮಾರ್
ಕಾರ್ಯಕ್ರಮ ನಿರ್ವಾಹಕ, ಆಕಾಶವಾಣಿ, ಧಾರವಾಡ- ೫೮೦ ೦೦೮

೪. ಪ್ರಿನ್ಸಿಪಲ್ ಪರಶುರಾಂ ▲ಅನು. : ಪಾರ್ವತಿ ಜಿ. ಐತಾಳ್

ಕನ್ನಡಕ್ಕೀಗಾಗಲೇ ' ಇನ್ನೊಂದು ವಿಕ್ರಮೋರ್ವಶೀಯ ' ಮತ್ತು ' ಮೃಚ್ಛಕಟಿಕ - ೨ ' ಸ್ವತಂತ್ರ ನಾಟಕಗಳನ್ನು ನೀಡಿದ ಜಿ. ಜೆ. ಹರಿಜಿತ್‌ರವರ ಮೂಲ ಹಿಂದೀ ನಾಟಕದ ಅನುವಾದ ಪಾರ್ವತಿ ಜಿ. ಐತಾಳ್ ಅವರು ಮಾಡಿದ್ದಾರೆ. ' ಪ್ರಿನ್ಸಿಪಲ್ ಪರಶುರಾಂ ' ಪುರಾಣದ ಘಟನೆಗಳ ಮೂಲಕ ಮನುಷ್ಯ ಸ್ವಭಾವವನ್ನು ಶೋಧಿಸುವ ಹರಿಜಿತರ ವಿಶಿಷ್ಟ ಪ್ರಯತ್ನಗಳಲ್ಲೊಂದು. ಈ ನಾಟಕಕ್ಕೆ ರಾಮಾಯಣ ಮಹಾಭಾರತಗಳಿಂದ ಆಯ್ದ ಶಂಬೂಕವಧ ಮತ್ತು ಪರಶುರಾಮ ಚರಿತ್ರೆಯ ಎರಡು ಪ್ರಸಂಗಗಳು ಹಿನ್ನೆಲೆಯಾಗಿವೆ.

ನಾಟಕದ ಘಟನಾವಳಿಗಳಿಗೆ ಒಂದು ಮುನ್ನುಡಿಯೋ ಎಂಬಂತೆ ಶಂಬೂಕವಧ ಪ್ರಸಂಗ ಆರಂಭದಲ್ಲಿ ಪುರಾಣ ಕಾಲದಲ್ಲೇ ನಡೆದಂತೆ ಚಿತ್ರಿತವಾಗಿದೆ. ಇದರಲ್ಲಿ ಆಧುನಿಕ ಕರ್ಣರಿದ್ದಾರೆ, ಆಧುನಿಕ ದ್ರೋಣರು ಏಕಲವ್ಯರು ಇದ್ದಾರೆ, ಆಧುನಿಕ ರಾಮಲಕ್ಷ್ಮಣ ಜಾನಕಿಯರಿದ್ದಾರೆ. ಪ್ರಜಾಸತ್ತೆಯ ತೋರಿಕೆಯಲ್ಲಿ ನಡೆಯುತ್ತ ಸ್ವಜನ ಹಿತಾಸಕ್ತಿಯ ಭದ್ರಕೋಟೆಯಾಗಿರುವ ಒಂದು ಕಾಲೇಜು. ಅಲ್ಲಿ ಸಣ್ಣಗೆ ಮೂಡುವ ಪ್ರತಿಭಟನೆಯ ಅಲೆಗಳು. ಜಾನಕಿ ರಾಮ್‌ಸಿಂಗ್‌ರ ಪ್ರೀತಿ, ಪ್ರಹ್ಲಾದ, ಉಮೆಯರ ಪ್ರೀತಿ ಸ್ವತಃ ಪ್ರಿನ್ಸಿಪಲ್ ಪರಶುರಾಂರ ಚರಿತ್ರೆ, ಪ್ರೊ. ಮಿತ್ರ ತೆರೆದು ತೋರುವ ಅವರ ಬದುಕು, ಅವರಲ್ಲಿ ಬರುವ ಪರಿವರ್ತನೆ, ಪ್ರಿನ್ಸಿಪಾಲರ ಕುರ್ಚಿಯಲ್ಲಿ ಅನ್ನದಾ- ಹೀಗೆ ನಾಟಕದ ಘಟನಾಚಕ್ರದಲ್ಲಿ ಹಲವು ಏರಿಳಿತಗಳಿವೆ. ಇಲ್ಲಿಯ ಪಾತ್ರಗಳೆಲ್ಲವೂ ವಸ್ತುಸ್ಥಿತಿಯ ಭಾಗಗಳು. ಓದಿಸಿಕೊಳ್ಳುತ್ತ ರಂಜಿಸುತ್ತ ಶಾಕ್ ಕೊಡುತ್ತ ಪ್ರಶ್ನೆಗಳನ್ನು ಎತ್ತುತ್ತ ಹೋಗುವ ಈ ನಾಟಕದಲ್ಲಿ ಸರಳ ಪರಿಹಾರಗಳಿಲ್ಲ. ಆದರೆ ಕಪ್ಪು ಬಿಳುಪು ಪಾತ್ರಗಳಿಲ್ಲ ಎಂದು ಹೇಳುವಂತಿಲ್ಲ (ಉದಾ : ಚತುರ್ವೇದಿ).

ಪಾರ್ವತಿಯವರ ಅನುವಾದ ಸೊಗಸಾಗಿ ಓದಿಸಿಕೊಂಡು ಹೋಗುತ್ತದೆ. ಈ ನಾಟಕಕ್ಕೆ ಅವರು ಬರೆದಿರುವ ಮುನ್ನುಡಿಯೂ ಅಭ್ಯಾಸಪೂರ್ಣವಾಗಿದೆ.

– ಯತ್ನಳ್ಳಿ ಮಂಜು
ಚಿತ್ತಾರ, ಮಾರುತಿನಗರ, ಅರಸೀಕೆರೆ - ೫೭೩ ೧೦೩ ಜಿ. : ಹಾಸನ

'ಸಂಕಲನ' : ಅನಿಸಿಕೆ, ಅಭಿಪ್ರಾಯ, ಪ್ರತಿಕ್ರಿಯೆ, ವಿಮರ್ಶೆ ಇತ್ಯಾದಿ

▼ ೩ನೆಯ ಸಂಚಿಕೆಯಲ್ಲಿ ಬಳಸಿದ ಅಕ್ಷರ ವಿನ್ಯಾಸ. ಮತ್ತು ಮುಖಪುಟ ಸೂಕ್ತವಾಗಿದೆ. ಮುಖಪುಟ ಇದಕ್ಕಿಂತ ಹೆಚ್ಚಿನ ವೆಚ್ಚದ್ದು ಬೇಡ. ಸಾಹಿತ್ಯಿಕ ಪತ್ರಿಕೆಯಲ್ಲಿ ಹೂರಣವೇ ಮುಖ್ಯ. 'ಕಳೆದುಹೋದಕತೆ'. 'ಮಗುಮಲಗಿದೆ ಎದೆಯಮೇಲೆ' ಧ್ವನಿಪೂರ್ಣವಾಗಿವೆ... ಯಾವುದೇ ಚರಿತ್ರೆ ಸಾತತ್ಯದಿಂದ ದೂರವಿರುತ್ತದೆ ಎಂಬುದು ಅವಸರದ ನಿಲುವು. ಸ್ವಲ್ಪ ನಿಧಾನವಾಗಿ ಯೋಚಿಸಿದರೆ. ಬರೀ ಸಾಹಿತ್ಯ. ಸಾಮಾಜಿಕ ಇತ್ಯಾದಿಯಷ್ಟೇ ಅಲ್ಲ. ನಿರ್ಜೀವವಾದ ಒಂದು ಗ್ರಹ. ನೀಹಾರಿಕೆಯ ಚರಿತ್ರೆ ಕೂಡ ಸಾಹಿತ್ಯವಿಲ್ಲದೇ ಇರುವುದಿಲ್ಲ. ವಿಚ್ಛಿನ್ನತೆಯ ಕಾಲಘಟ್ಟಗಳು ಬಹಳ ದೀರ್ಘವಾದಷ್ಟೂ ಒಳಗೇ ಹರಳುಗಟ್ಟುತ್ತಾ ಹೋಗುತ್ತವೆ. ಅದು ಒಂದು ಹದಕ್ಕೆ ಬರಲು ಕೆಲವು ಸಾರಿ ಕೆಲವೇ ವರ್ಷ ಮತ್ತೆ ಕೆಲವು ಸಾರಿ ಅನೇಕಾನೇಕ ವರ್ಷ ಹಿಡಿಯುತ್ತದೆ. ಆ ದೀರ್ಘ ಕಾಲದಿಂದ ಭ್ರಮಿತರಾಗಿ ಸಾತತ್ಯವಿಲ್ಲ ಎನ್ನುವುದಕ್ಕಿಂತ. ಆ ದೀರ್ಘ ಕಾಲವೇ ಸಾತತ್ಯದ ತಳಹದಿ ಎಂದು ತಿಳಿಯಬೇಕಾಗಿದೆ. ಸಾತತ್ಯ – ಪರಂಪರೆ – ಸಂಸ್ಕಾರ – ಒಂದು ಸಮಾಜ → ಇದು ಸರಪಣಿ. ಬೇಕಾದರೆ ಇದನ್ನು ತಿರುವು ಮುರುವು ಮಾಡಿ. ಆಗಲೂ ಅದು ಸರಿಯಾದ ಕ್ರಮದಲ್ಲೇ ಇರುತ್ತದೆ. **ಭೂಮಿಗೆ ನಮ್ಮ ಲೆಕ್ಕದ ಅಳತೆ ಮೀರಿದ ಸಾತತ್ಯವಿದೆ.** ಅಂದಮಾತ್ರಕ್ಕೆ ಅದರ ಮೇಲಿನ ಜೀವವಿಕಾಸಕ್ಕೆ → ಸಂಸ್ಕೃತಿಗೆ → ಸಾಹಿತ್ಯಕ್ಕೆ ಸಾತತ್ಯವಿಲ್ಲವೆ.. **– ಲಲಿತಾ ಸಿದ್ದಬಸವಯ್ಯ, ತುಮಕೂರು**

▼ ಸುಮಂಗಲಾ ಬಾದರದಿನ್ನಿ 'ದುಂಡುಮಲ್ಲಿಗೆದಂಡೆ' ಪರಿಮಳಯುಕ್ತವಾಗಿದೆ. ಸಿಜಿಕೆ ಆತ್ಮಕಥನ ಸ್ವಾರಸ್ಯಕರವಾಗಿದೆ. ಬೇಂದ್ರೆಯವರ ಕವನದ 'ಅದಕು ಇದಕು ಎದಕು'ವನ್ನು ಸಾದರರ ಲೇಖನ ಧಾರವಾಡದ ಭಾಷೆಯಲ್ಲಿ ಚೆನ್ನಾಗಿ ಅರ್ಥೈಸಿದೆ. 'ಮೆಟ್ಯಾಫಿಜಿಕಲ್ ಕಾವ್ಯ'ದಂಥ ಲೇಖನಗಳು ಮುಂದಿನ ಸಂಚಿಕೆಗಳಲ್ಲೂ ಬಂದರೆ ಬೇರೆ ಬೇರೆ ಭಾಷೆಗಳಲ್ಲಿಯ ಕಾವ್ಯಸೌರಭ ಸವಿಯಲು ಸಹಾಯಕವಾಗುತ್ತದೆ. ಭಿನ್ನ ದೃಷ್ಟಿಕೋನಗಳಿಂದ ಒಂದೇ ವಿಷಯದ ಮಥನ ನಡೆಯುವ 'ಧುತ್ತರಗಿಯವರ ಮಲಮಗಳು'. 'ಜೋಳದರಾಶಿಯವರ ಆತ್ಮಕಥನ' ಬಗ್ಗೆ ಇರುವ ಲೇಖನಗಳು ಸ್ವಾಗತಾರ್ಹ. ಸಂಕಲನ ವಿಮರ್ಶಾತ್ಮಕವಾಗಿದೆ. ವಿಚಾರಪೂರ್ಣವಾಗಿದೆ. ವೈವಿಧ್ಯತೆಯಿಂದ ಕೂಡಿದೆ. **– ಎಚ್. ಜಿ. ಸೋಮಶೇಖರರಾವ್, ಬೆಂಗಳೂರು**

▼ ಎಲ್ಲಾ ಲೇಖನ ಶ್ರೇಷ್ಠಮಟ್ಟದ್ದಾಗಿವೆ. **'ನೆನಪುಗಳೇ ಒಂದು ರೀತಿ'** ಅತ್ಯಂತ ಪ್ರಿಯವೆನಿಸಿತು. ಇಂಥ ಲೇಖನಗಳನ್ನು ಇನ್ನಷ್ಟು ಪ್ರಕಟಿಸಿರಿ. **– ಎನ್. ಈಶ್ವರಪ್ಪ, ಬಳ್ಳಾರಿ**

▼ ಇತ್ತೀಚಿನ ಸಂಚಿಕೆ ಬಹಳ ಹಿಡಿಸಿತು. ಇಂದಿನ ಪರಿಸ್ಥಿತಿಯಲ್ಲಿ ಇಂತಹ ಸಾಹಿತ್ಯಿಕ ಪತ್ರಿಕೆ ನಡೆಸುವುದು ಸಾಹಸದ ಕೆಲಸವೇ. **– ಜಿ. ಜಿ. ಹರಿಜಿತ್, ಬೆಂಗಳೂರು**

▼ **ಸಂಕಲನ** ಎರಡು ತಿಂಗಳು ವರೆಗೆ ಅಂದ್ರ ತಾಳ್ಮೆವಹಿಸಲಾಗಲ್ಲ. ಮಾಸಿಕ ಅನ್ನಿಸಿದ್ರ ಛಲೋ ಇತ್ತೇನೋ. ಅನೇಕ ಎಲೆಮರೆಯ ಬರಹಗಾರರನ್ನು ಪ್ರಾಮಾಣಿಕವಾಗಿ ಸಹೃದಯರೆದುರು ತಂದು ನಿಲ್ಲಿಸುವ ಪ್ರಯತ್ನ ನಿಮ್ಮ ಮೂಲ ಆಶಯದೊಂದಿಗೆ ಬೆರೆತಿದೆ. **– ಸಂತೇಬೆನ್ನೂರು ಫೈಜ್ನಟ್ರಾಜ್, ಕಣವೆಬಿಳಚಿ**

▼ **ಸಂಕಲನ** ಸಂಚಿಕೆ ಒಂದಕ್ಕಿಂತ ಒಂದು ಛಂದ ಬಂದಾವ್ರಿ. ಖರೇ ಹೇಳಬೇಕಂದ್ರ ಇವತ್ತಿನ ಸಾಹಿತ್ಯದ ಸಂದರ್ಭದಾಗ ಇಂಥಾದೊಂದು **ಸಂಕಲನ**ದ ಅವಶ್ಯಕತಾ ಬಾಳಂದ್ರ ಬಾಳಿತ್ರಿ. ಇದು ಸಜ್ಜೀರೊಟ್ಟಿ ಪುಂಡೀಪಲ್ಲೇದ ರುಚಿ ಕೊಡುವಂಗಾಗಲಿ. **– ಶಶಿಕಲಾ ವೀರಯ್ಯಸ್ವಾಮಿ. ಧಾರವಾಡ**

▼ ಕರ್ನಾಟಕದಲ್ಲಿ ಈಚೆಗೆ ಕನ್ನಡದ ಸಾಹಿತ್ಯಕ ಪತ್ರಿಕೆಗಳು ಸ್ಥಗಿತಗೊಂಡು ಮಂಕು ಕವಿದಿದೆ. ವಿ.ವಿ.ಗಳ ಪ್ರಕಟಣೆಗಳೂ ನಿಂತುಹೋಗಿವೆ. ಈ ಸಂದರ್ಭದಲ್ಲಿ ತಾವು **ಸಂಕಲನ** ಹೊರಡಿಸುವ ಸಾಹಸ ಮಾಡುತ್ತಿರುವಿರಿ. ಅಭಿನಂದನೆಗಳು. ಈ ವರೆಗೆ ತಾವು ಕನ್ನಡ ಸಾಂಸ್ಕೃತಿಕ ಲೋಕದಲ್ಲಿ ವಿಶಿಷ್ಟ ಕೆಲಸ ಮಾಡಿದ್ದೀರಿ. ಈಗ ಈ ಪತ್ರಿಕೆಯ ಮೂಲಕ ಆರೋಗ್ಯಪೂರ್ಣ. ವಿಶ್ವಾಸದ. ನಿಜವಾದ ಪ್ರಜಾಪ್ರಭುತ್ವದ ವಾತಾವರಣ ಕಟ್ಟುತ್ತಿದ್ದೀರಿ. **– ಡಾ. ಗುರುಪಾದ ಮರಿಗುದ್ದಿ, ಸಂಕೇಶ್ವರ**

▼ **ಸಂಕಲನ** ಸ್ವಾಗತಾರ್ಹ. ಸಮತೋಲ ಕಾಪಾಡಲು ಸತ್ಯಪಕ್ಷಪಾತಿಯಾಗಿ ನಿಲ್ಲಲು ಒಂದು ತೃತೀಯ ರಂಗದ ಅಗತ್ಯ ಯಾವಾಗಲು ಬೇಕಾಗುತ್ತೆ. **ಸಂಕಲನ** ಆ ಕೆಲಸ ಮಾಡುತ್ತಿದೆ.

– ಜಿ. ಎನ್. ರಂಗನಾಥರಾವ್, ಬೆಂಗಳೂರು

▼ ಓದುಗರಿಗೆ. ಲೇಖಕರಿಗೆ ಭರವಸೆ ನೀಡುವ ಪತ್ರಿಕೆ **ಸಂಕಲನ**. ಅದಕ್ಕೆ ತುಂಬು ಮನಸ್ಸಿನಿಂದ ಶುಭ ಕೋರುತ್ತೇನೆ. **– ಕನಕ ಹಾ. ಮ., ಮುಂಬಯಿ**

' ಸಂಕಲನ ' ಸ್ವೀಕರಿಸಿದ ಪುಸ್ತಕಗಳು

೧. **ಮೊದಲ ಸಿರಿ** : ಕವನ, ಲಲಿತಾ ಸಿದ್ಧಬಸವಯ್ಯ, ಚಿನ್ಮಯಿ ಪ್ರಕಾಶನ, ೫೨೧೬, ಗುರುಸನ್ನಿಧಿ, ೨ ನೆಯ ತಿರುವು, ಅಶೋಕನಗರ, ತುಮಕೂರು - ೫೭೨ ೧೦೨, ಪ್ರ. ಮು. ೨೦೦೧, ಡೆಮಿ ೧/೮, ಪುಟ ೫೨, ರೂ. ೬೦/-

೨. **ಶರೀಫ** : ನಾಟಕ, ಮಂಜುನಾಥ ಬೇಳಕೆರೆ, ನಿರಂತರ ಪ್ರಕಾಶನ, ಕಾಂತರಾಜೇ ಅರಸ್ ರಸ್ತೆ, ಸರಸ್ವತೀಪುರಂ, ಮೈಸೂರು - ೫೭೦ ೦೦೯, ಪ್ರ. ಮು. ೨೦೦೨, ಕ್ರಾವುನ್ ೧/೮, ಪುಟ ೧೦೪, ರೂ. ೪೫/-

೩. **ಮಾಸ್ಟರ್ ಬಿಲ್ಡರ್** : ನಾಟಕ, ಹೆನ್ರಿಕ್ ಇಬ್ಸನ್, ಅನು. : ಶ್ರೀನಿವಾಸ ವಿ. ಸುತ್ರಾವೆ, ವಿನಯ್ ಪ್ರಕಾಶನ, ೧೬೪೬ / ೧೮, ವಿದ್ಯಾನಗರ, ದಾವಣಗೆರೆ - ೫೭೭ ೦೦೫, ಪ್ರ. ಮು. ೨೦೦೧, ಡೆಮಿ ೧/೮, ಪುಟ ೧೫೨, ರೂ. ೬೦/-

೪. **ಮುಕ್ತಧಾರಾ** : ನಾಟಕ, ರವೀಂದ್ರನಾಥ ಠಾಕುರ, ಅನು. : ಶ್ರೀನಿವಾಸ ವಿ. ಸುತ್ರಾವೆ, ವಿನಯ್ ಪ್ರಕಾಶನ, ದಾವಣಗೆರೆ - ೫೭೭ ೦೦೫, ಪ್ರ. ಮು. ೨೦೦೧, ಡೆಮಿ ೧/೮, ಪುಟ ೮೨, ರೂ. ೪೫/-

೫ **ತುಳುಕು** : ಕವನ, ಎಂ. ಡಿ. ವಕ್ಕುಂದ, ಪುಟ ೫೨, ರೂ. ೩೫/-; ೬. **ಬಾಯಾರಿಕೆ** : ಕವನ, ಡಾ. ವಿನಯಾ, ಪುಟ ೭೦, ರೂ. ೩೫/-; ೭. **ಬಿಳಿಮುಗಿಲ ಕೆಳಗೆ** : ಕವನ, ಸಿ. ಜಿ. ಹಿರೇಮಠ, ಪುಟ ೪೬, ರೂ. ೩೦/-; ೮. **ಬಂದೂಕಿನ ಮನುಷ್ಯ** : ಕವನ, ಡಾ. ಬಸವರಾಜ ಕುಂಬಾರ, ಪುಟ ೫೮, ರೂ. ೩೫/- : ಈ ನಾಲ್ಕೂ ಪುಸ್ತಕ ಲಡಾಯಿ ಪ್ರಕಾಶನ, ೪೨, ಪ್ರಸಾದ ಲಾಜ್, ಗದಗ, ಪ್ರ.ಮು.೨೦೦೨, ಡೆಮಿ ೧/೮

೯. **ಕರ್ಪೂರ ಬೆಂಕಿ** : ನಾಟಕ, ಬಿ. ಟಿ. ಮುನಿರಾಜಯ್ಯ, ಸೌಂದರ್ಯ ಪ್ರಕಾಶನ, ೫೭, ಮಾನಸ ಬಡಾವಣೆ, ಕೆಂಗೇರಿ ಉಪನಗರ, ಬೆಂಗಳೂರು - ೫೬೦ ೦೬೦, ಪ್ರ.ಮು. ೨೦೦೨, ಡೆಮಿ ೧/೮, ಪುಟ ೭೨, ರೂ. ೭೫/-

೧೦. **ನವೋದಯ ಕತೆಗಳು** : ಡಾ. ಎಸ್. ಪ್ರಸಾದಸ್ವಾಮಿ, ಜ್ಞಾನೋದಯ ಪ್ರಕಾಶನ, ೧೫೩, ಶಾರದಾ ಕಾಲನಿ, ೩ ನೇ ಹಂತ, ೪ ನೇ ಬ್ಲಾಕ್, ಬಸವೇಶ್ವರ ನಗರ, ಬೆಂಗಳೂರು - ೫೬೦ ೦೭೯, ಪ್ರ.ಮು. ೨೦೦೧, ಡೆಮಿ ೧/೮, ಪುಟ ೨೫೦, ರೂ. ೧೨೫/-

೧೧. **ಚೌಕಟ್ಟಿನ ಜನ** : ಕವನ, ಡಾ. ಎಸ್. ಪ್ರಸಾದಸ್ವಾಮಿ, ಲಂಕೇಶ್ ಪ್ರಕಾಶನ, ೩೨, ಮಹಡಿ, ಎಂ.ಎಸ್.ಆರ್. ನಗರ, ಮತ್ತೀಕೆರೆ ಅಂಚೆ, ಬೆಂಗಳೂರು - ೫೬೦ ೦೫೪, ಪ್ರ.ಮು. ೨೦೦೧, ಕ್ರಾವುನ್ ೧/೮, ಪುಟ ೮೦, ರೂ. ೩೦/-

೧೨. **ನಮ್ಮೆಲ್ಲರ ಭಾರತಿ** : ನಾಟಕ, ಬಿ. ಎಂ. ಶರಭೇಂದ್ರಯ್ಯ, ಪೂಜಾರ ಸಿದ್ದಪ್ಪ ಸ್ಮಾರಕ ಗ್ರಂಥಮಾಲೆ, ಕೂಸಿಕೆರೆ - ೫೭೨ ೧೪೪, ತಾ. ಹಿರಿಯೂರು ಪ್ರ.ಮು. ೨೦೦೧, ಡೆಮಿ ೧/೮, ಪುಟ ೮೦, ರೂ. ೪೦/-

೧೩. **ವರ್ಣಸಂಚಯ** : ಡಾ. ಎಸ್. ಸಿ. ಪಾಟೀಲ, ವಿಜಯ ಚಿತ್ರಕಲಾ ಮಹಾವಿದ್ಯಾಲಯ, ಇಳಕಲ್ಲ, ಜಿ. ಬಾಗಲಕೋಟೆ, ಪ್ರ.ಮು. ೨೦೦೧, ಡೆಮಿ ೧/೮, ಪುಟ ೧೪೨, ರೂ. ೭೫/-

೧೪. **ಬಹುಮುಖಿ ಎಂ. ಪಿ. ಪ್ರಕಾಶ್** : ಸಂ. ಸಿಜಿಕೆ, ಕೆ.ವಿ.ನಾಗರಾಜಮೂರ್ತಿ, ಮುಂ. ಭಾರತ ಯಾತ್ರಾ ಕೇಂದ್ರ, ೫೬೬ / ೪, ೭೫ನೇ ಸಿ ಕ್ರಾಸ್, ೬ನೇ ಬ್ಲಾಕ್, ರಾ' ನಗರ, ಬೆಂಗಳೂರು-೧೦, ಪ್ರ.ಮು.೨೦೦೧, ಡೆಮಿ೧/೮, ಪುಟ ೨೬೪, ರೂ. ೧೫೦/-

೧೫. **ಮಿಂಚು** : ಕವನ, ಅಪ್ಪಾಸಾಹೇಬ ಅಲಿಬಾದಿ, ವಿನೂತನ ಪ್ರಕಾಶನ, ಶಾಂತಿನಿಕೇತನ, ಜಯನಗರ, ಎಚ್. ಬಿ. ಸಿ. ಹತ್ತಿರ, ಅಥಣಿ - ೫೯೧ ೩೦೪, ಪ್ರ.ಮು. ೨೦೦೨, ಡೆಮಿ ೧/೮, ಪುಟ ೭೨, ರೂ. ೪೦/-

೧೬. **ಬೆಡಗಿನೆದುರಿನ ಬೆರಗು** : ಲೇಖನ, ಮೋಹನ ನಾಗಮ್ಮನವರ, ಮಹಾಮನೆ ಪ್ರಕಾಶನ, ನವೋದಯ ನಗರ, ಧಾರವಾಡ - ೫೮೦ ೦೦೩, ಪ್ರ. ಮು. ೨೦೦೨, ಡೆಮಿ ೧/೮, ಪುಟ ೨೦೮, ರೂ. ೧೦೦/-

೧೭. **ಹೂವಾಗಿ ನಕ್ಕವರೆ** : ಕವನ, ಗೀತಾ ಚಂದ್ರಶೇಖರ, ಪುಟ ೫೬, ರೂ. ೩೫/-; ೧೮. **ಆರದ ದೀಪದ ಆಸೆ ಹಿಡಿದು** : ಕವನ, ಶಾರದಾ ಮುಳ್ಳೂರ, ಪುಟ ೫೨, ರೂ. ೪೦/-; ೧೯. **ಮೊಹರೆ ಹನುಮಂತರಾಯರು** : ಚರಿತ್ರೆ, ಡಾ. ಬಿ. ಆರ್. ನಾಡಗೌಡ, ಪುಟ ೭೨, ರೂ. ೫೦/-; ೨೦. **ಕತ್ತಲೆ ಕರಗುವ ಮುನ್ನ** : ಕಾದಂಬರಿ, ಸುಶೀಲಾ ಕಮತಗಿ, ಪುಟ ೧೦೪, ರೂ. ೫೦/-; ೨೧. **ಹರಿಹರ ಮಹಾಕವಿಯ ಜಾತಿಭೇದ ವಿರಸನ ರಗಳೆಗಳು** : ಸಂ. ಡಾ. ಗುರುಪಾದ ಮರಿಗುದ್ದಿ, ಪುಟ ೧೫೪, ರೂ. ೬೦/- : ಈ ೫ ಪುಸ್ತಕ ನೆಲೆಪ್ರಕಾಶನ, ಸಿಂದಗಿ - ೫೮೬ ೧೨೮, ಪ್ರ. ಮು. ೨೦೦೧, ಡೆಮಿ ೧ / ೮

೨೨. **ಹವನ** : ಕಾದಂಬರಿ, ಮಲ್ಲಿಕಾರ್ಜುನ ಹಿರೇಮಠ, ಆನಂದಕಂದ ಗ್ರಂಥಮಾಲೆ, ಮಲ್ಲಾಡಿಹಳ್ಳಿ - ೫೭೭ ೫೩೧, ಪ್ರ. ಮು. ೨೦೦೧, ಡೆಮಿ ೧/೮, ಪುಟ ೧೮೦, ರೂ. ೧೦೦/-

೨೩. **ಹುತ್ತ** : ಕಾದಂಬರಿ, ಬಾಳಾಸಾಹೇಬ ಲೋಕಾಪುರ, ಲೋಹಿಯಾ ಪ್ರಕಾಶನ, ಕ್ಷಿತಿಜ, ಕಪ್ಪಗಲ್ಲು ರಸ್ತೆ, ಗಾಂಧಿನಗರ, ಬಳ್ಳಾರಿ - ೫೮೩ ೧೦೩, ಪ್ರ. ಮು. ೨೦೦೨, ಡೆಮಿ ೧/೮, ಪುಟ ೨೦೦, ರೂ. ೭೫/-

ಕಡೀ ಪುಟ : ಸಿದ್ಧಲಿಂಗ ಪಟ್ಟಣಶೆಟ್ಟಿ

ನಾನು ಬಿಟ್ಟೇನಂದರೂ ನನ್ನನ್ನ ಬಿಡವಲ್ಲದೀ ಮಾಯೆ ಅಂತ ಯಾವ ಪುಣ್ಯಾತ್ಮ ಹೇಳಿದ್ನಲ್ಲ ಅವ್ನ ನಾಲಗೀನ ಸರಸ್ವತಿ ನೆಕ್ಕಿರಬೇಕು. ಎದ್ಯಾಗ ಕುಂತ ಗಣಪತಿ ನಕ್ಕಿರಬೇಕು. ತಲೀ ಮ್ಯಾಲ ಶಿವ ಕುಣದಿರಬೇಕು, ಮಯ್ತುಂಬ ಮಲಗಿ ಬ್ರಹ್ಮ ತಣದಿರಬೇಕು. ಯಾಕಂದರ ಮಹಾಮಹಿಮಾಮಯಿ ಮಾಟಗಾತಿ ಮಾಯೆಯನ್ನು ಕುರಿತು ಇಂಥಾ ಬ್ರಹ್ಮಾಸ್ತ್ರಸದೃಶ ಮಾಯಾಸ್ತ್ರವನ್ನ ಉಸುರು-ಶರದಿಂದ ಪ್ರಯೋಗಿಸುವುದು ಸಾಮಾನ್ಯ ಮಾತಲ್ಲ.

ಬ್ರಹ್ಮ ಅನ್ನೂದು ಸೈತ ಒಂದು ಭ್ರಮ ಅಂತ ವಾದಿಸಿದ ಪುಣ್ಯಾತ್ಮರೂ ತಮ್ಮ ಭ್ರಮಾಯಾ ಸೂತ್ರದೊಳಗ ಕಟ್ಟಲ್ಪಟ್ಟು ಯಾವ ಗಿರಿಕಾನನದ ತಪ್ಪಲದಾಗ ಎಂಥೆಂಥಾ ಸಿಹಿ ಕಹಿ ಒಗರು ಖಾರ ಹುಳಿ ಉಪ್ಪು ಸಪ್ಪ ತಪ್ಪಲಾ ಕಸಾಕಡ್ಡಿ ತಿನಕೊಂತ ಬಿದ್ದಾರೋ ಗೊತ್ತಿಲ್ಲ. ಆದರೂ ಈ ಮಾಯಾ ಅನ್ನೂದನ್ನ ನಮನಮಗ ತಿಳದಂಥಾ ಅರ್ಥದಾಗ, ಅಂದರ ನಮನಮಗ ದಕ್ಕಿದ ಅರ್ಥದಾಗ, ಅರ್ಥಾತ್ ನಮ್ಮ ಕಿಸೇದಾಗ ಸಿಕ್ಕಿದಷ್ಟು ರೊಕ್ಕದಾಗ ತಿಳಕೊಳ್ಳೂದರಾಗನ್‌ಅ, ಅಂದರೇನು ಸಿಕ್ಕಷ್ಟು ಪಡಕೊಳ್ಳೂದರಾಗನ್‌ಅ ಈ ಜೀವನ ಮುಗ್ಯಾಕ ಬರತಯ್ತಲ್ಲ, ಇದು ಮಾಯಾ ಅಲ್ಲದ ಇನ್ನೇನ ಇರಬೇಕ ಹೇಳ್ರಿ ?

ಹುಟ್ಟಿಗೆ ಕ್ರಮೇಣ ಸಾವು, ದೇಹಕ್ಕ ಅನ್ನದ ಹಸಿವು, ಬದುಕಿಗೆ ಅನಿತ್ಯ ಉಸಿರು, ಕಣ್ಣಿಗೆ ಬಣ್ಣದ ಹಸಿರು, ಚಲನಕ್ಕ ಚಾಂಚಲ್ಯ, ಹಗಲಿಗೆ ಕತ್ತಲು, ಬಿಸಿಲಿಗೆ ನೆರಳು, ಉಸಿರಿಗೆ ಉರುಲು ಬೆನ್ನ ಹತ್ತಿದ್ಹಂಗ ಮನಸ್ಸಿಗೆ ಹೃದಯಕ್ಕ ಭಾವಕ್ಕ ಅಭಿವ್ಯಕ್ತಿರೂಪೀ ಬ್ರಹ್ಮರಾಕ್ಷಸ ಬೆನ್ಹತ್ತತಾನ. ಇವ್ನಾ ಬೆನ್ನ ಹತ್ತದಿದ್ದರೂ ನಾವ್‌ಅ ಇವ್ನನ ಬೆನ್ನ ಹತ್ತಿ ಬ್ಯಾರೆ ಬ್ಯಾರೆ ರೀತೀಲೆ ನಮ್ಮನ್ನ, ನಮಗ್‌ಅ ತಿಳಿಯದ ಏನೋ ನಮ್ಮೊಳಗಿಂದನ್ನ ಹೊರಗ ಹಾಕ್ಕೊಬೇಕು, ತೋರಸಬೇಕು, ಗಳುಹಬೇಕು, ಹೊಳವಬೇಕು ಅಂತ್ಹೇಳಿ ಅವ್ನನ್ನ ಹುಡಕ್ಯಾಡತಿರತೇವು. ಅದ ಯಾವ ಪುಣ್ಯಾದ್ಲೇನೋ ಅವ್ನ ಲಗೂನ ಸಿಕ್ಕಾ ಅಂದರ ನಮನಮ್ಮ ಶಕ್ತ್ಯಾನುಸಾರ ಹಾಡುಗಾರರಾಗತೇವು, ಕಲ್ಲ ಕಟ್ಯಾವರಾಗತೇವು, ಗೊಂಬೀ ಮೂಡಸತೇವು, ಕಲಾವಿದರು -ಕವಿ - ಸಾಹಿತಿಗಳು ಅಂತ ಆಗತೇವು, ಮಾತಾಡತೇವು, ಹೇಳತೇವು, ಬರೀತೇವು; ಅವ್ನಾ ಸಿಗದಿದ್ದರೂ ಅವ್ನನನ್ನ ಜಪಿಸಿಕೊಂತ ಬ್ರಹ್ಮ ಅಂತ ಬರ್‍ಯಾಕ ಹೋಗಿ ಭ್ರಮಾ ಅಂತ ಬರಕೋತೇವು. ಅದೂ ಆಗದಿದ್ದಾಗ ಇದೇನೋ ಮಾಯಾ ಅಯ್ತಿ, ದೊಡ್ಡ ಅಪಾಯಾ ಅಯ್ತಿ, ನಮಗ ಸಿಗೂವಂಥಾದ್ದಲ್ಲ, ಸುಮ್ಮನ್‌ಅ ಸಿಕ್ಹಂಗ ಮಾಡಿ ನಮ್ಮನ್ನ ಆಟಾ ಆಡಸತಿರತಯ್ತಿ ಅಂತ ನೆವ್ನಾ ಹೇಳಿ ಭ್ರಮಾಧೀನರಾಗಿ ನಮನಮ್ಮ ಆಸಕ್ತಿಗಳ ಸಮಾಧಿಯೊಳಗ ದೀರ್ಘನಿದ್ರಾಲೀನರಾಗಿ ವಿಶ್ರಾಂತಿ ಪಡೀತೇವು. ಈ ವಿಶ್ರಾಂತಿ ಅನ್ನೂದು ಸೈತ ಒಂದು ರೀತಿಯ ಬ್ರಹ್ಮರಾಕ್ಷಸ ಪ್ರಸಾದನ್‌ಅ ಅನ್ನುವ ಅರಿವು ನಮಗಿರೂದುಲ್ಲ. ಅದ್‌ಅ ಭ್ರಮಾ. ಅದ್‌ಅ ಮಾಯಾ. ಅದ್‌ಅ ಕಾಯಾವಾಚಸ್‌ಮನಸಾ ನಮ್ಮನ್ನ ಬೆನ್ನ ಹತ್ತಿ ಬಿಟ್ಟೇನಂದರೂ ಬಿಡಲಾರದ್‌ಅ ಕಾಡುವ + ಕಾಪಾಡುವ ಮಾಯಾ ಅನ್ನುವ ಪ್ರಜ್ಞಾ ನಮಗಿರೂದುಲ್ಲ. ಇಂಥಾ ಅನಿವಾರ್ಯದ ಹೊರಹೊಮ್ಮುವಿಕೆ ಸ್ವತಃ ತನ್ನನ್ನ ತಾ ಹೊರಗ ಹಾಕ್ಕೊಳ್ಳಾಕ ಪ್ರಯತ್ನಪಡತಿರತಯ್ತಿ. ಅದಕ್ಕಾಗಿ ನಮ್ಮಂಥ ಮಾಯಾಜೀವಿಗಳನ್ನ ಹೆಂಗ್ಹಂಗ ಬೇಕೋ ಹಂಗ್ಹಂಗ ಬಳಸಿಕೊಳ್ಳತಿರತಯ್ತಿ. ನೀ ಮಾಯೆಯೊಳಗೋ ನಿನ್ನೊಳಗ ಮಾಯೆಯೋ ಅಂತ ಭಾವಿಸಿದ ಪ್ರಜ್ಞಾವಂತ ಮಂದಿ ಇದಕ್ಕನ್‌ಅ ಅಭಿವ್ಯಕ್ತಿ ಅಂತ ಕರೆದಿರಬಹುದು.

ಸಂಕಲನ : ಸಂಪುಟ ೧, ಸಂಚಿಕೆ ೪ : ೧೪ ಜುಲಾಯಿ ೨೦೦೨

ಸಂಪಾದಕ : ಸಿದ್ಧಲಿಂಗ ಪಟ್ಟಣಶೆಟ್ಟಿ

•

ಕುಂ. ವೀರಭದ್ರಪ್ಪ
ಸಿ. ಎಂ. ನರಸಿಂಹಮೂರ್ತಿ
ಈರಪ್ಪ ಎಂ. ಕಂಬಳಿ
ರಾಘವೇಂದ್ರ ಪಾಟೀಲ / ಶಿರೀಷ ಜೋಶಿ
ಸಂತೇಬೆನ್ನೂರು ಫೈಜ್ನಟ್ರಾಜ್
ಎಚ್. ಎಂ. ನಾಗರಾಜರಾವ್
ಮನು ಬಳಿಗಾರ್
ತಾಳ್ತಜೆ ವಸಂತಕುಮಾರ
ಶಿವಶಂಕರ ಹಿರೇಮಠ
ಅಪ್ಪಾಸಾಹೇಬ ಸನದಿ
ದಿವಸ್ಪತಿ ಹೆಗಡೆ
ಎಫ್. ಅಸದುಲ್ಲಾ ಬೇಗ್
ರಾಜು ಹೆಗಡೆ
ಸುಮಿತ್ರಾ ದುಂಡಪ್ಪ ಕುಂಬಾರ
ನಿಷ್ಠಿ ರುದ್ರಪ್ಪ
ಪಿ. ಜಿ. ಕುಲಕರ್ಣಿ / ಕೃ. ಶಿ. ಹೆಗಡೆ
ಮ. ಕೃ. ಮೇಗಾಡಿ
ರಾಮಚಂದ್ರ ದೇವ
ಸಾಬ
ಜಿ. ಕೆ. ರವೀಂದ್ರಕುಮಾರ್
ಯತ್ನಳ್ಳಿ ಮಂಜು
ಸಿದ್ಧಲಿಂಗ ಪಟ್ಟಣಶೆಟ್ಟಿ
ಲಲಿತಾ ಸಿದ್ಧಬಸವಯ್ಯ, ಎಚ್. ಜಿ. ಸೋಮಶೇಖರರಾವ್,
ಎಸ್. ಈಶ್ವರಪ್ಪ, ಜೆ. ಜೆ. ಹರಿಜಿತ್,
ಶಶಿಕಲಾ ವೀರಯ್ಯಸ್ವಾಮಿ, ಗುರುಪಾದ ಮರಿಗುದ್ದಿ,
ಜಿ. ಎನ್. ರಂಗನಾಥರಾವ್, ಕನಕ ಹಾ. ಮ.

•

ಸಂಕಲನ ಪ್ರಕಾಶನ

ಬೆಳಗು, ಆನಂದಾಶ್ರಮ ರಸ್ತೆ, ಗದಗ - ೫೮೨ ೧೦೧